ಕಲ್ಪನಾ ಗ್ರಂಥಮಾಲೆ — ೫



ಶಿವನಬುಟ್ಟಿ

●

ಹಿರೇಮಲ್ಲೂರ ಈಶ್ವರನ್

...ಥಪ್ರಕಾಶನ ಸಮಿತಿ
ಹುಬ್ಬಳ್ಳಿ

ಅಮೃತಂಬ೪

೩.೩.೬೨

೨ನು ಕೆರೆಂಬ ಕೃತಿಗಳ
ಸಂಗ್ರಹಣ । ೧೯೬೧ ।
ಸಂಗ್ರಹಗಳು

ಚಿರಂತನಾಶಿಗಳಿ

ಕಲ್ಪನಾ ಗ್ರಂಥಮಾಲಾ-೫

ಶಿವನ ಬುಟ್ಟಿ

ಹಿರೇಮಲ್ಲೂರ ಈಶ್ವರನ್

ಕಲ್ಪನಾ
ಗ್ರಂಥ ಪ್ರಕಾಶನ ಸಮಿತಿ, ಹುಬ್ಬಳ್ಳಿ

೧೯೪೯

ಬೆಲೆ : ೧-೮-೦

ಕಲ್ಪನಾ ಗ್ರಂಥ ಮಾಲೆ
ಹುಬ್ಬಳ್ಳಿ

ಮುದ್ರಕರು :
ಶಿ. ಬ. ಹರಿಹರ,
ತೋಂಟದಾರ್ಯ ಪ್ರೆಸ್,
ಧಾರವಾಡ

ಪ್ರಕಾಶಕರು :
ಎಚ್. ಎಫ್. ಕಟ್ಟೀಮನಿ
ನಂದನಿವಾಸ, ಹುಬ್ಬಳ್ಳಿ
(ಕಲ್ಪನಾ ಗ್ರಂಥ ಮಾಲೆಯ ಪರವಾಗಿ)

ಸೇಡಬಾಳದ

ಮಿರ್ಜಿ ಅಣ್ಣಾರಾಯರಿಗೆ

ತಾಯಿ ಕೊಟ್ಟ ಹರಕೆ

ಹಸುಗೂಸು ಹುಟ್ಟಲಿ ಹೊಸಪ್ಯಾಟಿ ಕಟ್ಟಲಿ
ರಸಬಾಳಿ ಕಬ್ಬು ಬೆಳೆಯಲಿ ನಮ್ಮೂರ
ಶಿವನ ಬುಟ್ಟಿಯು ಮೆರೆಯಲಿ

ಮಲ್ಲೂರು ಬಿತ್ತಲಿ ಮಲ್ಲೂರು ಬೆಳೆಯಲಿ
ಮಲ್ಲೂರ ಗುಡ್ಡ ಚಿಗಿಯಲಿ ಶಿವರಾಯ
ಮಲ್ಲೂರ ಮಕ್ಕಳ ಮ್ಯಾಲ ದಯವಿರಲಿ

ಕಲ್ಪನಾಗೆ ಸ್ವಾಗತ !

"....ಸಾಹಿತ್ಯವು ಸಂಸ್ಕೃತಿಯ ಕಣ್ಣು ಕಣ್ಣು ಹೊರಗಡೆಯ ಲೋಕವನ್ನು ಮನಸ್ಸಿಗೆ ಕಾಣಿಸುವುದಲ್ಲದೆ ಮನಸ್ಸಿನ ಜಗತ್ತನ್ನು ಹೊರಗಡೆಗೆ ಇಂಗಿತವಾಗಿ ತೋರುತ್ತದೆ. ಮುಖವು ಹೃದಯಕ್ಕೆ ಕನ್ನಡಿಯಾದರೆ ಕಣ್ಣು ಮುಖಕ್ಕೆ ಪ್ರಾಣವಷ್ಟೇ! ವ್ಯಕ್ತಿಯ ಓಜಸ್ಸಿನ ಪ್ರಕಾಶನಕ್ಕೆ ಕಿಟಕಿಯಲ್ಲವೇ ಕಣ್ಣು? ಆ ಕಣ್ಣಿನ ಕಾರ್ಯ ಸಾಂಸ್ಕೃತಿಕ ರಂಗದಲ್ಲಿ ಕಾರ್ಯಮಾಡುವ ಹೆಗ್ಗುರುತೆಂದು ನಾವು ಭಾವಿಸುವುದಾದರೆ ಕಲ್ಪನೆಯ ಪ್ರಕಟನೆಗಳು ನಾಡಿನ ಸಂಸ್ಕೃತಿಯ ದ್ಯೋತಕವಾಗಿ ಬೆಳಗಬಲ್ಲ ಜೀವಂತ ಸಾಹಿತ್ಯ !

ದಿನ ನಿತ್ಯವೂ ನಡೆಯುವ ಘಟನೆಗಳನ್ನು ಯಥಾ ರೀತಿ ಚಿತ್ರಿಸಲು ಪ್ರಯತ್ನಿಸಿ ತಮ್ಮ ಕಲ್ಪನಾತ್ಮಕ ಸಾಹಿತ್ಯದಲ್ಲಿ ಮಾನವನ ಅಂತರ್ಜೀವನದ ಹೆಚ್ಚು ಹೆಚ್ಚಿನ ಪರಿಚಯ ಮಾಡಿಸುವ ಪಾತ್ರ ಪರಿಪೋಷಣೆಯಲ್ಲಿ ಕಲ್ಪನಾ ಗ್ರಂಥಮಾಲೆಯ ಲೇಖಕ ವೃಂದವು ಅತ್ಯಂತ ಯಶಸ್ವಿಯಾಗಿದೆಯೆಂದು ಹೇಳಿದರೆ ವಿಮರ್ಶೆಯಲ್ಲಿ ಅಭಿಮಾನಕ್ಕೆಡೆಗೊಡುವವರು ನಾವಲ್ಲವೆಂಬುದನ್ನು ನೀವು ನಂಬುವಿರಷ್ಟೇ?

'ವಿಶ್ವಕರ್ನಾಟಕ ಎಲ್ಲ ಸುಸಂಸ್ಕೃತಿಯ ಸಂಗ್ರಹಸ್ಥಾನ ಆಗಬೇಕೆಂಬ' ಘನ ಉದ್ದೇಶವಿಟ್ಟುಕೊಂಡು ಹೊರಟಿರುವ 'ಕಲ್ಪನಾ' ಪ್ರಕಟನೆಗಳನ್ನು ಸಹೃದಯರು ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಿಸಿ ಬರಮಾಡಿಕೊಳ್ಳಲಿ. ಹೊಸ ಮನ್ವಂತರಕ್ಕೆ ತಕ್ಕಂತಹ ಹೊಸ ಸಾಹಿತ್ಯವನ್ನು, ಸಾಹಿತ್ಯದ ವಿವಿಧ ರೀತಿಯ ಗ್ರಂಥಗಳನ್ನು ಬರೆದು, ಬಲ್ಲವರಿಂದ ಬರೆದು ತರಿಸಿ ನಾಡಿಗೆ ನೀಡಲು 'ಕಲ್ಪನಾ' ಮುಖಾಂತರ ಮುಂದಾದ ಪ್ರೊ. ಈಶ್ವರನ್‌ರಿಗೆ ಗೆಲುವಾಗಲಿ! ಅಂತರಂಗ ಬಹಿರಂಗ ಸೌಂದರ್ಯಗಳಿಂದೊಡಗೂಡಿದ ಅವರ ಕಲ್ಪನಾಗೆ ಸರ್ವತೋಮುಖ ಗೆಲುವಾಗಲಿ!...."

— ಉರವಕೊಂಡದ ಶ್ರೀ ಜಗದ್ಗುರುಗಳವರಿಂದ

ಮುನ್ನುಡಿ

ಪ್ರೊ. ಹಿರೇಮಲ್ಲೂರ ಈಶ್ವರನ್‌ರವರು ತಮ್ಮ 'ಶಿವನಬುಟ್ಟಿ'ಗೆ ಮುನ್ನುಡಿಯನ್ನು ಬರೆದುಕೊಡಬೇಕೆಂದು ಕೇಳಿದರು. ಆ ಮುನ್ನುಡಿ ಮೂರು ದಿನಗಳಲ್ಲಿಯೇ ಸಿದ್ಧವಾಗಬೇಕೆಂದು ಕಾಲಾವಧಿಯನ್ನು ಹಾಕಿ ನನಗೆ ಅನ್ಯಾಯ ಮಾಡಿದರು. ತರುಣರು ಅನ್ಯಾಯ ಮಾಡದಿದ್ದರೆ ನನ್ನಂಥ ಮುಪ್ಪಿನವರು ಅನ್ಯಾಯ ಮಾಡುತ್ತಾರೆಯೇ? ತರುಣರ ರಕ್ತ ಸಳಮಳ ಕುದಿಯುತ್ತಿರುತ್ತದೆ. ಆ ಕುದಿಯುವ ರಕ್ತದಿಂದ ಉತ್ಸಾಹ ಉಕ್ಕುತ್ತಿರುತ್ತದೆ. ಉತ್ಸಾಹದ ಜೊತೆಗೆ ವಿಶಾಲವಾದ ಮನಸ್ಸು ತಾನು ಪಡೆದ ಅನುಭವವನ್ನು ಜನರೆದುರು ಇಡಬೇಕೆಂದು ಹಾತೊರೆಯುತ್ತದೆ. ಆತುರತೆಯ ಪರಿಣಾಮವಾಗಿ ಇಂತಹ ಹೊತ್ತಿಗೆಗಳು ಬೆಳಕು ಕಾಣುತ್ತವೆ. ಇನ್ನೂ ಹೆಚ್ಚು ಹೊತ್ತಿಗೆಗಳನ್ನು ಜನರ ಕೈಯಲ್ಲಿರಿಸಬೇಕೆಂದೂ ಹಂಬಲ. ಇಂತಹ ಸಂದರ್ಭದಲ್ಲಿ ಅವರು ನನಗೆ ಅನ್ಯಾಯ ಮಾಡಿದ್ದರೆ ಅದು ಅವರ ಆತ್ಮ ವಿಶ್ವಾಸ, ನನ್ನ ಮೇಲಿನ ಮಮತೆಯೆಂದು ನಾನು ಭಾವಿಸುತ್ತೇನೆ.

'ಶಿವನಬುಟ್ಟಿ' ಪುಟ್ಟ ಪ್ರಬಂಧಗಳ ಸಂಗ್ರಹ. ಇದರಲ್ಲಿ ಇಪ್ಪತ್ತಾರು ಪ್ರಬಂಧಗಳಿವೆ. ಅವುಗಳ ತಲೆಕಟ್ಟುಗಳನ್ನು ನೋಡಿದರೆ ಅವು ಫ್ರಾನ್ಸಿಸ್ ಬೇಕನ್‌ನ ಪ್ರಬಂಧಗಳ ಭಾಷಾಂತರವೋ ಎಂಬ ಸಂದೇಹ ಉಂಟಾಗುತ್ತದೆ. ಪುಸ್ತಕ ಎಂಬ ಪ್ರಬಂಧದಲ್ಲಿ ಬೇಕನ್‌ನ ಹೆಸರೂ ಬಂದಿದೆ. ಓದಿ ನೋಡಿದ ಮೇಲೆ ಮಾತ್ರ ಅವೆರಡರಲ್ಲಿ ಯಾವ ಸಂಬಂಧವೂ ಇಲ್ಲೆಂದು ಮನವರಿಕೆಯಾಗುವುದು. ಕನ್ನಡದಲ್ಲಿ ಪುಟ್ಟ ಪ್ರಬಂಧಗಳನ್ನು ಇತ್ತೀಚೆಗೆ ಬರೆಯ ಹತ್ತಿದ್ದಾರೆ. ಇಂತಹ ಪ್ರಬಂಧಗಳನ್ನು ಬರೆಯುವುದು ಅಷ್ಟು ಸುಲಭವಲ್ಲ. ಸಣ್ಣ ವಾಕ್ಯಗಳನ್ನು ರಚಿಸುವುದು, ಸಣ್ಣ ಕತೆಗಳನ್ನು ಶುದ್ಧವಾಗಿ ಬರೆಯುವುದು ಬಹಳ ದುಸ್ತರವೆಂದು ಹೇಳುತ್ತಾರೆ. ಅದರಂತೆ ಪುಟ್ಟ ಪ್ರಬಂಧದ ಸ್ಥಿತಿ. ಅದರಲ್ಲಿ ತಂತ್ರವಿದೆಯಂತಲ್ಲ. ಆದರೆ ವಿಷಯ ಹಿಡಿತದಲ್ಲಿರಬೇಕು, ಭಾಷೆ ಅನುಕೂಲವಾಗಿರಬೇಕು, ಅನುಭವ ವಿಷಯಕ್ಕನುಗುಣವಾಗಿ ತುಂಬಿದ ಹೊಳೆಯಂತೆ ಶಾಂತವಾಗಿ ಹರಿಯ

ಬೇಕು, ಭಾವಾವೇಶಕ್ಕೊಳಗಾಗದೆ ತಾಳ್ಮೆಯನ್ನಿರಿಸಿಕೊಳ್ಳಬೇಕು, ವಿವೇಚನೆಯಲ್ಲಿ ಸಮತೂಕವಿರಬೇಕು. ಈ ಎಲ್ಲ ಗುಣಗಳು ಪ್ರಸಿದ್ಧವಾದ ಎಲ್ಲ ಪ್ರಬಂಧಗಳಲ್ಲಿ ದೊರೆಯುತ್ತವೆಯೆಂದು ಹೇಳಲಾಗುವುದಿಲ್ಲ. ಆದರೂ ಅವುಗಳಲ್ಲಿ ಕೆಲವುಗಳನ್ನು ಒಳಗೊಂಡ ಪ್ರಬಂಧಗಳು ಅಂದವಾಗಿ ಓದುಗರ ಮನಸ್ಸನ್ನು ಆಕರ್ಷಿಸುವುದೂ ಉಂಟು.

ಈ ಪುಸ್ತಕದಲ್ಲಿ ಅಂದವಾದ ಪ್ರಬಂಧಗಳ ಸಂಖ್ಯೆ ಸುಮಾರು ಇಪ್ಪತ್ತೆರಡು. ಅವುಗಳಲ್ಲಿ ಅನುಭವ ತುಂಬಾ ತುಂಬಿದೆ. ಒಂದು ಪ್ರಬಂಧವು ನಿಜವಾಗಿ ಪ್ರಬಂಧವಾಗಿರದೆ ವಚನಕಾರರ ಅನುಭಾವದ ವಚನಗಳಂತಿದೆ. ಮತ್ತೊಂದರಲ್ಲಿ ಈಶ್ವರನ್ನರವರ ಮಾನಸಿಕ ದುರಂತ್ವದ ಅನುಭವವಿದೆ. ಅಂತಿರುವಾಗಲೂ ಪ್ರಬಂಧಗಳಲ್ಲಿ ತುಂಬಾ ಸೊಗಸು ಸೂಸುತ್ತಿದೆ. ಭಾಷೆಗೆ ಇನ್ನೂ ಒಂದಿಷ್ಟು ಮೆರಗು ಹಾಕಿದ್ದರೆ ಒಳ್ಳೆಯದಿತ್ತು. ಈಶ್ವರನ್ನರವರು ಮಾಡುತ್ತಿದ್ದ ಸೇವೆ ಈಗ ದ್ವಿಮುಖವಾಯಿತು. ಅವರಲ್ಲಿದ್ದ ಕಾವ್ಯಶಕ್ತಿ ಆ ಆ ಪ್ರಬಂಧಗಳಲ್ಲಿ ಒಡಮೂಡುತ್ತ ಬಂದಿದೆ. ಅಲ್ಲಲ್ಲಿ ನಾಟಕಾಂಗಗಳು ತೋರುತ್ತಿವೆ. ವಿಮರ್ಶಾ ಶಕ್ತಿ ತುಂಬಿ ತುಳುಕುತ್ತಿದೆ. ಇವೈದೂ ಗುಣಗಳು ಅವರ ಸಾಹಿತ್ಯ ಸೇವೆಯ ಪಂಚ ಮುಖಗಳಾಗಲಿ; ಅವರ ಸಾಹಿತ್ಯ ಎಲ್ಲರಿಗೂ ಬೇಕಾಗಲಿ; ಅವರ ಸಾಹಿತ್ಯ ಚಿರಂತನವಾಗಲಿ; ಅವರ ಗ್ರಂಥಗಳು ದಿನದಿನವೂ ಕನ್ನಡಿಗರಿಗೆ ವಿಚಾರ ಪ್ರಚೋದಕಗಳಾಗಲಿ.

ಬೆಳಗಾವಿ
೨೫--೨-೧೯೪೯ } **ಕೆ. ಜಿ. ಕುಂದಣಗಾರ**

ಅರಿಕೆ

ಪ್ರಿಯ ಸುಹೃದ,

ಏಳು ವರುಷಗಳ ಹಿಂದೆ ಕಾರ್ತಿಕ ಮಾಸದ ನಸುಗತ್ತಲಲ್ಲಿ ಅಡಿವೆಪ್ಪನ ಹೊಲದಾಟಿ ಅಯ್ಯನ ಕೆರೆ ಹಿಂದಕ್ಕೆ ಸರಿಸಿ ಸಿದ್ದನ ಗುಡ್ಡದ ಓವರಿಯಿಂದ ಇಳಿಯುತ್ತ ನಮ್ಮೂರ ಕಡೆಗೆ ಮೊಗಮಾಡಿಕೊಂಡು ಹೊರಟ ನೀವು ಆ ಸಣ್ಣ ಹಳ್ಳಿಯ ಮನೆಗಳ ಕಡೆಗಷ್ಟು ನೋಡಿದ್ದರೆ ನಿಮ್ಮ ಹೆಜ್ಜೆ ಮುಂದಕ್ಕೂ ಬೀಳುತ್ತಿರಲಿಲ್ಲ, ಹಿಂದಕ್ಕೂ ಸರಿಯುತ್ತಿರಲಿಲ್ಲ. ಇದಿರಿನಲ್ಲಿ ಕಾಣುವ ಮುಗ್ಧ ಸೌಂದರ್ಯ ನಿಮ್ಮನ್ನು ಮಂತ್ರ ಮುಗ್ಧರನ್ನಾಗಿ ಮಾಡಿ ನಿಂತಲ್ಲಿಯೆ ನಿಲ್ಲಿಸಿ ಬಿಡುತ್ತಿತ್ತು. ಮನೆಗಳ ಅಂಗಳದಲ್ಲೂ ಅಲ್ಲ, ಮನೆಗಳ ಕುಂಬಿಯ ಮೇಲೂ ಅಲ್ಲ, ಆಗಸದಂತರದಲ್ಲಿ ತೇಲಾಡುವ ಬಣ್ಣ ಬಣ್ಣದ ರಂಗು ರಂಗಿನ ಶಿವನಬುಟ್ಟಿಗಳನ್ನು ಕಂಡು ನಿಮ್ಮ ಮನಸ್ಸು ಕುಣಿಯುವುದು, ನೋಟ ಅರಳುವುದು, ಬಣ್ಣಿಸ ಬಾರದ ಸುಖ ಸಂಚಾರ ಮೈಯಲ್ಲೆಲ್ಲ ತುಳುಕಾಡಿದಂತಾಗುವುದು. ಶಿವನ ಬುಟ್ಟಿಗಳಲ್ಲೂ ಇರುವ ಸ್ಪರ್ಧೆ, ಒಂದರ ಮೇಲೊಂದು ಏರಿ ಏರಿ ಆಗಸವನ್ನು ಮುಟ್ಟಬೇಕೆಂಬ ಹಿರಿಯಾಸೆಯನ್ನು ತೊಟ್ಟು ಪಂದ್ಯಾಟನಕ್ಕಿಳಿದ ನಮ್ಮ ಊರಿನ ಶಿವನಬುಟ್ಟಿಗಳ ಹಂಬಲನ್ನು ಕಂಡ ನೀವು ಮಲ್ಲೂರಿನ ಮಕ್ಕಳನ್ನು ಕುರಿತು ಹೊಗಳಿಕೆಯ ಮಾತೊಂದನ್ನು ಆಡುವಿರಿ!

ಏಳು ವರುಷಗಳ ಹಿಂದೆ ನಡೆದ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನವನ್ನು ಪಡೆದವನೆ ನಮ್ಮ ಶಿವು! ಎಲ್ಲಾ ಮನೆಗಳ ಹುಡುಗರು ಏರಿಸಿದ ಶಿವನ ಬುಟ್ಟಿಯ ಎತ್ತರವನ್ನೂ ಮೀರಿ ನಮ್ಮ ಶಿವನಬುಟ್ಟಿ ನಿಂತಿರುವುದನ್ನು ನೀವು ಸಿದ್ದನಗುಡ್ಡದ ಓವರಿಯ ಮೇಲೆಯೇ ನಿಂತು ತೀರ್ಪು ಕೊಡಬಲ್ಲಿರಿ. ಹಸಿರು ಹಳದಿ ಕೆಂಪು ನೀಲಿ ಗುಲಾಬಿ ಜಾಂಬಳಿ ಕೇಸರಿ-ಸಪ್ತ ವರ್ಣದ ಕಾಮನ ಬಿಲ್ಲು ಅಂತರಿಕ್ಷದಲ್ಲಿ ಅದು ಹೇಗೆ ಮೂಡಿ ಬಂದಿತು? ಸೂರ್ಯ ಆಗಸದಿಂದ ಇಳಿದು ಬಂದನೇ?

ಚಂದ್ರನು ನೆಲದಿಂದುದಯಿಸಿದನೇ? ನಿಮ್ಮ ಮನಸ್ಸನ್ನೆ ನೀವು ಇಂತು ಚಕಿತರಾಗಿ ಕೇಳುವಿರಿ. ಅಂತಹದೇನೂ ಸೋಜಿಗವಿಲ್ಲ ಈ ಮಾತಿನಲ್ಲಿ. ತಾಯಿಯನ್ನು ಕಾಡಿ, ಮನೆಯವರನ್ನೆಲ್ಲ ಅತ್ತು ಕರೆದು ಬೇಡಿ ಹಣ ಪಡೆದು ಕೊಂಡು ಬಣ್ಣಬಣ್ಣದ ಕಾಗದಗಳನ್ನು ತಂದು ಬಿದಿರು ಸೀಳಿ ಶಿವನ ಹೆಸರಿನಲ್ಲಿ ಬುಟ್ಟಿಯೊಂದನ್ನು ಸಿದ್ಧಪಡಿಸಿ ಒಳಗೆ ಹಣತೆಯೊಂದನ್ನಿರಿಸಿ 'ಹರಹರ ಮಹದೇವ' ಎಂದೆನ್ನುತ್ತ ನಮ್ಮ ಶಿವನೇ ಅದನ್ನೇರಿಸಿದ. ಆ ವರುಷ ಅವನು ಏರಿಸಿದ ಶಿವನ ಬುಟ್ಟಿಗೇ ಬಹುಮಾನ ದೊರೆತದ್ದು!

ವರುಷ ವರುಷಕೊಮ್ಮೆ ನಮ್ಮ ಊರಿಗೆ ಕಾರ್ತಿಕ ಮಾಸ ಬರುತ್ತದೆ. ಪ್ರತಿ ಸಲವೂ ಓಣಿಯ ಹುಡುಗರೆಲ್ಲ ಕೂಡಿ ಸ್ಪರ್ಧೆಗೆ ನಿಲ್ಲುತ್ತಾರೆ. ಯಾರ ಶಿವನ ಬುಟ್ಟಿ ಸುಂದರವಾಗಿರುತ್ತದೆಯೊ, ಯಾರ ಶಿವನ ಬುಟ್ಟಿ ಮೇಲೆತ್ತರಕ್ಕೆ ಹೋಗಿ ರಾತ್ರಿಯೆಲ್ಲವೂ ಪ್ರಕಾಶವಾಗಿ ಉರಿಯುತ್ತದೆಯೋ ಅವರಿಗೇ ಮೊದಲನೆಯ ಬಹುಮಾನ! ಅಂತೂ ಯಾರೊಬ್ಬರಿಗಾದರೂ ಆ ಬಹುಮಾನ ಹೋಗಲೇಬೇಕಲ್ಲ! ಯಾರು ಯಾರು ಅಂತಹ ಬಹುಮಾನವನ್ನು ಪಡೆಯುತ್ತಾರೊ ಅವರು ಆ ಬಹುಮಾನವನ್ನು ಸ್ವೀಕರಿಸುವ ಮುನ್ನ ನಮ್ಮ ಶಿವನ ಹೆಸರು ನೆನೆದು ಅವನ ನೆನಪಿಗೊಂದು ಹನಿ ಕಂಬನಿ ಸುರಿಸಿ ತನ್ನ ಪಾಲಿನ ಇನಾಮನ್ನು ಸ್ವೀಕರಿಸುತ್ತಾರೆ! ಆ ಕಾಲದಲ್ಲಿ ಹುಡುಗರೆಲ್ಲ ಕೂಡಿ ಶಿವನು ಒಂದೊಮ್ಮೆ ಮೂರ ಎತ್ತರದಲ್ಲಿ ತೇಲಿಬಿಟ್ಟ ಶಿವನ ಬುಟ್ಟಿಯನ್ನು ಕುರಿತು ನೂರೊಂದು ಮಾತನಾಡಿ ತಮ್ಮ ಮನದ ನೋವನ್ನು ಹಗುರು ಮಾಡಿಕೊಳ್ಳುತ್ತಾರೆ!

ಶಿವನು ತೀರಿ ಹೋದ ಮೇಲೆ ಪುನಃ ನಾವು ಬದುಕನ್ನು ಅಣಕಿಸಿಲ್ಲ. ಶಿವನಬುಟ್ಟಿಯನ್ನು ಏರಿಸುವವನನ್ನೇ ನಾವು ಕಳೆದುಕೊಂಡು ಹೋದಮೇಲೆ ನಾವು ನಮ್ಮ ಮನೆಯ ಮುಂದೆ ಶಿವನ ಬುಟ್ಟಿಯನ್ನೇ ಹಚ್ಚಲಿಲ್ಲ. ಸಣ್ಣ ಹಣತೆಯೊಂದನ್ನು ಕುಂಬಾರ ಮಲ್ಲಪ್ಪನ ಮನೆಯಿಂದ ತಂದು ಔಡಲ ಎಣ್ಣೆಯನ್ನು ಹಾಕಿ ಬತ್ತಿಯನ್ನು ಚಾಚಿ ಮನೆಯ ಒಳಗೂ ಮನೆಯ ಹೊರಗೂ ಬೆಳಕು ಕೊಡುವಂತಹ ಹಣತೆಯೊಂದನ್ನು ಹಚ್ಚಿ ನಾವು 'ಅಳುನುಂಗಿ' ನಗುತ್ತೇವೆ.

ಈ ಸಾರೆ ನನ್ನ ಪಾಲಿಗೆ ನಮ್ಮೂರಿನ ಕಾರ್ತಿಕ ಮಾಸದ

ಸಂಭ್ರಮವಿಲ್ಲ. ಊರನ್ನು ಬಿಟ್ಟು ದೂರದಲ್ಲಿ ನೆಲಸಿದ ನನ್ನ ಮನಸ್ಸು ಜಾತ್ರೆಯ ಆ ಸ್ಥಳದಲ್ಲಿ ಕುಳಿತು ಏನೇನೋ ಹುಡುಕುತ್ತಿತ್ತು. ಕಣ್ಣಿನ ಒಳಗಡೆಯಲ್ಲಿ ಮಲ್ಲೂರಿನ ಎಳೆಯ ಬಾಲಕರೇ ಬಂದು ನಿಂತು 'ಅಣ್ಣಾ, ಬಾ. ಶಿವನಬುಟ್ಟಿಯನ್ನೇರಿಸೋಣ' ಎಂದು ಕೈ ಹಿಡಿ ಕರೆದಂತೆಯೂ, ಹೊರಗಡೆಯಲ್ಲಿ ಶಿವನು ಬಂದು 'ಅಣ್ಣಾ, ಯಾಕೆ ಈ ಚಿಂತೆ! ಜನನ ಮರಣ ಯಾರಿಗೂ ತಪ್ಪಿದ್ದಲ್ಲ. ಸರಲ ಮನಸ್ಸು, ವಿಶಾಲ ಹೃದಯ. ನಿರ್ಮಲ ಚಾರಿತ್ರ್ಯವನ್ನಷ್ಟು ಕಾಯ್ದುಕೊಂಡು ತಾನೂ ನಕ್ಕು, ಇತರರನ್ನೂ ನಗಿಸಿ ನಗುನಗುತ್ತ ಹೊರಟು ಬರುವುದರಲ್ಲಿಯೇ ಬಾಳಿನ ಉತ್ಕರ್ಷವಿದೆ. ಈ ದುಃಖವನ್ನು ನನ್ನನ್ನು ಸಂತೈಸುವುದಕ್ಕಾದರೂ ಬಿಟ್ಟು ಬಿಡು' ಎಂದು ಒಂದೇ ಸವನೆ ಹೇಳಿದಂತೆಯೂ ಆಗುತ್ತಿತ್ತು. ಮನಸ್ಸಿನ ಪರದೆಯ ಮೇಲೊಮ್ಮೆ ಓಣಿಯ ಬಾಲಕರೆಲ್ಲ ಒಂದು ಗೂಡಿ ಬಂದು 'ಶಿವ ಶಿವ ಮಹಾದೇವ' ಎಂದು ಕೂಗುತ್ತ ಶಿವನ ಬುಟ್ಟಿಯನ್ನು ಏರಿಸಿದಂತೆಯೂ, ಇನ್ನೊಮ್ಮೆ ಅವರು ಏರಿಸಿದ ಶಿವನ ಬುಟ್ಟಿಯು ಹರಿದು ಎಣ್ಣೆ ಸೋರಿಯಾಗಿ ಕಾಗದಕ್ಕೆ ಬೆಂಕಿ ಹತ್ತಿ ಉರಿಯುತ್ತಿದ್ದಂತೆಯೂ ಆಗುತ್ತಿತ್ತು! ನನ್ನ ಮನಸ್ಸಿಗೆ ಏನಾದರೂ ನೆಮ್ಮದಿ ದೊರೆಯಲಿಲ್ಲ.

ನಮ್ಮ ಶಿವನ ಹೆಸರಿನಲ್ಲಿ ಈ 'ಶಿವನ ಬುಟ್ಟಿ' ಕಟ್ಟಿದೆ. ಇಪ್ಪತ್ತಾರು ದಿನವೂ ಬಾಳ ದೇಗುಲದಲ್ಲಿ ನಂದಾದೀವಿಗೆ ಮುಡಿಸಿದೆ. ಆತ್ಮವೆ ಪ್ರಣತಿ. ಅನುಭವವೆ ತೈಲ. ಹಿರಿಯರ ಅಮೃತ ವಾಣಿಯೆ ಬತ್ತಿ. ನಾನು ಬರೀ ದೀಪ ಹಚ್ಚಿದವನು. ಇಲ್ಲಿ ನನಗೆ ಒಂದೇ ಒಂದು ಆಸೆ. ಬಾಲಕರ ಮನಸ್ಸು ಅರಳಬೇಕು, ಅವರ ಚಾರಿತ್ರ್ಯ, ದರ್ಶನ, ಜ್ಞಾನ ಬೆಳಗಬೇಕು. ಇಂತ ಹೊಂದು ಬಯಕೆಯನ್ನಿಟ್ಟುಕೊಂಡ ನಾನು ಬಲ್ಲವರಿಂದ ಒಂದು ಮಾತು ಕಲಿತೆ. ಲೋಕದ ನಡತೆಯಿಂದೊಂದು ಮಾತು ಕಲಿತೆ. ನನ್ನ ಅನುಭವಕ್ಕೆ ಬಂದುದನ್ನೆಲ್ಲ ಬಚ್ಚಿಟ್ಟುಕೊಳ್ಳದೆ ಇಲ್ಲಿ ಬಯಲಿಗಿಟ್ಟಿದೇನೆ.

ಸ್ಪರ್ಧೆಗಾಗಿ ಈ 'ಶಿವನಬುಟ್ಟಿ'ಯನ್ನು ನಾನು ನಿಮ್ಮ ಮುಂದೆ ಇರಿಸುತ್ತಿಲ್ಲ. ಯಾವ ರಂಗದಲ್ಲೂ ಸ್ಪರ್ಧೆಗಾರನಾಗಿ ನಿಲ್ಲುವ ಆಸೆ ನನಗೆ ಇಲ್ಲವೇ ಇಲ್ಲ. ಸೋತವರನ್ನು ನೋಡುತ್ತೇನೆ, ಗೆಲಿವವರನ್ನು ನೋಡುತ್ತಿದ್ದೇನೆ. ಸೋಲು ಗೆಲವುಗಳೂ, ಮಾನಾಪಮಾನಗಳೂ

ಕ್ಷಣಿಕವೆಂಬರಿಕೆ ಚಣ ಚಣಕ್ಕೂ ನನಗಾಗುತ್ತಿದೆ. ನನ್ನ ಕಣ್ ಮುಂದೆ ಬಾಲಕರೇ ಬಂದು ನಿಂತಿದ್ದಾರೆ. 'ಎನಗಿಂತ ಕಿರಿಯರಿಲ್ಲ' ಎಂಬ ಮಾತನ್ನು ಅವರ ಸಮ್ಮುಖದಲ್ಲಿಯೇ ನುಡಿದು ಈ 'ಶಿವನಬುಟ್ಟಿ' ಯನ್ನು ಅವರ ಕೈಗೆ ಕೊಡುತ್ತಿದ್ದೇನೆ. ನಾನು ಇಲ್ಲಿ ಹಣತೆಯನ್ನು ಹಚ್ಚಿದೇನೆ. ಅದು ನಿಮಗೆ ಸರಿಯಾದ ದಾರಿಯನ್ನು ತೋರಿದರೆ ಸರಿ. ಇಲ್ಲವಾದರೆ ದಾರಿಯನ್ನು ನಾನೇ ತಪ್ಪಿದ ಬಳಿಕ ಇನ್ನೇನು ಮಾಡುವುದು ?

ಪ್ರೊ. ಕೆ. ಜಿ. ಕುಂದಣಗಾರರು ಮುನ್ನುಡಿಯನ್ನು ಬರೆದು, ಶಿವನಬುಟ್ಟಿಯ ಬೆಳಕು ಆರದಿರಲೆಂದು ಹರಕೆ ಕೊಟ್ಟಿದಾರೆ. ನನ್ನ ಕಾಲೇಜಿನ ವಿದ್ಯಾರ್ಥಿ ಜೀವನದಲ್ಲಿ ದೊರಕಿದ ಕನ್ನಡದ ಗುರುಗಳು ಅವರು. ಗುರುವನ್ನು ಹುಡುಕುತ್ತಿದ್ದಾಗ ಅವರು ಸಿಗಲಿಲ್ಲ. ಅವರೆ ನನ್ನನ್ನು ಗುರುತಿಸಿ ಕೈ ಮಾಡಿ ಕರೆದು ದಾರಿ ತೋರಿದರು. ಪ್ರೊ. ಕುಂದಣಗಾರರು ನನಗೊಬ್ಬನಿಗೆ ಅಷ್ಟೇಅಲ್ಲ; ನಮ್ಮ ಧಾರವಾಡ ಕರ್ನಾಟಕದ ಕನ್ನಡ ವಿದ್ಯಾರ್ಥಿ ವೃಂದದ ಪಾಲಿನ "ಶ್ರೀ" ಅವರು. ಇಂತಹ ಸಿರಿಗೆ ನಾವು ವಿದ್ಯಾರ್ಥಿಗಳು ಏನು ಗುರುಭಕ್ತಿಯನ್ನಾಗಿ ಅರ್ಪಿಸುವುದು ? ಒಂದು ಮುನ್ನುಡಿಯೊ, ಒಂದು ಪುಸ್ತಕದ ಕಾಣ್ಕೆಯೊ! ಪ್ರೊ. ಕುಂದಣಗಾರರವರಿಗೆ ಅದೇ ಹೆಮ್ಮೆ! ನಮಗೆ ಅದೇ ಸುಖ !

ಶ್ರೀ. ಎಸ್. ಎಫ್. ಕಟ್ಟೀಮನಿಯವರು ಪುಸ್ತಕ ಪ್ರಕಾಶನ ಕಾರ್ಯದಲ್ಲಿ ಎಂತೋ ಅಂತೆ ನನ್ನ ಸ್ವಂತ ಜೀವನದಲ್ಲೂ ಪ್ರೇಮ ವಿಶ್ವಾಸಗಳನ್ನು ತೋರಿದಾರೆ. ಅವರಿಗೂ ಮುಂಬಯಿಯ ಕಲಾವಿದ ರಾಘವೇಂದ್ರರಿಗೂ ನನ್ನ ನಮಸ್ಕಾರಗಳು ಸಲ್ಲಬೇಕು. ತೋಂಟದಾರ್ಯ ಪ್ರೆಸ್ಸಿನ ವ್ಯವಸ್ಥಾಪಕರಾದ ಶ್ರೀ. ಎಸ್. ಬಿ. ಹರಿಹರ ಮಾಸ್ತರರು ಅಚ್ಚಿನ ಕೆಲಸವನ್ನು ವಿಶ್ವಾಸದಿಂದ ನೆರವೇರಿಸಿಕೊಟ್ಟಿರುವರು. ಶ್ರೀ. ಹಳಕಟ್ಟಿಯವರಿಗೂ ಅವರ ಕೆಲಸಗಾರರಿಗೂ ಕೃತಜ್ಞತೆಗಳು.

ಕಲ್ಪನಾ ಗ್ರಂಥಮಾಲಾ
ಹುಬ್ಬಳ್ಳಿ
೧—೩—೪೯

ಸಿದ್ದಯ್ಯ ಪುರಾಣಿಕ ಕಾವ್ಯಾನಂದ [signature]

ಪರಿವಿಡಿ

★

ಕಲ್ಪನಾ ಗ್ರಂಥ ಮಾಲೆಯ
ಪ್ರಕಟನೆಗಳು

೧	ಹಾಲಾಹಲ	ಹಿರೇಮಲ್ಲೂರ ಈಶ್ವರನ್	೧	೮	೦
೨	ರಾಮಣ್ಣ ಮಾಸ್ತರು	ಮಿರ್ಜಿ ಅಣ್ಣಾರಾಯರು	೨	೦	೦
೩	ಫಲ ಸಂಚಯ	ವರದರಾಜ ಹುಯಿಲಗೋಳ	೧	೮	೦
೪	ರಾಜಾ ರಾಣಿ ದೇಖೋ	ಹಿರೇಮಲ್ಲೂರ ಈಶ್ವರನ್	೧	೮	೦
೫	ಶಿವನ ಬುಟ್ಟಿ	ಹಿರೇಮಲ್ಲೂರ ಈಶ್ವರನ್	೧	೮	೦
೬	ಮುಗಿಲ ಜೇನು	ಸಿಂಪಿ ಲಿಂಗಣ್ಣ	೧	೮	೦
೭	ಕನ್ನಡ ತಾಯ್ ನೋಟ	ಹಿರೇಮಲ್ಲೂರ ಈಶ್ವರನ್	೧	೮	೦
೮	ಕಾವ್ಯಾಕ್ಷಿ	ಚೆನ್ನವೀರ ಕಣವಿ	೧	೦	೦
೯	ಅರವಿಂದರ ಪತ್ರಗಳು	ಸಿಂಪಿ ಲಿಂಗಣ್ಣ	೦	೧೨	೦

ಕಲ್ಪನಾ ಗ್ರಂಥ ಪ್ರಕಾಶನ ಸಮಿತಿ
ಹುಬ್ಬಳ್ಳಿ

ಗೆಳೆತನ

ಎಂತಹ ಗೆಳೆಯನಿಗೂ ಕೂಡ ಪೂರ್ತಿಯಾಗಿ ನಿನ್ನ ಹೃದಯವನ್ನು ತೋರಿಸಬೇಡ. ಹೆಂಡತಿಗೆ ಸುಳ್ಳು ಹೇಳು. ತಾಯಿಗೆ ನಂಬುಗೆ ಕೊಡು. ಗೆಳೆಯನಿಗೆ ಅಭಿಪ್ರಾಯ ಕೇಳು. ಇದ್ದುದನ್ನು ಇದ್ದಂತೆ ಹೇಳುವ ಸ್ನೇಹಿತ ಇಂದಿಲ್ಲ ನಾಳೆಯಾದರೂ ನಿನ್ನ ಇದಿರಿನಲ್ಲೇ ನಿನ್ನನ್ನು ಖಂಡಿಸಿ ಹೆರವರ ಸಮ್ಮುಖದಲ್ಲೂ ಅವಹೇಳನ ಮಾಡಲು ಹಿಂಜರಿಯುವದಿಲ್ಲ. ನೀನು ಸಲಹೆಯನ್ನು ಕೇಳಿದಾಗ ಮೌನದಿಂದಿರುವಾತ ಮುಸುಕಿನಲ್ಲಿ ಕವಣೆಗಲ್ಲು ಕಟ್ಟಿ ಎದೆಯ ಗುಂಡಿಗೇ ಬೀಸುತ್ತಾನೆ, ಎಚ್ಚರ. ನೀನು ವಿಚಾರದ ಸುಳಿಯಲ್ಲಿದ್ದುದನ್ನು ಕಂಡೂ ಕಂಡು ನಕ್ಕು ನಲಿಯುವ ಗೆಳೆಯ ಬಹು ವಂಚಕನೆಂದು ತಿಳಿದುಕೊ. ಮಾತನಾಡದೆ ಕೃತಿಯಿಂದ ಮಾತ್ರ ನೆರವನ್ನು, ನೇಹವನ್ನು ನೀಡಬಲ್ಲವನೆ ಒಳ್ಳೆಯ ಸಂಗಡಿಗ. ಅಂತಹನನ್ನು ಕೂಡ ನಾನು ಗೆಳೆಯನೆಂದು ಕರೆಯಲಾರೆ.

ಒಬ್ಬ ಮಹಾಕವಿ ಒಂದು ದೇಶದ ಪುಣ್ಯದಿಂದ ಹುಟ್ಟುತ್ತಾನೆ. ಒಂದು ಮಹಾ ಕಾವ್ಯ ಭುವನದ ಭಾಗ್ಯದಿಂದ ಮೂಡಿ ಬರುತ್ತದೆ. ಹಾಗೆಯೇ ಒಳ್ಳೆಯ ಗೆಳೆತನವೂ ದೊರಕುವುದು ಪೂರ್ವ ಜನುಮದ ಸುಕೃತದಿಂದ ತಾಯಿಯೇ ಬಂಧು. ತಂದೆಯೇ ಹಿತೇಚ್ಛು. ಗೆಳೆಯನೆ ಅಧಿಕತಮ ಸಂಪತ್ತು. ಹುಟ್ಟಿಸುವಾತ ತಂದೆ. ಹಾಲೆರೆಯುವಾಕೆ ತಾಯಿ. ಬದುಕಿಸುವವನು ಮಾತ್ರ ಗೆಳೆಯನೆಂಬುದನ್ನು ಎಂದಿಗೂ ಮರೆಯ ಬೇಡ.

ಗೆಳೆತನ ಮುಳ್ಳು ಬೇಲಿಯ ಹಾಗೆ. ಅಲ್ಲಿ ಮುಳ್ಳು ಮಲ್ಲಿಗೆ ಗಳುಂಟು. ಮಲ್ಲಿಗೆ ಬಿಡಿಸ ಹೋಗಿ ಮುಳ್ಳಿನ ಮೇಲೆ ಬಿದ್ದು ನರಲುವವರು ನೂರಕ್ಕೆ ನೂರು. ಅಪವಾದ ಯಾವುದಕ್ಕೆ ಇಲ್ಲ ? ತಾಯ ಹಾಲು ನಂಜಾಗಿ ಸತ್ತವರುಂಟು. ಬೇಲಿ ಎದ್ದು ಹೊಲ ಮೆಯ್ದುದು ನಿಜ. ನಂಬಿ ಕೆಟ್ಟವರು ಲಕ್ಷೋಪ ಲಕ್ಷ. ಗೆಳೆತನವೂ ಹಾಗೇನೆ. ನಿಜವಾದ ಗೆಳೆಯ ಈ ಜನುಮದಲ್ಲಿ ಸಿಕ್ಕುವುದು ಬಲು ಅಪರೂಪ.

ಕೇರಿಗೊಂದು ದೀಪವಿದ್ದರೆ ಊರಿಗೊಂದು ಮನೆಯಿರಬೇಕು. ಸತ್ಯ ಸಂಧನಾಗಿ ಮನುಷ್ಯ ಬಾಳಿದಷ್ಟೂ ವೈರಿಗಳು, ದ್ರೋಹಿಗಳು, ವಂಚಕರು ಹುಟ್ಟುತ್ತಾರೆ. ಅಪರಂಜಿಯನ್ನು ಉಜ್ಜಿ ನೋಡಬೇಕು. ಶ್ರೀಗಂಧವನ್ನು ತೇಯ್ದು ನೋಡಬೇಕು. ಕಪ್ಪುರವನ್ನು ಸುಟ್ಟು ನೋಡಬೇಕು. ನೀನು ಸತ್ತು ನಿನ್ನ ಗೆಳೆಯನನ್ನು ನೋಡಬೇಕು.

ಗೋಮುಖವ್ಯಾಘ್ರರೇ ಎಲ್ಲ ಕಡೆಗೂ. ನನ್ನ ಮನಸ್ಸು ನಿರಾಶೆಯಿಂದೊಡಗೂಡಿದೆ. ಬದುಕುವ ಆಸೆ ನನಗಿಲ್ಲವಾಗಿದೆ. ಸುತ್ತು ಕಡೆಗೂ ನೋಟ ಬೀಸಿದರೆ ದುಃಖವೆ ಕಾಣುತ್ತದೆ. ದಾರಿ ತೋರುವವರೊಬ್ಬರೂ ಇಲ್ಲ. ಯಾರಿಗೆ ಯಾರೂ ಇಲ್ಲ. ನನಗೆ ನಾನೇ ಗತಿ. ನನಗೆ ನಾನೇ ಗತಿ. ನನ್ನ ಹೆಣ ನಾನೇ ಹೊರಬೇಕು. ಸಾವ ಮುನ್ನ ನೋಡಲು ಬಂದವರು ಮುಖ ತಿರುವುತ್ತಾರೆ. ಸತ್ತ ಮೇಲೆ ಮಣ್ಣು ತೂರುತ್ತಾರೆ. ಮೂರು ದಿನದ ನಂತರ ಮುಗಿಲ ಕಡೆಗೆ ನೋಡಿ ಬಿಕ್ಕಿ ಬಿಕ್ಕಿ ಅಳುವವರು ದೊರೆತರೆ ಸಾವೇ ಸರಸ.

ಆದರೆ ನಿಯಮ ಹಾಗಿಲ್ಲವಲ್ಲ! ಕೊಟ್ಟ ಸಾಲ ಮುಳುಗುತ್ತದೆ. ಕೊಡುವ ಸಾಲ ಇಮ್ಮಡಿಯಾಗುತ್ತದೆ. ವಿಧವೆಯ ಮೇಲೆ ಕಣ್ಣು, ಮಣ್ಣಿನ ಮೇಲೆ ನೋಡಿ— ಇನ್ನೇನು, ಗೆಳೆತನದ ಹೆಡೆಯೆತ್ತಿ ವಿಷದ ಫೂತ್ಕಾರಕ್ಕೇ ಪ್ರಾರಂಭ. ಹೆಣ್ಣು, ನೀರು, ಅಶ್ವಾದಿಗಳ ನೆಲೆ ಹುಡುಕಿದವರು ಲಾಗ ಹಾಕಿ ಉತ್ತರ ಹೇಳಲಿ! ಗೆಳೆತನದ ಸೋಗು ಹಾಕಿ ಬಂದವನ ನೆಲೆಯನ್ನು ಪಾತಾಳ ಗಡೆ ಹಾಕಿ ಹುಡುಕಿ ತೋರಲಿ.

ದೇಶ ನೋಡಿ ಬಂದವರಿಗೆ, ಕೋಶ ಓದಿ ನೋಡಿದವರಿಗೆ ಬುದ್ಧಿ ಬರುತ್ತದೆ. ಗೆಳೆಯನೆಂದು ಹೇಳಿಕೊಂಡು ಬಂದ ನಿನ್ನ ಗೆಳೆಯನ ಗೆಳೆತನದ ಇತಿಹಾಸ ಓದಿನೋಡಿದರೆ ಬುದ್ಧಿಯೇ ಭ್ರಮಣವಾದೀತು. ಹಾಲು ಕುಡಿಸಿದ ತಾಯಿ ಹಂಗಿಸಲರಿಯಳು. ಹುವ್ವು ಹಣ್ಣನಿತ್ತ ಭೂಮಿ ತಾಯಿ ದುಃಖವನ್ನರಿಯಳು. ನಿನ್ನ ಗೆಳೆಯ ಇದನ್ನೆಲ್ಲ ಬಲ್ಲ. ನೀನು ಸಂಕಟದಲ್ಲಿ ಬಿದ್ದಾಗ 'ಅಯ್ಯೋ' ಎಂದವನು ಯಮನಿಗಿಂತಲೂ ಕರಕಷ್ಟ. ಮೃಗ ಜಲ ಕ್ಷುಧೆಯನ್ನಡಗಿಸಬಲ್ಲುದೆ?

ಗೆಳೆಯನಾಗಿ ಬಂದವನು ಮೊದಲು ಲೋಪ ದೋಷಗಳನ್ನು

ಅಭ್ಯಸಿಸುತ್ತಾನೆ. ಗೆಳೆತನದ ಪಾವತಿ ಪಡೆದು ಗಲ್ಲಿನ ಮುಳ್ಳಿನಂತೆ ಜೀವವನ್ನೇ ಹಿಂಡುತ್ತಾನೆ. ಲೋಪ ದೋಷ ಯಾರಿಗಿಲ್ಲ ? ಆದುದರಿಂದ ಗೆಳೆಯನನ್ನು ನಂಬಲೀ ಬೇಡ. ಗೆಳೆತನದಲ್ಲಿ ಹೆಣ್ಣಿನ ಕುಟಿಲತೆಯುಂಟು, ಲಕ್ಷ್ಮಿಯ ಚಾಂಚಲ್ಯವುಂಟು, ಅಶ್ವದ ವಕ್ರತೆಯುಂಟು. ಮೂರು ಕಡೆಯಿಂದ ಸುತ್ತಿ ಬಂದ ಹೆಡಮುರಿಗೆಯಿಂದ ಎಂದಿಗೂ ನೀನು ಪಾರಾಗಲಾರೆ.

ತಾಯಿ ಅಡುಗೆಯ ಮನೆಯಲ್ಲಿದ್ದರೆ 'ಒಳಗೆ ಬಾ' ಎನ್ನುತ್ತಾನೆ. ತಂದೆ ನಡು ಮನೆಯಲ್ಲಿದ್ದರೆ 'ಕಟ್ಟೆಯ ಮೇಲೆ ಕೂಡು' ಎನ್ನುತ್ತಾನೆ. ಹೆಂಡತಿ ಹಿಂದಿನ ಬಾಗಿಲದಲ್ಲಿದ್ದರೂ ಹೊಸ್ತಿಲದ ಆಚೆಗೇ ನಿಂತು ಮಾತನಾಡಿಸುತ್ತಾನೆ ನಿನ್ನ ಗೆಳೆಯ. ಅಪರಿಚಿತರು ಇನ್ನೂ ನೂರು ಪಾಲಿಗೆ ಬೇಕು.

ಗೆಳೆತನ ಪಲವು ತೆರನಾಗುಂಟು. ತಾಯಿಯಲ್ಲಿ, ಮಡದಿಯಲ್ಲಿ, ಗುರುವಿನಲ್ಲಿ, ಪಶು ಪಕ್ಷಿಗಳಲ್ಲಿ ಅದನ್ನು ಗುರುತಿಸಬಹುದು. ನೀನು ಅಂದರೊಂದು ಚಂದ, ಬಯ್ದರೊಂದು ಚಂದ ತಾಯಿಗೆ. ಮಗನ ಕೈಯಲ್ಲಿ ಜೀವಕೊಟ್ಟ ತಾಯಿ, ಶಿವನ ಕೈಯಿಂದ ಸಾಕ್ಷಾತ್ಕಾರ ಪಡೆದರೂ ಪಡೆಯಬಲ್ಲಳು. ತನಗೆ ಪ್ರಿಯವಾದುದನ್ನು ನುಡಿದರಷ್ಟೇ ಮಡದಿಗೆ ಚಂದ. ಅವಳ ನೋಟಕ್ಕಿನಿಸು ಕೈಯ ಮರೆ ಮಾಡು. ನಂಬಿ ಸ್ನೇಹವಿತ್ತ ಅಣ್ಣಗಳ ಗತಿಯೇ ಹಾಗೆ.

ಅಂಗವಿದ್ದಲ್ಲಿ ಲಿಂಗ; ಸಂಗವಿದ್ದಲ್ಲಿ ಐಕ್ಯ. ಶಿಷ್ಯ ಹುಡುಕುತ್ತ ಬರುತ್ತಾನೆ; ಗುರು ಬೆಂಬತ್ತಿ ಹೋಗುತ್ತಾನೆ. ನುಡಿ ತಪ್ಪಿದರೆ ಕೆಡುಕ, ನಡೆ ತಪ್ಪಿದರೆ ಕೆಡುಕ. ಗುರುವನ್ನು ಬೆಂಬತ್ತಿ ಹೋದವರು ಈಗುಂಟು, ಈಗಿಲ್ಲ.

ಹುಲಿಯ ಕಾಲಿನ ಮುಳ್ಳು ತೆಗೆದವನಿಗೆ ಹುಲಿ ಜೀವ ಕೊಡುತ್ತದೆ. ಕುರಿಯ ದಡ್ಡಿಯನ್ನು ಹಿಂಬಾಲಿಸಿದ ನಾಯಿ ಹುಲಿಯ ಬಾಯಿಗೆ ಬಿದ್ದು ಒಡೆಯನಿಗೆ ವಿಶ್ವಾಸ ತೋರುತ್ತದೆ. ಹಾಳಾದ ಮನೆಯನ್ನು ನೋಡಿ ಒಡತಿಗೆ 'ತಾಯೀ' ಎಂದು ಸಂಬೋಧಿಸಿ ಗಿಳಿಯು ತನ್ನ ಮನದ ದುಃಖ ವಿವರಿಸುವುದು. ಮನುಜ ಜೀವ, ಏನೆಂತ ಕಠಿಣ ಶಿವ ಶಿವಾ!

ದಾರಿದ್ರ್ಯಕ್ಕೂ ಗೆಳೆತನಕ್ಕೂ ಎಣ್ಣೆ ಸೀಗೆಯಕಾಯಿಯ ಸಂಬಂಧ. ಬಡವನಿಗೆ ಗೆಳೆಯರಿಲ್ಲ. ಸಿರಿವಂತನಿಗೆ ಲೆಕ್ಕವಿಲ್ಲದಷ್ಟು ಗೆಳೆಯರು ದೊರೆಯುತ್ತಾರೆ. ನೀನು ನಿನ್ನ ಬಡತನವನ್ನು ಸೆರಗ ಮರೆಯಲ್ಲಿ ಮುಚ್ಚಿಟ್ಟುಕೊಂಡು ಸಿರಿವಂತ ಗೆಳೆಯನಿಗೆ ಆದರೋಪಚಾರ, ಸತ್ಕಾರ ಸಮಾರಂಭವನ್ನೇರ್ಪಡಿಸಿದರೆ ಒಂದಿಷ್ಟೂ ನಿನ್ನ ಔದಾರ್ಯವನ್ನು ಶ್ಲಾಘಿಸದೆ ತನ್ನ ಗರುವಿಕೆಯಲ್ಲಿಯೇ ಅವನು ಮೆರೆದುಕೊಂಡು ಹೋಗುತ್ತಾನೆ. ನಿನ್ನ ಹತ್ತಿರ ಹಣ ಇರುವವರೆಗೂ ನಿನ್ನ ಶ್ರೀಮಂತ ಸ್ನೇಹಿತರು ಸಾವಿರದ ಎಣಿಕೆಯಲ್ಲಿಯೋ, 'ಚಕ್ಕು'ಗಳ ರೂಪದಲ್ಲೋ ಮಾತನಾಡುತ್ತಾರೆ. ಅದೇ ನಿನಗೆ ಕಷ್ಟಕಾಲ ಬಂದೊದಗಿದರೆ ನಿನ್ನ 'ಚಕ್ಕು'ಗಳ ಗೆಳೆಯರು ಗೆಳೆತನದ ಕುತ್ತಿಗೆಗೇ ಕೈಕೊಡುತ್ತಾರೆ. ಹುಷಾರಪ್ಪ ಬಡ ಸ್ನೇಹಿತನೆ, ನನಗೆ ಅನುಭವವುಂಟು!

ನಂಬಿ ನುಡಿದರೆ ವಂಚನೆ. ಮನಮುಟ್ಟಿ ಮಾಡಿದರೆ ವಿಷ ಸಿಂಚನೆ. ಗೆಳೆಯನನ್ನು ನಂಬಿ ಬದುಕಿದವರು ಯಾರು ಯಾರೊ? ನನ್ನ ಮಟ್ಟಿಗೆ ನಾನು ಶಾಬ್ದಿಕನಿಗೆ 'ಗೆಳೆತನ' ವನ್ನು ಇಲ್ಲದಾಗಿರಿಸಲು ಕೇಳಿಕೊಳ್ಳುತ್ತೇನೆ. ಇದಕ್ಕೆ ಸಮ್ಮತಿ ಇಲ್ಲವಾದರೆ ಅವನಿಗೊಂದು ಪ್ರಶ್ನೆ ಕೇಳಬಯಸುತ್ತೇನೆ. ಸಮರ್ಪಕ ಉತ್ತರ ದೊರೆವುದಾದರೆ ಮಾತ್ರ 'ಗೆಳೆತನ ಇಲ್ಲಿ ಉಂಟು' ಎಂದು ಒಪ್ಪಿಕೊಳ್ಳುತ್ತೇನೆ. ಇಗೋ ಸವಾಲು: ನಿನ್ನ ಗೆಳೆಯ ನಿನಗಾಗಿ ಜೀವಕೊಡಲು ಸಿದ್ಧನಿದ್ದಾನೆಯೆ ?

ಚಟ

ನಿನಗೆ ಎಂತಹ ಚಟವಿದೆಯೆನ್ನುವುದನ್ನು ಹೇಳು: ಆಗಲೆ ನೀನು ಎಂತ ಮನುಷ್ಯನಿರುವೆಯೆಂಬುದನ್ನು ಸ್ಪಷ್ಟವಾಗಿ ನಾನು ಹೇಳಬಲ್ಲೆ. ಆಗಸದ ನಕ್ಷತ್ರ ಎಣಿಸುವುದು ಬೇಕು. ಚಟದ ವಿವಿಧ ರೂಪಗಳನ್ನು ಲೆಕ್ಕಕ್ಕೆ ಕೂಡಿಸುವುದು ಎಂದಿಗೂ ಬೇಡ. ಬುಟ್ಟಿಯಲ್ಲಿ ಮೀನ ತುಂಬಿ ಇಡಲೆತ್ನಿಸುವವನೂ, ಚಟದ ಪ್ರಕಾರಗಳನ್ನು ಎಣಿಸುವವನೂ ಒಂದೇ ತರಗತಿಯ ಸೋಲು ಒಪ್ಪಿಕೊಳ್ಳುವುದುಂಟು.

ಕೀಡೆ ಹಿಡಿದ ಹುವ್ವು, ಅನ್ಯರ ಸಂಗಬಯಸಿದ ಹೆಣ್ಣು, ಚಟ ಹತ್ತಿದ ಗಂಡು ಎಲ್ಲಾ ಒಂದೆ. ಗಂಟು ಬಿದ್ದ ಚಟ ರೋಮರೋಮದ ಕುಳಿಯನ್ನೆಲ್ಲ ತುಂಬುತ್ತದೆ. ಪೆಂಡ್ಯುಲಮ್ ಗಡಿಯಾರದ ಮುಳ್ಳು ತಿರುಗಿಸುವಂತೆ ಮೈಯನ್ನಾವರಿಸಿಕೊಂಡ ಚಟ ನರನಾಡಿಗಳನ್ನು ಹಿಡಿದು ನಡಸುತ್ತದೆ. ಒಮ್ಮೆ ಕೀಲಿಯ ಕೈ ತಿರುಗಿಸುವುದನ್ನು ಬಿಟ್ಟರೆ ಸಾಕು, ಯಂತ್ರವೆ ನಿಂತುಹೋಗುತ್ತವೆ. ಚಟದ ಗುರಿಯ ಕೊನೆಯೂ ಅದೇ ರೀತಿಯದು.

ಎಂತ ಚಟವೇ ನಿನ್ನನ್ನು ಆವರಿಸಲಿ. ರತ್ನತ್ರಯಗಳನ್ನು ಶುದ್ಧ ವಾಗಿರಿಸಿಕೋ. ನಿನ್ನ ಜ್ಞಾನ, ನಿನ್ನ ದರ್ಶನ,ನಿನ್ನ ಚಾರಿತ್ರ್ಯಯಾವಾಗಲೂ ನಿರ್ಮಲವಾಗಿರಲಿ. ಜ್ಞಾನ ಮಸುಕಾಯಿತೇ, ನೀನು ಮಾನವತೆಯ ಪಟ್ಟವನ್ನೇ ಕಳೆದುಕೊಳ್ಳುವಿ. ಮನುಷ್ಯನು ಜ್ಞಾನವುಳ್ಳಪ್ರಾಣಿ. ಜ್ಞಾನಹೀನ ಮನುಜನು ಪಶುಸಮಾನ. ಗುರು ಹಿರಿಯರನ್ನು ಮಾತಾ ಪಿತೃಗಳನ್ನು, ಋಷಿಯ ಅಮೃತವಾಕ್ಯನ್ನು ಓಲೈಸಿ ಜ್ಞಾನ ಗಳಿಸಿಕೊ, ಇದ್ದುದನ್ನುಉಳಿಸಿಕೋ.ಜ್ಞಾನವಳಿಯಿತೇ ನೀನು ಬೋಳುಮರ.ಹಣ್ಣು, ಕಾಯಿ, ಹುವ್ವು, ಮಿಡಿ,ಚಿಗುರುಗಳಿಲ್ಲದ ಗಿಡದ ಹತ್ತಿರ ಪಶುಪಕ್ಷಿಗಳೂ ಬಾರವು.

ಹಾವಿನ ಹೆಡೆಯ ರತ್ನದಂತೆ ದರ್ಶನ ಯಾವಾಗಲೂ ಅಲಂಕೃತ ವಾಗಿರಬೇಕು. ಕತ್ತಲಲ್ಲಿ ಕಳ್ಳರು ಬರುತ್ತಾರೆ. ಮೋಸ ಮಾಡಿ ಕೊಲ್ಲು ವುದರಲ್ಲಿ ಕಳ್ಳರು ಎತ್ತಿದ ಕೈಯುಳ್ಳವರು. ಊಟಮಾಡುತ್ತ ಕುಳಿತಿರು.

ಅನ್ನದಲ್ಲಿ ರಕ್ತ ಹಿಡಿಯುವಂತೆ ಚೆಂಡು ಹಾರಿಸುವರು. ಯಾರ ನೋವು ಯಾರಿಗೆ! ಅಜ್ಞಾನದ ಗರಹಿಡಿದ ಲೋಕದ ಕಣ್ಣಿಗೆ ನ್ಯಾಯಾನ್ಯಾಯಗಳೇ ಇಲ್ಲ. ಆದುದರಿಂದ ನಿನ್ನ ಮನೆಯನ್ನು ಬಹು ಜತನದಿಂದ ಕಾಪಾಡಿಕೊಳ್ಳುವ ಹೊಣೆ ನಿನ್ನ ಮೇಲೆಯೆ ಇರುವುದು. ದರ್ಶನಹೀನನಾದರೆ ಹಗಲಿನಲ್ಲಿ ಹಾಡುತ್ತಲೆ ನಿನ್ನನ್ನು ಸೂರೆಗೆಯ್ಯುವುದಕ್ಕೆ ಕಳ್ಳರು ಸರ್ವದಾ ಸಿದ್ಧ. ಗುರು ಹೇಳಿದ ಮಾತು: ದರ್ಶನ ಜತನ ಕರೋ!

ಚಟದ ಗೆಳೆಯರು ಸವಿಮಾತನಾಡುತ್ತ ಬರುತ್ತಾರೆ. ಮೈ, ಕೈ ಮುಟ್ಟಿ ನಕ್ಕು ನಗಿಸುತ್ತಾರೆ. ನಗೆ ಹೊಗೆ, ಮೌನ ಮುತ್ತು. ನಗುತ್ತ ಬಂದವನು ಕೈಯಲ್ಲಿ ಬೇಡಿಯನ್ನು ತಂದಿದ್ದಾನೆಂಬುದನ್ನು ಎಂದಿಗೂ ಮರೆಯಬೇಡ. ತಿರುಗಿ ಹೋಗುವಾಗ ಅವನ ಕೈ ಬೇಡಿ ನಿನ್ನ ಕೈಗೆ ಬಂದುದನ್ನು ನೀನು ಬೇಗ ಅರಿತುಕೊಂಡರೆ ಬದುಕುವಿ. ಇಲ್ಲವಾದರೆ ದುರ್ಮರಣ ಕಟ್ಟಿಟ್ಟದ್ದೆ. ಚಾರಿತ್ರ್ಯಹೀನನಾಗಬೇಡ. ಆಗುವುದಾದರೆ, ಆಗಿದ್ದರೆ ಹಗ್ಗ ತೆಗೆದುಕೊಂಡು ನೇಣು ಹಾಕಿಕೊ.

ಮನಸ್ಸು ಗಟ್ಟಿಯಾಗಿರಲಿ. ಬಲಾಢ್ಯವಾದ ಮನಸ್ಸೊಂದಿದ್ದರೆ ಇಂದ್ರಿಯಗಳು ಚಲವಿಚಲಿತವಾಗಲಾರವು. ಬಲ್ಲಿದನಾದ ಅಶ್ವಾರೋಹಿ ಬಾನಿನ ಅಂಚನ್ನೆ ಮುಟ್ಟಬಲ್ಲ. ಹರಿವ ಗಾಳಿ, ಚಂಚಲ ಮನಸ್ಸು, ಚಟದ ಓಟ ನಿಲ್ಲಿಸುವುದು ಯಾರಿಂದಲೂ ಸಾಧ್ಯವಿಲ್ಲ. ಇಂದ್ರಿಯಗಳನ್ನು ಮೆಟ್ಟಿ ನಿಲ್ಲಬಲ್ಲಾತ ಮೂಲೋಕಗಳನ್ನು ಕೈ ಬುಟ್ಟಿಯಲ್ಲಿ ತುಂಬಿ ತರಬಲ್ಲ. ಚಟಗಳು ಕೊಡುವ ಸೌಖ್ಯ ಕ್ಷಣಿಕ; ಫಲವೂ ಅತ್ಯಲ್ಪ; ಹಾನಿ ಬಾಳಿನ ಪರ್ಯಂತ ಬೆಂಬತ್ತಿದ್ದೇ ಬೆಂಬತ್ತಿದ್ದು. ಚಟದ ಕೈಗೆ ಪೂರ್ತಿಯಾಗಿ ಸಿಲುಕಿದವನು ಸಾಧನ ಮಾರ್ಗದಿಂದ ಪಾರಾಗಲೆತ್ನಿಸಬೇಕು. ಸಾಧಕನಿಗೆ ಯಾವಾಗಲೂ ಏಳು ಸುತ್ತಿನ ಕೋಟೆಯ ರಕ್ಷೆಯುಂಟು. ಸನ್ಯಾಸಿಗೆ ನಿಂತಿದ್ದೇ ರಂಗಭೂಮಿ. ಲಾಭ ಹಾನಿ, ಸುಖ ದುಃಖ, ಜನನ ಮರಣ ಬರುತ್ತವೆ ಹೋಗುತ್ತವೆ. ಪಂಡಿತನಾದವನು ಯಾವುದಕ್ಕೂ ತಿರುಗಿ ನೋಡಲಾರನೆಂದು ಗೀತೆಯ ವಚನವುಂಟು. ಅಂತ ಸ್ಥಿತಪ್ರಜ್ಞನೇ ಮಂದರಗಿರಿಧರ. ಅವನನ್ನು ಪವನ ಚಲಿಸದು, ಅಗ್ನಿ ಮುಟ್ಟದು.

ಕುರಿಯ ಹಿಂದಿನಂತೆ ಚಟದ ಗುಂಪು. ಒಂದರ ಹಿಂದೆ ಇನ್ನೊಂದು. ಕುದಿತವಿಂದ ಕುಣಿತ. ಕುಣಿತವಿಂದ ಕೂಟ. ಕೂಟದಿಂದ ಬೇಟ. ಬೇಟವಿಂದ ಬೆಂಕಿ. ಬೆಂಕಿಯಲ್ಲಿ ಬಿದ್ದ ಪತಂಗ ಯಾರು ಎತ್ತಿ ಮೇಲಿಟ್ಟಾರು? ನಿರ್ಮಲವಾದ ಮನಸ್ಸಿನಿಂದ ಉಷಃಕಾಲದಲ್ಲಿ ಎದ್ದು ತಾಯಿಯ ಪಾದ ಮುಟ್ಟಿ ಹೇಳು. ಕುರುಡಾಳು ಬಾ ಬೆಳಕೆ, ಮಬ್ಬು ಮುಸುಕಿದೀ ಕತ್ತಲೆಯಲ್ಲಿ ಕೈ ಹಿಡಿದು ನಡಸೆನ್ನನು!

ಮಗುವಿನ ಮನಸ್ಸು ಹಸಿಯ ಗೋಡೆಯ ಹಾಗೆ. ಎಲವೊ ಚಟಗಾರ, ಹಸುಳೆಯ ಪತ್ತಿರ ಬಾರದಿರು. ಹೇಳಬಾರದ, ನೆನೆಯ ಬಾರದ ಚಟದ ತವರು ಮನೆ ನೀನು. ಎಂಥ ಚಟಗಾರನನ್ನು ಕಂಡರೂ ನನಗೆ ಆಗುವುದೆ ಇಲ್ಲ.

ವರ್ತಕನಿಗೆ ವಂಚನೆಯಲ್ಲಿ, ನೌಕರನಿಗೆ ಸೇವೆಯಲ್ಲಿ, ಗುಲಾಮನಿಗೆ ಎಂಜಲಲ್ಲಿ, ಕಾಮಿಗೆ ಮನೆಯ ಹೊರಗಿನ ಹೆಣ್ಣಿನಲ್ಲಿ, ಕೀರ್ತಿ ಮೋಹಿನಿಗೆ ಹುಸಿ ವಿನಯದಲ್ಲಿ, ರಾಜಕಾರಣಿಗೆ ಮೋಸದ ಕಂತೆಯಲ್ಲಿ.... ಒಂದರಲ್ಲಿ ಎರಡರಲ್ಲಿ ಚಟದ ಕೈವಾಡ! ಕುಡಿದರೇ ಕವಿತೆ ಬರುತ್ತದೆ. ಕೆಡಿಸಿದರೇ ಕಾದಂಬರಿ ಮೂಡುತ್ತದೆ. ತಿಂದರೇ ನೆಮ್ಮದಿಯಾಗುತ್ತದೆ. ಕಫನಿ ತೊಟ್ಟರೇ ಮೋಕ್ಷ ದೊರೆಯುತ್ತದೆ...........ಲೋಕಕ್ಕೆ ಏನು ಕುರುಡೊ! ಚಟದ ಬೇನೆಯಿಂದ ಸಾಯುವ ರೋಗಿಗೆ ಸಂಯಮವೇ ದಿವ್ಯೌಷಧಿ!

ಚಟದ ಪ್ರಪಂಚಕ್ಕೆ ಸಂದೇಶವನ್ನೊಯ್ದು ಸಾರುವವರು ಐವರು ದೂತರು. ಅವರಲ್ಲಿ ಯಾರು ಹೆಚ್ಚು, ಯಾರು ಕಡಮೆ? ಆದುದರಿಂದ ಚಟ ಸಣ್ಣದಿರಲಿ, ದೊಡ್ಡದಿರಲಿ, ನೀನು ಯಾವ ಚಟಗಾರನನ್ನೂ ನಂಬದಿರು.

ನನ್ನ ಮನಸ್ಸು ದಿಙ್ಮೂಢವಾಗಿ ಹೋಗಿದೆ. ನಂಬಿ ಕೆಟ್ಟವರಲ್ಲಿ ನಾನೂ ಒಬ್ಬ. ಮೌನ ತಳೆದಾಗ ನನಗೆ ಮೂಕನೆಂದು ತೆಗಳಿದವರುಂಟು. ಆಡಿದಾಗ ಮಾತಾಳಿ ಎಂದು ಅವಹೇಳನಗೆಯ್ದವರುಂಟು. ಕಂಡದ್ದನ್ನು ತೋರಿದಾಗ ಜರಿದು ನುಡಿದವರುಂಟು. ನನಗೀಗ ನೆಮ್ಮದಿಯೇ ಇಲ್ಲವಾಗಿದೆ. ಏನು ನಂಬಲಿ? ಯಾರ ಬೆನ್ನು ಬೀಳಲಿ?

ನಿರಾಶಾವಾದವೇ ನನಗೆ ರೂಢಿಯಾಗುತ್ತ ನಡದಿದೆ. ಅಳುವುದೇ ನನಗೆ ಚಟವಾಗಿ ಹೋಗಿದೆ.

ಸುತ್ತಲೂ ನೋಡುತ್ತೇನೆ; ಜನ ಅಳುತ್ತಲೇ ಇದ್ದಾರೆ. ಹುಟ್ಟುವ ಕೂಸು ಅಳುತ್ತಿದೆ. ಕೂಸು ಸತ್ತಾಗ ಜನನಿ ಜನಕರು ಅಳುತ್ತಾರೆ. ಮಳೆಗಾಲ ಬಂದಿತೇ ಬಾನು ಕಂಬನಿ ಗರೆಯುತ್ತಿದೆ. ಚಳಿಗಾಲ ಬಂದಿತೇ ಗಿಡ ಮರಗಳು ಎಲೆ ಪಳ ಪಳ ಉದುರಿಸುತ್ತಿವೆ. ವಸಂತ ಬಂದಿತೇ ಕೋಗಿಲೆವಿಂಡು ಅಳುತ್ತಿವೆ. ನನ್ನ ಮನಸ್ಸು ಕಲ್ಲಿಗಿಂತ ಕಲ್ಲಾಗಿ ಬಿಟ್ಟಿದೆ. ಚಟ ಯಾರ ಬೆನ್ನೂ ಬಿಡಲಿಲ್ಲವಲ್ಲ!

ಸಾವು

ಸಾವು ನನ್ನ ಮನೆಯ ಬಾಗಿಲ ಬಳಿ ಬಂದು ಕದವನ್ನು ತೆರೆಯೆಂದು ಕೇಳಿದರೆ '........ಕೊನೆಯ ಸಾಲನ್ನು ಬರೆಯುತ್ತಿದ್ದೇನೆ. ಎಲೆ ಸೇವಕನೆ, ಅಲ್ಲಿಯೆ ಒಂದು ನಿಮಿಷ ಹೊರಗಡೆ ನಿಲ್ಲು. ಗದ್ದಲ ಮಾಡಬೇಡ. ಅಲ್ಲಿ ತೆಪ್ಪಗೆ ಕುಳಿತಿರು. ಮನೆಯವರ ಗಾಢ ನಿದ್ರೆಯನ್ನು ಕೆಡಿಸಬೇಡ. ಅಮರ ಕಾವ್ಯದ ಈ ಕಟ್ಟ ಕಡೆಯ ಪಂಕ್ತಿಯೊಂದನ್ನು ಬರೆದು ಮುಗಿಸಿದ ಮೇಲೆ ಈ ಕತ್ತಲೆಯ ಖೋಲಿಯಲ್ಲಿ ಕುಳಿತು ನಾನು ಮಾಡುವ ಕೆಲಸವೇನಿಲ್ಲ...........

'........ಈ ಮಹಾ ಕಾವ್ಯದ ಮುಕ್ತಾಯ ಚಿಹ್ನವನ್ನು ಮೂಡಿಸುವ ಮೊದಲು ಇವರಿಗೊಂದು ಮಾತು ಹೇಳಿ ಬರುತ್ತೇನೆ. ಅವಸರವಾಯಿತೆಂದು ಚಟಪಡಿಸಬೇಡ, ಎಲೆ-ಜವಾನನೆ! ನಿನ್ನ ಆತುರಕ್ಕಿಂತಲೂ ನನ್ನ ಆತುರವೆ ಹೆಚ್ಚಾಗಿದೆಯೆನ್ನುವುದನ್ನು ನೀನು ಹೇಗದು ಅರಿತುಕೊಳ್ಳಬಲ್ಲೆ? ವಿನಾಶದಿಂದ ಅವಿನಾಶಕ್ಕೆ ಹೋಗುವವನ ಹೃದಯ ಮೋಟವನ್ನು ನಿನ್ನ ಯಜಮಾನನಿಗೂ ಕಂಡು ಹಿಡಿಯುವುದಕ್ಕೆ ಸಾಧ್ಯವಿಲ್ಲ. ಪಾಪ, ಅವನಿಗೆ ಹೇಗೆ ತಿಳಿಯಬೇಕು? ಸತ್ತಿಲ್ಲ, ಸುಡುಗಾಡು ಕಂಡಿಲ್ಲ. ನಮಗೆ ಇರುವ ಪುಣ್ಯ ಅವನಿಗಿಲ್ಲದಿರುವುದನ್ನು ಕಂಡು ನನಗೆ ಕಡು ವಿಷಾದವಾಗುತ್ತಿದೆಯಲ್ಲ........!

'ಇಗೋ ನನಗಾಗಿ ಒಂದು ಕಂಬನಿಬೇಡ. ಒಂದು ಸ್ಮಾರಕಬೇಡ. ಒಂದು ಗೀತ ಬೇಡ. ಗೋರಿಯ ಮೇಲೆ ಬೆಳೆದ ಹಸಿರು ಹುಲ್ಲಿಗೆ ಮಂಜಿನ ಮಣಿ ಮುತ್ತನಿತ್ತು ಉದುರಿ ಬೀಳುವಂದು, ಆಚೆಗೆ ನಿಂತ ಮಾಮರದ ಹೂ ಗೊಂಚಲಲ್ಲಿ ಕೋಗಿಲೆ ತುಂಬಿ ಬಗ್ಗಿಸುವಂದು ನಿನಗೆ ನಡುಕ ಹುಟ್ಟಿದರೆ ಸಾಕು! ಏಳ್ ಜವಾನ, ಬಾ. ಇಗೋ, ತಂದ ಖಡ್ಗವನ್ನೂ ಕೈಗೆ ತೊಡಿಸು. ಮೌನದಿಂದ ಹೊಸ್ತಿಲಲ್ಲಿ ಹೆಜ್ಜೆ ಇರಿಸಿ ಮೌನದಿಂದ ತಿರುಗು.........' ಹೀಗೆಂದು ನಾನು ಹೇಳುತ್ತೇನೆ. ಊರಿಂದ ಊರಿಗೆ ಹೋಗುವಾಗ ಎಳೆಯರು ಪಡುವ ಸಂಭ್ರಮವನ್ನು ನಾನು ಬಲ್ಲೆನು. ತವರೂರಿಗೆ ಹೊರಟ ಮುತ್ತೈದೆಯ ಮಂದಹಾಸವನ್ನು

ನಾನು ನೋಡಿ ಒಲ್ಲೆ. 'ಅಂಧೇರಿ' ಶಿಕ್ಷೆಯನ್ನನುಭವಿಸಿ ಬಯಲಿಗೆ ಬಂದ ಸತ್ಯಾಗ್ರಹಿಯ ಸುಖವನ್ನು ಕೇಳಿಬಲ್ಲೆ. ಎಂದ ಮೇಲೆ ಸಾವು ಬಂದು ಕರೆದರೆ ಶೋಕವೇಕೆ? ಸ್ಮಾರಕ ವೇಕೆ? ಗೋರಿಯ ಮೇಲೆ ಕಲ್ಲು ನಿಲ್ಲಿಸಿ ಸತ್ತವರ ಕೀರ್ತಿಯನ್ನು ಶಾಶ್ವತಗೊಳಿಸಿದೆನೆಂದು ಹೆಮ್ಮೆ ಪಡುವವರನ್ನು ಕಂಡು ನನಗೆ ಅತೀವ ಮರುಕವಾಗುತ್ತಿದೆ. ಸತ್ತವರ ಮಾತಂತಿರಲಿ; ಇದ್ದವರಿಗೂ ನಡೆದಿರುವ ಈ ಹಬ್ಬದ ಯೋಜನೆ, ಸಂಭಾವನೆಯ ಹಂಚಿಕೆ, ಸತ್ಕಾರದ ಸಂಚಕಾರ ನೋಡಿ ನನಗೆ ಹುಚ್ಚು ನಗೆ ಬರುತ್ತಿದೆ. ಪಾಪ! ನಾಯಿಗೂ ನರನಿಗೂ ಎಂಜಲದ ಆಸೆ ಕೊನೆಗೂ ತಪ್ಪಲಿಲ್ಲ!

ಸಾಯುವದೂ ಬದುಕುವದೂ ಮನುಷ್ಯನ ಕೈಯಲ್ಲಿಯೇ ಇದೆ. ಸಾವು ಮನಜನ ಪರಿಕಾರ. ಬದುಕು ಅವನ ಲಿಪಿ. ಹೆರವರ ಕೈಯಿಂದ ಲಿಪಿ ಬರೆಯಿಸಿ ಕೃತಕೃತ್ಯನಾದೆನೆಂದು ಹೆಮ್ಮೆ ಪಡುವವನು ತನ್ನ ಮೂಗಿಗೆ ತಾನೇ ಮಸಿ ಬಡೆದುಕೊಳ್ಳುತ್ತಾನೆ. ಇದಕ್ಕಿಂತ ಇನ್ನೊಂದು ತಾತ್ಪರ ಅವನಿಗಿಲ್ಲ.

ಎಲವೊ ಮನುಷ್ಯ, ನೀನು ಕೃತಘ್ನ! ಎಂತಲೆ ಸಾವು ಹೇಳದೆ ಕೇಳದೆ ಹೊತ್ತು ತಪ್ಪಿಸಿ ಬಂದು ಮನೆಯ ಬಾಗಿಲು ಮುರಿದು ನಿನ್ನನ್ನು ಹೊತ್ತು ಕೊಂಡೊಯ್ಯುತ್ತದೆ. ಆಳು ತಪ್ಪಿ ನಡೆದರೆ ನಡಸಿಕೊಳ್ಳುವ ನಿನ್ನಲ್ಲಿ ತಪ್ಪಿರಬೇಕು. ನಿನ್ನ ಮನಸ್ಸಿನಲ್ಲಿ ಪೊಳ್ಳಿರಬೇಕು. ನಿನ್ನ ಎದೆಯಲ್ಲಿ ಅಳುಕವಿರಬೇಕು. ನೀನು ಮಾಡಿದ ದೋಷಾರೋಪಗಳನ್ನು ಮುಚ್ಚಿಕೊಳ್ಳುವುದಕ್ಕೆ ಜವಾನನಿಗೆ ನೀನು ಸಲ್ಲದ ಹಿರಿತನ ಕೊಟ್ಟಿರಬೇಕು. ಎಂತಲೆ ನಿನ್ನನ್ನು ಅಪಹಾಸಗೆಯ್ಯುತ್ತ ಸಾವು ಕೊಂಡೊಯ್ಯುತ್ತದೆ. ತುಸು ಕಣ್ದೆರೆದು ನೋಡು. ಅವರ ಕಾಲ ಬಳಿ ನಿಂತು 'ಹಸಾದ' ಬೇಡಿ ಅವರ ಹಿಂದಿನಿಂದ ನಾಯಿಯಂತೆ ತಲೆ ತಗ್ಗಿಸಿಕೊಂಡು ಹೋಗಿರುವುದನ್ನು ನೀನು ಗುರುತಿಸುವಿ.

ಸಾವಿಗಾಗಿ ಹೆದರುವವರಲ್ಲಿ ನೂರು ದೋಷ. ಸತ್ತವನಿಗಾಗಿ ಅಳುವವರಲ್ಲಿ ಸಹಸ್ರ ದೋಷ. ಬಹು ಕಾಲದ ಮೇಲೆ ತೀ ಹೋದವನನ್ನು ನೆನೆ ನೆನೆದು ಕಣ್ಣೀರು ಹಾಕುವವರಲ್ಲಿ ಹೇಳಬಾರದಷ್ಟು

ತಪ್ಪು. ಹೆಂಡತಿ ಅಳುತ್ತಾಳೆ, ಮಾಡಿಕೊಂಡ ಗಂಡ ಸತ್ತನೆಂದು. ತಾಯಿ ಅಳುತ್ತಾಳೆ, ಪೊರೆವ ಮಗ ಸತ್ತನೆಂದು. ತಂದೆ ಶೋಕಿಸುತ್ತಾನೆ, ಪಿತೃ ತರ್ಪಣಕ್ಕೆ ಮಗನಿಲ್ಲವೆಂದು. ಹಿರಿತನ ಹೊರುವ ಅಣ್ಣ ತೀರಿ ಹೋದ ನೆಂದು ತಮ್ಮಂದಿರು ದುಃಖಿಸುತ್ತಾರೆ. ಯಾರಿಗೂ ಗೊತ್ತಿಲ್ಲದಂತೆ ಮನೆಯ ಮೂಲೆಯಲ್ಲಿ ಕುಳಿತುಕೊಂಡ ಸಾಲಗಾರನ ಕಣ್ಣಂಚಿನಲ್ಲಿ ಕಂಬನಿ ಸುರಿಯುತ್ತಿವೆ. ಕೊಟ್ಟ ಮಗುವನ್ನು ತಿರುಗಿ ಕರೆದುಕೊಂಡ ಮಾತಾ ಪೃಥಿವಿ ಮೌನದಿಂದಲೇ ಇರುವುದು ಒಬ್ಬರ ಗಮನಕ್ಕೂ ಬಂದಿಲ್ಲ!

ಹೆಂಡತಿ ಬಂದು ತೋಳಬಂದಿ ಕೊಟ್ಟರೆ 'ಏನು ತಿಂಗಳ ಸೌಖ್ಯ' ಎನ್ನುತ್ತಾನೆ. ಸಾಲಗಾರ ಬಂದು ಶಿಕ್ಷಾ ಬಂಧ ನೀಡಿದರೆ 'ಮೂರು ತಿಂಗಳ ಬಂಧನ, ಸರಿಯಷ್ಟೇ!' ಎನ್ನುತ್ತಾನೆ. ಅಮರ ಸೌಖ್ಯವನ್ನೀವ ಶಾಂತಿ ದೂತ ಬಂದು 'ಬಾ ಅಣ್ಣಾ!' ಅಂದರೆ ಹೆಂಡತಿಯ ಮಕ್ಕಳ ಮುಖ ನೋಡಿ ಅಳುವವನನ್ನು ಕಂಡು ದನಕರದ ಕೊಟ್ಟಿಗೆಯಲ್ಲಿದ್ದ ಗುಪ್ಪಲಿ ಸಲಿಕೆ ಬುಟ್ಟಿಗಳೂ ಬಿದ್ದು ಬಿದ್ದು ನಗುತ್ತವೆ. ಸಾವಿನ ಮುಂದೆ ಮನುಷ್ಯನು ಇಷ್ಟು ಸಣ್ಣ ಪ್ರಾಣಿಯಾಗಿ ನಿಲ್ಲಬಾರದು!

ಸಾವು ಎರಡು ತೆರಃ ಬಡವರ ಸಾವು, ಶ್ರೀಮಂತರ ಸಾವು. ಅಲ್ಲಿಯೂ ಭಂಡವಾಳಶಾಹಿ ದರಿದ್ರಶಾಹಿಗಳ ತಾಕಲಾಟ! ಬಡವರ ಸಾವು ದೀರ್ಘ ನಿದ್ರೆ. ಮರುಭೂಮಿಯಿಂದ ಮಂದಾರ ಲೋಕಕ್ಕೆ, ದುಃಖದಿಂದ ಶಾಂತಿಗೆ, ದಾರಿದ್ರ್ಯದಿಂದ ದೌಲತ್ತಿಗೆ ಸಾವು ಬಡವನನ್ನು ಕರೆದೊಯ್ಯುತ್ತದೆ. ಶ್ರೀಮಂತನ ಸಾವು ಪಾಪದ ಪರೀಕ್ಷಾಕಾಲ. ಕತ್ತಲೆಯಿಂದ ಕೊಳ್ಳಕ್ಕೆ, ಸಾವಿನಿಂದ ನೋವಿಗೆ ಅವನು ಹೋಗುತ್ತಾನೆ. ಅವನ ಬಳಗದವರು ಅಳುತ್ತಾರೆ. ಸಭೆ ಕರೆದು ಠರಾವು ಪಾಸು ಮಾಡುತ್ತಾರೆ. ಸಂಘ ಸಂಸ್ಥೆಗಳ ಕಾರ್ಯಕ್ರಮಗಳನ್ನು ಮುಂದುವರಿಸ ಲಾಗುತ್ತದೆ ಮಹಾ ಮಹಾ ಮಂದಿರಗಳಲ್ಲಿ ಬೊಕ್ಕ ತಲೆಯಿಂದ ಜನಸ್ತೋಮ ಎದ್ದು ನಿಂತು ಪ್ರಾರ್ಥನೆ ಮಾಡುತ್ತದೆ. ಕಲ್ಲು, ಲೇಖನಿ, ಉಸಿರು—ಅಪರಿಮಿತವಾಗಿ ವೆಚ್ಚವಾಗುತ್ತದೆ. ಓ, ಎಂಥ ಬದಲಾವಣೆ!

ಸಾವಿಗೆ ಹೋಲಿಯಿಲ್ಲ. ಮಡಿವಂತರೇ ಹೋಲೆಯೆಂದು ತಿಳಿಸು ಕೊಳ್ಳುತ್ತಾರೆ. ಬಡವನಿಗೆ ಮಡಿಯಿಲ್ಲ, ಮೈಲಿಗೆಯಿಲ್ಲ. ಹೆಣದ ಹಾಗ,

ಆರಿವೆ ಅಂಚಡಿಯನ್ನು ಸುಖದಿಂದ ಅವರು ಎತ್ತಿಕೊಳ್ಳುತ್ತಾರೆ ಲೋಕ ದಲ್ಲಿ ತಿಳಿವು ಅಜ್ಞಾನಗಳ ವಿಪರ್ಯಾಸವೇ ಹಾಗೆ. ಕುರುಡನಿಗೆ ಬೆಳಕು ಕತ್ತಲು. ಕುಡುಕನಿಗೆ ಸರಾಯಿ ಹಾಲು. ಹೊಲೆ ಬದುಕು ಸೀಗಿದವನಿಗೆ ಸಾವು ಮೈಲಿಗೆಯಾಗಿ ತೋರುವುದಾದರೆ ಏನು ಆಶ್ಚರ್ಯ?

ಮಕ್ಕಳ ಮನಸ್ಸು, ಗುಡ್ಡದೋವರಿಯ ಝರಿ, ಮಲ್ಲಿಗೆಯ ಪರಿಮಳ ಎಲ್ಲಾ ಒಂದೇ ತೆರ. 'ಸಣ್ಣವರು ಶಿವನ ಕಡೆಗೇ ಬರುತ್ತಾರೆ' ಎಂದು ಕ್ರಿಸ್ತ ಹೇಳಿದುದುಂಟು. ಮಂಚದ ಮೇಲೆ ಸತ್ತವನನ್ನು ಮಲಗಿಸಿ ಮೇಲೆ ಹೊದಿಕೆಯೊಂದನ್ನೆಳೆದು ಅಳುತ್ತ ಕುಳಿತವರನ್ನು ಕಂಡು ಮಕ್ಕಳು ನಗುತ್ತವೆ, ತಮ್ಮ ತಮ್ಮೊಳಗೆ ಮಾತನಾಡುತ್ತವೆ. 'ಮಲಗಿಕೊಂಡವರಿಗೆ ಯಾಕೆ ಅಳುತ್ತಾರೆ?' ಎನ್ನುವುದೆ ಅವರ ಮಾತಿನ ವಿಷಯ. ಮಾತನಾಡಬಾರದೆಂದು ನೀವು ಅವರಿಗೆ ಗದರಿಸಿದರೆ ಅವೂ ಅಳುವುದಕ್ಕೆ ಪ್ರಾರಂಭಮಾಡುತ್ತವೆ. ನಿದ್ರೆಯನ್ನು 'ಸಾವಿನ ಸಮತೆ' ಎಂದು ಕರೆದ ಕವಿ ಮಕ್ಕಳ ನಡೆವಳಿಕೆಯಿಂದಲೇ ಈ ಮಾತನ್ನು ಎತ್ತಿ ಕೊಂಡಿರಬೇಕು.

ಸಾವು ಸಂಜೀವಿನೀ ಕಡ್ಡಿ. ಅದು ಮುಟ್ಟಿದ್ದೇ ಅಮೃತ. ಅಮೃತ ಪೀಯೂಷನದಿಂದ ಲೋಕದ ಜಂಜಡವೆಲ್ಲ ಮಾಯವಾಗಿ ಹೋಗುತ್ತದೆ. ಆಗ ದುಃಖವಿಲ್ಲ, ಕ್ರೋಧವಿಲ್ಲ, ಮಾನವಿಲ್ಲ, ಹಾನಿಯಿಲ್ಲ. ದ್ವಂದ್ವ ವಿಷಮತೆಗಳಿಂದ ಕೂಡಿದ ಬದುಕು ದೇಹವನ್ನು 'ಹೋಗು' ಎಂದು ನೂಕಿದಾಗ ಸಾವು ಬಂದು 'ಬಾ' ಎಂದು ಕರೆಯುತ್ತದೆ. ಬಂದವನನ್ನು ಭೂಮಿದೇವಿ ಎದೆತೆರೆದು ಬರಮಾಡಿಕೊಳ್ಳುತ್ತಾಳೆ. ಗೊತ್ತಿಲ್ಲದ ಮೂಕ ಜನತೆ ಸುಮ್ಮನೇ ಅಳುತ್ತದೆ.

ಗೋರಿಯ ಬಳಿ ಹೋಗಿ ಕುಳಿತರೆ ನನಗೆ ಸ್ಫೂರ್ತಿ ಬರುತ್ತದೆ. ಸತ್ತವರನ್ನು ಕಂಡರೆ ನನ್ನ ಮೈಯಲ್ಲಿ ವಿದ್ಯುತ್ ಸಂಚಾರವಾಗುತ್ತದೆ. ಮೈ ಜಡವಾದಾಗ, ಬಾಳು ಬೇಸರವಾದಾಗ ನಾನು ಸುಡುಗಾಡಿನೆಡೆಗೆ ನಡೆದು ಸಂಜೆಯ ವಿಹಾರವನ್ನು ಅಲ್ಲಿಯೇ ಮುಗಿಸುತ್ತೇನೆ. ಅಂದಿನ ಜಾವ ನನಗೆ ಭಾವಲಗ್ನ. ಸಮ್ಮುಖದಲ್ಲಿ ಮಣ್ಣುಗುಂಪಿ, ಮಣ್ಣಿನಲ್ಲಿ ಎದ್ದು ನಿಂತ 'ಮೃತಶಿಲಾ,' ಅಲ್ಲಲ್ಲಿ ಕುಳಿತು ಹಾಡುವ ಖಗ ಸಂತತಿ

ಆಚೆಗೆ ಈಚೆಗೆ ಅಂಚಿಲ್ಲದ ಭೂವ್ಯೋಮ ನೋಡುತ್ತ ಕುಳಿತರೆ ಮನೆಗೂ ಮಸಣಕ್ಕೂ ಅಂತರವೇ ಕಾಣುವುದಿಲ್ಲ!

ನಮ್ಮ ಶಿವು ಸಿದ್ದು.... ಎಲ್ಲರೂ ಇಲ್ಲಿ ಬಂದಿದ್ದಾರೆ. ಅವರು ಮಣ್ಣಿನ ಕೆಳಗೆ ಇದ್ದಾರೆ. ನಾನು ಮಣ್ಣಿನ ಮೇಲೆ ಇದ್ದೇನೆ. ಅವರು ನನ್ನೊಡನೆ ಇದ್ದು ಹೋದುದನ್ನು ಎಸು ಮಂದಿ ಬಲ್ಲರು? ತಾಯಿ ಕೊಟ್ಟುವದನ್ನು, ತಾಯಿ ಸ್ವೀಕರಿಸಿದುದನ್ನು ನೋಡಿದವರೆಷ್ಟು ಮಂದಿ ಸಾಕ್ಷಿ ಹೇಳಬಲ್ಲರು? ಇಷ್ಟೇ ಹೇಳಲಿಕ್ಕೆ ಬರುತ್ತದೆ. ಸಾವು ತಂದು ಅವರನ್ನು ಈ ಗೋರಿಯಲ್ಲಿ ಮಲಗಿಸಿದೆ. ಅವರಿಗೂ ನನಗೂ ಇಷ್ಟೇ ಅಂತರ!

ಆದುದರಿಂದ ನಾನು ಹೇಳುತ್ತೇನೆ. ಸಾವಿಗಾಗಿ ಮರುಕಬೇಡ. ಸತ್ತವರಿಗಾಗಿ ಕಂಬನಿ ಬೇಡ. ಸಾವಿನಲ್ಲಿ ಬಿಡುಗಡೆ ಇದೆ. ಇರುವುದರಲ್ಲಿ ಬಂಧನವಿದೆ. ಅಳುವುದಾದರೆ ಬಂಧನದಿಂದ ಬಿಡುಗಡೆಗೆ ಕರೆದೊಯ್ಯುವ ಧರ್ಮಕ್ಕಾಗಿ ಕಣ್ಣೀರು ಹಾಕಿರಿ.

ಮಹತ್ವಾಕಾಂಕ್ಷೆ

ಮಹತ್ವಾಕಾಂಕ್ಷೆಯುಳ್ಳ ಮನುಷ್ಯನನ್ನು ಮುಖದ ಮೇಲಿಂದಲೇ ಗುರುತಿಸಬಹುದು. ಅವನ ಕಣ್ಣಿನಲ್ಲಿ ಹೊಳಪು ಇರುತ್ತದೆ. ಕಣ್ಣಿನ ಗೊಂಬೆಗಳು ಕಾರ್ಯದ ದಾಹದಿಂದ ಕುಣಿಯುತ್ತಿರುತ್ತವೆ. ಹಣೆಯ ಮೇಲೆ ಮೂರು ಗೆರೆಗಳು ಹುಬ್ಬು ಏರಿಸಿದಾಗ ಮೂಡಿ ಸಿಲ್ಲುವುದಿಲ್ಲ. ಇಟ್ಟ ಹೆಜ್ಜೆಯಲ್ಲಿ ಐಕ್ಯತೆ ಇರುತ್ತದೆ. ಅದೇ ನಿರಾಸೆ ಹೊಂದಿದ ಮನುಷ್ಯನನ್ನು ನೋಡು. ಅವನು ಕುಹಕಿಯಾಗಿರುತ್ತಾನೆ. ಹೆರವರ ಹೆಚ್ಚಳವನ್ನೂ ಸೈರಿಸದಷ್ಟು ಸ್ಥೈರ್ಯಹೀನನಾಗಿರುತ್ತಾನೆ. ನೋಟ ದೂರ ದೂರ ಹರಿಯ ಬಿಟ್ಟು ಅಂಗೈಯಲ್ಲಿದ್ದದನ್ನೇ ಮರೆತುಬಿಡುತ್ತಾನೆ. ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡು ಸೋತು ನಿಂತವನು ಗಾಯಗೊಂಡ ಸರ್ಪದಂತಿರುತ್ತಾನೆ. ಯಾವ ಹೊತ್ತಿಗೆ ಜಿಪ್ಪಿಸಿ ಯಾರ ಮೇಲೆ ವಿಷ ಫೂತ್ಕರಿಸುತ್ತಾನೋ ಅವನೇ ಬಲ್ಲ.

ಮಹತ್ವಾಕಾಂಕ್ಷೆಯಿಲ್ಲದ ಮನುಷ್ಯ ರೆಕ್ಕೆಯನ್ನು ಮುರಿದುಬಿಟ್ಟ ಹಕ್ಕಿಯಂತಿರುತ್ತಾನೆ. ಅಲ್ಲಿ ಇಲ್ಲಿ ಬೀದಿಯಲ್ಲಿ ಬಿದ್ದ ಕಾಳುಗಳನ್ನು ತಿನ್ನುತ್ತ ಈಗೋ ಇನ್ನಷ್ಟು ಹೊತ್ತಿಗೋ ಬೆಕ್ಕಿನ ಬಾಯಿಗೆ ಬಿದ್ದು ಹೋಗುವ ಹಕ್ಕಿಯಂತೆ ಅವನ ಜೀವನ ರೀತಿ ಇರುತ್ತದೆ. ಅಂತ ಮನುಷ್ಯನ ಕೈಯಲ್ಲಿ ಹೊಣೆಗಾರಿಕೆಯ ಕಾರ್ಯವನ್ನೆಂದಿಗೂ ಕೊಡಬಾರದು.

ಮಹತ್ವಾಕಾಂಕ್ಷೆಯುಳ್ಳ ಜವಾನರನ್ನು ಇಟ್ಟುಕೊಳ್ಳಬಾರದು. ಮಹತ್ವಾಕಾಂಕ್ಷೆಯನ್ನು ತಳೆದು ವಿಫಲರಾದ ಮಂತ್ರಿಗಳಿರಬಾರದು. ಮೊದಲಿನವನು ಒಡೆಯನನ್ನು ವಂಚಿಸುವುದಕ್ಕೆ ಯತ್ನಮಾಡುತ್ತಾನೆ. ಎರಡನೆಯವನು ಸರ್ವದಾ ತನ್ನಕಾರ್ಯಸಾಧನೆಯಲ್ಲಿಯೇ ತೊಡಗಿರುತ್ತಾನೆ. ಆದರೆ ಯಾವಾಗಲೂ ಮಹತ್ವಾಕಾಂಕ್ಷೆಯುಳ್ಳವರ ಸಹವಾಸವನ್ನೇ ಮಾಡಬೇಕು. ಇಂತ ಸಹವಾಸವನ್ನು ಬಹು ಸೂಕ್ಷ್ಮವಾಗಿ ಅಭ್ಯಸಿಸಬೇಕು. ಅವರು ತಪ್ಪಿದಲ್ಲಿ ನಿನ್ನ ಕಣ್ಣಿರಬೇಕು. ಅವರಿಗೆ

ದೊರೆತ ಶ್ರೇಯದಲ್ಲಿ ನಿನ್ನ ಅನುಭವವನ್ನು ಸೇರಿಸಿ ಗುರಿಯ ಮೊನೆಯನ್ನು ಹರಿತವಾಗಿರಿಸಿಕೊಳ್ಳಬೇಕು. ಈ ದಿಸೆಯಲ್ಲಿ ಬಲೆ ಕಟ್ಟುವ ಜೇಡನೆ ನಿನ್ನ ಗುರುವಾಗಿರಲಿ.

ಜೀವನದಲ್ಲಿ ಎರಡೇ ಪಥಃ ಒಂದು ನಿರಾಶೆಯದು, ಇನ್ನೊಂದು ಮಹಾತ್ವಾಕಾಂಕ್ಷೆಯದು. ಅಜೇಯ್ಯವಾದ ಮಾನವನು ನಿರಾಸೆ ಹೊಂದಿದಾಗ ಅವನನ್ನು ದುರ್ಮರಣವೇ ಸ್ವಾಗತಿಸುವುದು. ಅವನು ಸಾಯುವ ಮುನ್ನವೆ ಸಾವಿರ ಬಾರಿ ಸತ್ತಿರುತ್ತಾನೆ. ಸರ್ವಾಧಿಕಾರಿ, ಸನ್ಯಾಸಿ, ಸೈನಿಕ ಇವರು ನಿರಾಸೆ ಹೊಂದಿದರೆ ಮಹತ್ವಾಕಾಂಕ್ಷೆಯ ಪಥದಲ್ಲಿ ಅಲೆಯುವ ಗುಳೇಕಾರರಾಗುವರು. ಅವರು ನೆಲಕ್ಕೆ ಬಿದ್ದ ನಕ್ಷತ್ರ. ಮಹತ್ವಾಕಾಂಕ್ಷೆಯ ದೀಕ್ಷೆಯನ್ನು ಕೊಂಡವನು ನಗುತ್ತ ಹೋರಾಡುತ್ತಾನೆ. ಒಬ್ಬಂಟಿಗನಾದರೂ, ಮಂಕುತಿಮ್ಮ ಹೇಳಿದಂತೆ ಬೀಳುವವರೆಗೂ ಹೋರಾಡುತ್ತಾನೆ. ಆತ ವೀರ ಸೈನಿಕ ಆತನಿಗೆ ಸೋಲೇ ಇಲ್ಲ. ಸೋತರೆ ಸ್ವರ್ಗ, ಗೆಲಿದರೆ ಸಾಮ್ರಾಜ್ಯ.

ಪ್ರತಿಯೊಬ್ಬ ಮನುಷ್ಯನಿಗೂ ಮಹತ್ವಾಕಾಂಕ್ಷೆಯಿರುತ್ತದೆ. ಆದರೆ ಅದು ಬೂದಿ ಮುಚ್ಚಿದ ಕೆಂಡ. ಅನಿಲಾನಲ ಸಂಯೋಗವಾಗದ ಮುನ್ನ ಕಾರ್ಯಸಿದ್ಧಿಯಾಗದು. ಗಾಳಿ ಬೀಸಬೇಕು, ತರಗೆಲೆ ಕೂಡಿ ಬರಬೇಕು, ಕಿಡಿ ಹೊತ್ತಬೇಕು, ಉಗಿ ಬೂದಿ ಮೇಲಕ್ಕೆ ಹಾರಿ ಕೆಂಡ ನಿಗಿನಿಗಿ ಯಾಗಬೇಕು. ಆಗ ಕಾರ್ಯಾಗ್ನಿಗೆ ಪುಟವೇರುತ್ತದೆ. ಮಹತ್ವಾಕಾಂಕ್ಷೆಯ ಉದಯದ ರೀತಿಯೆ ಹೀಗೆ. ಇದಾಗದೆ ಹೋದರೆ ಚಳಿಗಾಲದಲ್ಲಿ ಉದುರಿ ಬೀಳುವ ಎಲೆಯಂತೆ ಮನುಜನಿರವು. ಗಾಳಿ ಊದಲಿಲ್ಲವೇ ಗಿಡಮರಗಳನ್ನುಲುಗಿಸಬೇಕು. ಗುಡ್ಡ ಬೆಟ್ಟಗಳನ್ನು ತೂರಬೇಕು. ನಕ್ಷತ್ರ ಸೂರ್ಯರನ್ನು ಹಿಡಿದು ಚಂಡಾಟವಾಡಬೇಕು. ಅಲ್ಲಿಯೆ ನಿಜವಾದ ಮಹತ್ವಾಕಾಂಕ್ಷೆಯ ಮೊನೆ.

ಮಹತ್ವಾಕಾಂಕ್ಷಿಗೆ ಫಲ ಮಹತ್ವವಲ್ಲ. ಆದ್ದರಿಂದ ಅವನಿಗೆ ತೃಪ್ತಿಯೂ ಇಲ್ಲ. 'ನಿನಗೆ ಸಮಸ್ತ ಭೂಮಂಡಲವನ್ನಾಳುವ ಸರ್ವಾಧಿಕಾರಿಯ ಪ[illegible]ನ್ನು ಕೊಡುತ್ತೇನೆ. ಮಹತ್ವಾಕಾಂಕ್ಷೆಯನ್ನು ಬಿಟ್ಟು

ಬಿಡು' ಎಂದು ಯಾರಾದರೂ ಆತನಿಗೆ ಕೇಳಿದರೆ ಹುಬ್ಬಿನ ಕೊಂಕಿನ ಮೂಲಕವೆ ಉತ್ತರ ಹೇಳುವನೆ ಹೊರತು ಒಂದು ಮಾತು ಕೂಡ ಹೆಚ್ಚಿಗೆ ಅವನಾಡಲಾರನು.ಉರುಳಿ ಬಿದ್ದ ಸರ್ವಾಧಿಕಾರಿಯನ್ನು ನೋಡಿ ಇತಿಹಾಸ ನಗುತ್ತದೆ. ಆದರೆ ಮಹತ್ವಾಕಾಂಕ್ಷೆಯನ್ನು ನಚ್ಚಿ ಹೋರಾಡಿದವನನ್ನು ಕಂಡು ಇತಿಹಾಸ ಸ್ತುತಿಗೆಯ್ಯುವುದು. ನೆಪೋಲಿಯನ್‌ನೇ ನಮಗೆ ಪ್ರಥಮ ಆದರ್ಶವಾದಿಯಾದ ಮಹತ್ವಾಕಾಂಕ್ಷಿ. ಅವನಂತಹರ ಶಬ್ದಕೋಶದಲ್ಲಿ 'ಸಾಧ್ಯವಿಲ್ಲ' ಎಂಬಕ್ಷರದ ಗುಂಪಿಗೆ ತಾಣವೇ ಇಲ್ಲ.

ಪೃಥಿವಿಯ ಆದಿಯಲ್ಲಿ ಮೊತ್ತ ಮೊದಲು ಹುಟ್ಟಿದವನ ಹೆಸರೇ ಮಹತ್ವಾಕಾಂಕ್ಷಿ. ಹುಟ್ಟಿಸಿದವನಿಗೆ ಸಿಟ್ಟು ಬಂದಿತು. ಅವನಿಗೆ ಅಡ್ಡ ಕಟ್ಟಲು ಹೆಣ್ಣೊಂದನ್ನು ಕಳುಹಿಸಿದ. ಕ್ರಮೇಣವಾಗಿ ಪ್ರಪಂಚವನ್ನೇ ಬೆಳೆಸಿದ! ಇಷ್ಟನ್ನೆಲ್ಲ ಗೆಲಿದು ತನ್ನ ಹತ್ತಿರ ಬಂದು ನಿಲ್ಲುವುದಕ್ಕೆ ಮಹತ್ವಾಕಾಂಕ್ಷಿಗೆ ಸಾಧ್ಯವೇ ಎಂಬ ಹೆಮ್ಮೆ ಬ್ರಹ್ಮನಿಗೆ! ಅವನ ಹೆಮ್ಮೆಯ ಇದಿರು ನಿಲ್ಲುವ ಶಕ್ತಿ ಪ್ರಾಪಂಚಿಗನಿಗೆ ಇಲ್ಲವಾಯಿತು. ಒಂದು ಕೈ ನೋಡಿಯೆ ಬಿಡಬೇಕೆಂಬ ಹಟ ಬರುವುದಾದರೆ ಹೆಣ್ಣಿನ ಕೈಯನ್ನು ಹಿಡಿಯದ ಹಟಮಾರಿಗೇ ಬರಬೇಕು!

ಬ್ರಹ್ಮಚಾರಿಗೆ ಯಾರ ಹಂಗೇನು?

ಮಹತ್ವಾಕಾಂಕ್ಷೆಯ ನಿಚ್ಚಣಿಕೆ ಆಗಸವೆತ್ತರಕ್ಕಿದೆ. ಅದರ ಒಂದೊಂದು ಹಲ್ಲು ಗರಗಸ. ನಿರ್ಮಲ ಮನಸ್ಸಿನವನು ಅದನ್ನೇರಬಲ್ಲನು. ಆತನಿಗೆ ದಾರಿಯಲ್ಲಿ ಅಡೆತಡೆಗಳು ಬಂದರೂ ಗುರುವಿನ ನೆರವಿನಿಂದವನು ದಾಟಲರಿಯನು. ಆದರೆ ಅದೇ ಕುಹೇತುವುಳ್ಳ ಮಹತ್ವಾಕಾಂಕ್ಷಿ ನಿಚ್ಚಣಿಕೆಯನ್ನೇರುತ್ತಲೆ ದಾರಿ ತಪ್ಪುತ್ತಾನೆ. ದಾರಿಯಲ್ಲಿ ದುಃಖ ದುಮ್ಮಾನಗಳು ಅವನನ್ನಿದಿರುಗೊಳ್ಳುತ್ತವೆ. ವಿಷದ ಕಡಲು ದಾಟಿ ಪಾಪ ಲೋಕವನ್ನು ಅವನು ಸೇರುತ್ತಾನೆ. ಅವನಿಗೆ ಬಂದ ಗತಿ ದುರ್ನಿರೀದ್ಯ !

ಕ್ರಿಸ್ತನಿಗೆ ಮಹತ್ವಾಕಾಂಕ್ಷೆಯಿತ್ತು. ಪೈಗಂಬರನಿಗಿತ್ತು. ಮಹಾವೀರನಿಗಿತ್ತು. ಮಹಾತ್ಮ ಗಾಂಧೀಜಿಗಿತ್ತು. ಲೋಕದ ಮಹಾ ಪುರುಷರನ್ನೆಲ್ಲ ತನ್ನ ಪಕ್ಷಕ್ಕೆ ಸೇರಿಸಿಕೊಂಡಿತ್ತು, ಮಹತ್ವಾಕಾಂಕ್ಷೆ. ನೀನೂ

ಇನ್ನೊಂದು ವಿಧ. ಸಾಹಿತ್ಯವೂ ಧರ್ಮವೂ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದಬೇಕು. ಸಿರಿವಂತಿಕೆಯ ಫಲವಾಗಿ ಕಿಮ್ಮತ್ತಿನ ಪುಸ್ತಕಗಳು ಒಂದು ಖೋಲಿಯಲ್ಲಿ ಅಂದವಾದ ಕಪಾಟಿನಲ್ಲಿ ಅಲಂಕೃತವಾಗುವವು. ದಾರಿದ್ರ್ಯದ ಫಲವಾಗಿ ಬೀಸುವ ಕಲ್ಲಿನ ಮುಂದೆ ಕುಳಿತಾಗ, ರೂಲಿನ ಮೇಲೆ ನಿಂತಾಗ ಮೂಡಿ ಬಂದ ಮಂಜಿನ ಮುತ್ತುಗಳು ಹೆರವರ ಸುಖಕ್ಕೆ ನೆರವಾಗಬೇಕು.

ಇದೆಲ್ಲ ವಿದಿತವಿದ್ದರೂ ಜನತೆ ಸಿರಿವಂತಿಕೆಯ ಸೋಗನ್ನೆ ಹಾಕ ಲೆಳಸುತ್ತಿದೆ. ಬಡತನದಿಂದ ಸಿಡಿದು ಹೋಗಲೆಳಸುವ ಮಧ್ಯಮ ತರಗತಿಯ ಜನವರ್ಗದ ಪ್ರಮಾಣ ಹೆಚ್ಚುತ್ತಲೆ ಇದೆ. ಸಿರಿವಂತ ಗಾಳದ ಮೀನ. ಮಧ್ಯಮ ವರ್ಗದ ಮನುಷ್ಯ ತ್ರಿಶಂಕುವಿನ ಅಪರಾವತಾರ. ಬಡವ ನೆಲದ ಮಗ. ಈ ಮೂವರ ಆತ್ಮಪ್ರಕೃತಿಗೆ ಇನ್ನೂ ಕಾಲ ಬಂದಂತೆ ಬಣ್ಣ ಬರುತ್ತಲೆ ಹೋಗುತ್ತದೆ.

ಇವಿಷ್ಟು ತೀರ ವಿಪರೀತವಾಗುವ ಕಾಲ ಬಂದಿಲ್ಲ ಒಂದು ದಿನ ಬಂದೇ ತೀರುತ್ತದೆಯೆಂದು ನಾನು ಸಾಕ್ಷಿ ಹೇಳುತ್ತೇನೆ. ಆ ಕಾಲ ಸನ್ನಿಹಿತವಾದಾಗ ಸಿರಿವಂತನು ನೆಲದ ಮಗ ಬಿತ್ತಿದ ಬೆಳೆ ಕಾಯುವ ಬೆದರು ಆಗುತ್ತಾನೆ. ಮಧ್ಯಮ ತರಗತಿಯ ಬಣ್ಣ ಬಳೆದುಕೊಳ್ಳಲು ಹಾತೊರೆಯುವವನು ಮೃಗವಾಗುತ್ತಾನೆ. ನೆಲದ ಮಗನೇ ದೇವರಾಗುತ್ತಾನೆ.

ಪ್ರವಾಸ

ನೀನು ಮನುಷ್ಯನಾಗಿಯೆ ಉಳಿಯಲಿಚ್ಛಿಸಿದರೆ ಋಷಿ ಹಾಡಿದ ದಿವ್ಯ ಕಾವ್ಯಗಳನ್ನಾದರೂ ಓದು; ಇಲ್ಲವೆ ದೇವನಿರ್ಮಿತವಾದ ದೇಶವನ್ನಾದರೂ ಸಂದರ್ಶಿಸಿ ಬಾ. ದೇಶ ಸಂಚಾರ ಮಾಡಿ ಬಂದ ಬುದ್ಧಿಶಾಲಿಯ ಬಾಳು ಕೈಟಭಾರಾತಿಯ ವಿಶಾಲೋರಸ್ಥಳಕ್ಕೆ ಕೌಸ್ತುಭಮಣಿಯಂತೆ ಸೊಗಯಿಸುವುದು. ದೇಶಕೋಶಗಳ ಸಂಪರ್ಕವಿಲ್ಲದವನ ಬಾಳು ಬಂಜರು. ಅಲ್ಲಿ ಏನು ಬಿತ್ತಿದರೂ ಬೆಳೆಯುವುದಿಲ್ಲ. ಬಿತ್ತಿದ ಕಾಳಿಗೂ ಕೂಡ ಹುಳ ಹಿಡಿಯುತ್ತದೆ.

ಹುಡುಗರು ಓದಬೇಕು. ಪ್ರಾಯದವರು ಪ್ರವಾಸ ಕೈಕೊಳ್ಳಬೇಕು. ಮುದುಕರು ಗುಡಿ ಹಿಡಿಯಬೇಕು. ಓದಿದವನು ಪಯಣಿಗನಾದರೆ ಅವನಿಗೆ ಗುಡಿಯ ಹಂಗು ಬೇಡ. ಅವನು ನೋಡಿ ಬಂದ ಸಂಗತಿಗಳ ವಿವರದಿಂದ ಈ ಮಾತಿನ ಸತ್ಯತೆಯನ್ನು ಕಂಡುಕೊಳ್ಳಬಹುದಾಗಿದೆ. ಮುಪ್ಪುಬಂದ ಕಾಲಕ್ಕೆ ಕಾಶಿ ರಾಮೇಶ್ವರಗಳನ್ನು ನೋಡಿ ಗಂಗಾ ಕಾವೇರಿಯಲ್ಲಿ ಮಿಂದು ಬರಬೇಕೆನ್ನುವವರಿಗೆ ಮುಪ್ಪಿನ ಹುಚ್ಚು ಹಿಡಿದಿರುತ್ತದೆ. ಅವರ ಹುಚ್ಚನ್ನು ನೋಡಲಿಕ್ಕಾಗದವರು ಮಾತ್ರ ಅವರನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಬಹುದು. ಆದರೆ ದಾರಿಯ ಬಳಲಿಕೆಯಿಂದ ಮೈ ಕೈ ನೋವಾಗಿ ಕಾಶಿ ರಾಮೇಶ್ವರಗಳಲ್ಲಿ ಅವರು ಸತ್ತು ಹೋದರೆ ಇಲ್ಲವೆ ನದಿಗಳಲ್ಲಿ ಮುಳುಗಿ ಹೋದರೆ ಅವರಿಗೆ ಮೋಕ್ಷ ಸಿಗುತ್ತದೆಯೆಂದು ಭಾವಿಸುವವರು ಶುದ್ಧ ಮೂರ್ಖರು. ಏಕೆಂದರೆ ಎದೆಯ ಗೂಡಿನಲ್ಲಿಯೆ ವಿಶ್ವನಾಥನುಂಟು. ಭಾವದ ಮರೆಯ ಬ್ರಹ್ಮ್ರದಲ್ಲಿಯೆ ಪಾಪವಿನಾಶಿನಿ ಜಾಹ್ನವಿಯುಂಟು.

‘ನೀನು ಕಡಲು ಎಣಿಸುತ್ತೀಯೋ, ಚಿಕ್ಕೆಗಳನ್ನು ಎಣಿಸುತ್ತೀಯೋ’ ಎಂಬ ಪ್ರಶ್ನೆಯೊಂದನ್ನು ಪ್ರತಿಭಾವಂತ ಕವಿಗೂ ಶ್ರೇಷ್ಠ ಇತಿಹಾಸಕಾರನಿಗೂ ಪ್ರಶ್ನೆ ಹಾಕಿದರೆ ಅವರಿಬ್ಬರೂ ಏಕಕೊರಲಿನಿಂದ ‘ಚಿಕ್ಕೆಯನ್ನೇ ಎಣಿಸುತ್ತೇವೆ’ ಎಂದು ಉತ್ತರ ಕೊಡುತ್ತಾರೆ. ಕೊಪ್ಪರಿಗೆಯಂತಿಪ್ಪ ಆಗಸದ ಅಂಚಿನಲ್ಲಿ ಮಿನಿ ಮಿನಿ ಮಿಂಚುತ್ತಿರುವ ನಕ್ಷತ್ರವನ್ನು

ಮುಟ್ಟುವವರೆಗೂ ಅವರಿಬ್ಬರ ಆತ್ಮಕ್ಕೆ ಶಾಂತಿಯೇ ಇಲ್ಲ. ಓದಿದಷ್ಟೂ ಕಾವ್ಯವ್ಯೋಮ ವಿಸ್ತಾರ; ನಡೆದಷ್ಟೂ ಭೂ ದಾರಿ ಉದ್ದುದ್ದ. ಜೀವನ ಅಪಾರ. ಕಾಲ ಅತ್ಯಲ್ಪ. ಇರುವ ಕಾಲವನ್ನೆಲ್ಲ ಸೋಸಿ ಕುಡಿಯ ಬೇಕೆಂದು ಅವರು ನಿಮಿಷ ನಿಮಿಷಕ್ಕೂ ಹಾತೊರೆಯುತ್ತಾರೆ. ಬಾಳಿನ ಜಂಜಡ ಅವರಿಗಿಲ್ಲ. ಭೂವಿಲಾಸಿನಿಯ ಕುಡಿಗಣ್ಣ ನೋಟ ಅವರ ಮನಸ್ಸನ್ನು ಸೆಳೆಯದು. ಅವರ ಪಾಲಿಗೆ ಅನುಭವವೇ ಅಮೃತ. ಕಾವ್ಯ ಓದಿ, ಪ್ರವಾಸ ಕೈಕೊಂಡು ತಮ್ಮ ಮನದ ಸಂತೃಪ್ತಿಯನ್ನು ಪಡೆಯ ಬಿಳಸುತ್ತಾರೆ. ಆ ಜಾವ ಬರುವವರೆಗೂ ಅವರ ಪಾಲಿಗಿಲ್ಲ ವಿಶ್ರಾಂತಿ.

ಮನೆಯ ಜಾಡ್ಯ ಹಿಡಿದವರೇ ಬಹು ಸಂಖ್ಯಾಕರರು. ಅವರಿಗೂ ಸೋತಿನ ಮೊಲೆಗೂ ಏನೂ ಅಭ್ಯಂತರವೆ ಇಲ್ಲ. ಮನೆಯಿಂದ ಅವರನ್ನು ಅಗಲಿಸಿ ಹಂಪೆಗೆ ಕರೆದೊಯ್ದರೆ 'ಏನು ಕೊಂಪೆ' ಅನ್ನುತ್ತಾರೆ. ಅಜಂತಾ ಬೇಲೂರುಗಳನ್ನು ತೋರಿಸಿದರೆ 'ಏನು ಕಲ್ಲು ಬಂಡೆ' ಎನ್ನುತ್ತಾರೆ. ವೂಲರ್ ಸರೋವರದಿಂದ ಕೈಲಾಸಕ್ಕೆ ಕೊಂಡೊಯ್ದರೆ 'ಏನು ಬರೀ ದಾರಿ' ಎಂದೆನ್ನುತ್ತಾರೆ. ಅಂತಹನಿಗೆ ಬುದ್ಧಿ ಬರಲೆಂದು ನೀನು ಶ್ರಮವಹಿಸಿ ತೋರಿಸಿದರೂ ತಿರುಗಿ ಮನೆಗೆ ನಡೆದಾಗ ಮೂರ್ಖನನ್ನೇ ಜತೆಯಲ್ಲಿ ಕರೆದುಕೊಂಡು ಬರುವಿ.

ಪ್ರವಾಸಕ್ಕೆ ಹೋಗುವವನು ತನ್ನೊಡನೆ ಇಬ್ಬರನ್ನೆ ಕರೆದುಕೊಂಡು ಹೋಗಬೇಕು. ಒಬ್ಬನಿದ್ದಲ್ಲಿ ಏಕಾಂತವಿರುತ್ತದೆ. ಇಬ್ಬರಿದ್ದಲ್ಲಿ ಮಾತಿನ ಕೊಂಡುಕೊಳ್ಳಿ ಇರುತ್ತದೆ. ಮೂವರಿದ್ದಲ್ಲಿ ಗುಂಪು ಇರುತ್ತದೆ. ಅದಕ್ಕೂ ಮಿಕ್ಕಿದರೆ ಅಲ್ಲಿ ಸಂತೆ ನೆರವೇರುತ್ತದೆ. ಪಯಣಿಗನು ಇದನ್ನು ಅತ್ಯಗತ್ಯವಾಗಿ ಗಮನಿಸತಕ್ಕದ್ದು. ಆದುದರಿಂದ ಅವನು ಇಲ್ಲಿ ಹೇಳುವ ಇಬ್ಬರನ್ನೆ ಕರೆದುಕೊಂಡೊಯ್ಯಲಿ. ಅವರು ಯಾರೆಂದರೆ: ಇತಿಹಾಸ ಮತ್ತು ದಿನಚರಿ. ಇವಕ್ಕಿಂತ ಒಬ್ಬನನ್ನು ತನ್ನೊಡನೆ ಕೂಡಿಸಿಕೊಳ್ಳ ಬಾರದು. ಜವಾನನೂ ಬೇಡ. ಅವನಿಗೆ ದಾರಿಯಲ್ಲಿ ಬೇನೆ ಬೇಸರ ಗಳುಂಟಾದರೆ ಪಯಣಿಗನಿಗೆ ತಾಳ್ಮೆಯು ಉಳಿಯಲಾರದು. ತನಗೆ ಮಾತ್ರ ಬೇನೆ ಬರದಂತೆ ಪಯಣಿಗನು ಎಚ್ಚರ ವಹಿಸುವದು ತುಂಬ ಅಗತ್ಯ.

ಯುದ್ಧಕ್ಕೆ ಹೊರಟ ಸೈನಿಕನಿಗಿರುವ ಸಾಮಗ್ರಿಯ ಪಟ್ಟಿಯೂ, ಪ್ರವಾಸಿಗನ ಸಾಮಗ್ರಿಯ ಪಟ್ಟಿಯೂ ಒಂದೇ ರೀತಿಯದು. ತಾನು ತಿರುಗಲಿರುವ ಪ್ರದೇಶದ ವಿಸ್ತಾರ, ಅದರ ಸಾಹಿತ್ಯಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಹಿನ್ನೆಲೆ, ಅಲ್ಲಿ ಯಾರು ಯಾರು ಸತ್ಯಕ್ಕಾಗಿ ತತ್ವಕ್ಕಾಗಿ ಹೋರಾಡಿ ಮಡಿದರು ಇತ್ಯಾದಿಯಾದ ವಿವರವನ್ನು ಅವರಿಬ್ಬರೂ ಮೊದಲಿಗೇನೆ ಸಂಪಾದಿಸಬೇಕಾದದ್ದು ಅಗತ್ಯ. ಹೆರವರಿಗಾಗಿ ಹೋರಾಡುವ ಸೈನಿಕನೂ, ಆಕಾಂಕ್ಷೆಯಿಂದ ಪ್ರೇರಿತನಾದ ಪಯಣಿಗ ನನ್ನು ಹಿಂಬಾಲಿಸುವ ಜವಾನನೂ ಸಮ.

ಹಣದ ಆರಾಧಕನಿಗೂ, ಪ್ರಕೃತಿಯ ಪೂಜಕನಿಗೂ ಪ್ರವಾಸದ ಹಂಬಲು ಗಂಟು ಬಿದ್ದಿರುತ್ತದೆ. ವರ್ತಕನೂ ವಾರಾಂಗನೆಯೂ ನನ್ನ ಕಣ್ಣಿನಲ್ಲಿ ಒಂದೇ. ಸಾಹಿತ್ಯವನ್ನು ಪ್ರಕೃತಿಯನ್ನು ಮನಮುಟ್ಟಿ ಪೂಜಿಸುವವನು ಪಡೆಯುವ ಭಾಗ್ಯವನ್ನೇ ಐಕ್ಯಕ ಮನಸ್ಸಿನಿಂದ ಹೊರವಂಟ ಪಯಣಿಗನೂ ಪಡೆಯುತ್ತಾನೆ. ಈ ದಿಶೆಯಲ್ಲಿ ದಾರಿ ಕವಲೊಡೆದಿದ್ದರೂ ಅವು ಮುಟ್ಟುವ ತಾಣ ಒಂದೇ ಒಂದು. ವರ್ತಕನು ದಾರಿಯಲ್ಲಿ ಸತ್ತರೆ ಲೋಕಕ್ಕೆ ಲೋಕವೆ ಬಳಸಿಕೊಳ್ಳುವ ಜ್ಞಾನ ಭಾಂಡಾರದ ಕೀಲಿಯು ಕೈ ದೊರೆಯುತ್ತದೆ. ಪೇಜ, ನ್ಯೂಸಿಜ್, ಹುವೆನ್‌ತ್ಸ್ಯಾಂಗ ಮೊದಲಾದವರು ನಮಗೆ ಈ ದಾರಿಯಲ್ಲಿ ಉದಾಹರಣೆ ಯಾಗಿ ತೋರಿದ್ದಾರೆ.

ಪ್ರವಾಸಿಗನು ದಾರಿಯಲ್ಲಿ ಕಂಡ ಊರು ನಂಬಿ ನಿಲ್ಲಬಾರದು; ಹೆಣ್ಣು ನೋಡಿ ನಗಬಾರದು; ಮಾತು ಬಿಚ್ಚಿ ಆಡಬಾರದು. ಆತನು ಗಂಭೀರನಾಗಿ ಪಯಣ ಸಾಗಿಸಬೇಕು. ಯಂತ್ರಕ್ಕಿಂತಲೂ ಯಾಂತ್ರಿಕ ವಾಗಿ, ಕುಸುಮಕ್ಕಿಂತಲೂ ಕೋಮಲವಾಗಿ, ವಜ್ರಕ್ಕಿಂತಲೂ ಕಠೋರವಾಗಿ ಅವನು ವರ್ತಿಸಬೇಕು. ಪೃಥಿವಿ ವಿಶಾಲವಿರುವುದರಿಂದ ಅವನಿಗೆ ಅಲ್ಲಲ್ಲಿ ನಿಂತು ಕಾಲಕಳೆಯಲು ಸಮಯವಿಲ್ಲದುದರ ಮೂಲಕ ಯಾಂತ್ರಿಕ ವಾಗಿರಬೇಕು ಅವನ ಕಾರ್ಯಕ್ರಮದ ಪಟ್ಟಿ. ಕಲೆಯ ಆರಾಧನೆಯ ಫಲವಾಗಿ ಹೃದಯಕ್ಕೆ ಹೃದಯವೇ ಸಿಡಿದೊಡೆದು ಹೋಗುವ ಸಮಯ ಪ್ರಾಪ್ತವಾದಂದು ಅವನ ಕಣ್ಣಿನ ಪಕಳೆಗಳಿಂದ ಕಂಬನಿ ದಳದಳ

ಅವರನ್ನು ಸೇರಬೇಕೆಂದು ಮನಸ್ಸು ಮಾಡಿದರೆ ಬಹು ದೀರ್ಘ ವಿಚಾರ ಮಾಡಿ ನಿರ್ಧಾರಕ್ಕೆ ಬಾ. ಆ ದಾರಿ ಬಹು ದುಃಖತಮವಾದದ್ದು. ವಿಷ ಕುಡಿಯಬೇಕಾಗುತ್ತದೆ. ಎದೆಗೆ ಮೊಳೆ ಬಡಿಸಿಕೊಳ್ಳಬೇಕಾಗುತ್ತದೆ. ಗುಂಡಿನೇಟಿಗೆ ಎದೆ ಚಾಚಬೇಕಾಗುತ್ತದೆ. ಇಷ್ಟೆಲ್ಲ ಕಷ್ಟದ ದಾರಿ ಅವರದಾದರೂ ಅವರನ್ನೇ ಕೇಳಿದರೆ 'ನಮ್ಮ ದಾರಿಯೆ ಬಹು ಸುಲಭವಾದುದು' ಎಂದೆನ್ನುತ್ತಾರೆ ಅವರು. ನಿನಗೂ ಅದೇ ಸರಿಯೆಂದರೆ ನಾನು ನಿರ್ಮಲ ಮನಸ್ಸಿನಿಂದ ನಿನಗೆ ಹಣ್ಣು ಕಾಯಿ ಕೊಡುತ್ತೇನೆ. ಗುರುವಿನ ದಾರಿ ನಿನ್ನದಾಗಲಿ ; ಹರ ಕಾಯಲಿ !

ಸಿರಿವಂತಿಕೆ

ನಾನಲ್ಲ, ಪ್ರವಾದಿಗಳೇ ಹೇಳಿದ್ದಾರೆ :

'ಸಿರಿವಂತನ ಸಾವು ಕೂಡ ಮಾನಹೀನವಾದದ್ದು!' 'ಒಂಟೆಯು ಸೂಜಿಯ ಮೊನೆಯಲ್ಲಿ ಹಾಯ್ದು ಹೋದರೂ ಹೋಗಬಹುದು; ಆದರೆ ಸಿರಿವಂತನಿಗೆ ದೇವನ ಲೋಕದಲ್ಲಿ ಕಾಲಿಡುವುದಕ್ಕೂ ಆಗದು'

ಆದರೂ ಕೂಡ ಲೋಕದಲ್ಲಿ ಸಿರಿವಂತಿಕೆಗಿರುವ ಸ್ಥಾನಮಾನಗಳನ್ನು ನೋಡಿದರೆ ಅದೇ ಲೇಸು ಎನ್ನುವ ಹಾಗಾಗುತ್ತದೆ. ಸಿರಿವಂತಿಕೆಯ ಜತೆಯಲ್ಲಿ ಬಂಜೆ ಹೆಂಡತಿ, ದೇಶಗತಿಯ ಪಟ್ಟ, ಪಾಪದ ಬುದ್ಧಿ, ರೋಗ ರುಜಿನಗಳ ಕಿರೀಟವನ್ನು ಒಂದು ಪರದೆಯಲ್ಲಿರಿಸಿ, ಬಡತನದ ಜತೆಯಲ್ಲಿ ಅಷ್ಟಪುತ್ರ ಸಂತಾನವನ್ನು ಪಡೆದು ಬಂದ ಹೆಂಡತಿ, ಕೈಕೂಲಿಯ ಪಡಿ, ಬಲಾಢ್ಯವಾದ ದೇಹಸಂಪತ್ತು ಇವುಗಳನ್ನು ಇನ್ನೊಂದು ಪರದೆಯಲ್ಲಿರಿಸಿ ನಿನಗೆ ಯಾವುದು ಬೇಕು ಎಂದು ಕೇಳಿದರೆ ದೆವ್ವ ಹೇಳುತ್ತದೆ, ನನಗೆ ಮೊದಲನೆಯದೇ ಬೇಕೆಂದು.

ಈ ಲೋಕದಲ್ಲಿ ಐಶ್ವರ್ಯದಿಂದೊಡಗೂಡಿದವರು ಏನನ್ನು ಸಂಪಾದಿಸಿಲ್ಲ? ಅವರ ಕಪಿಮುಷ್ಟಿಗೆ ಯಾವುದು ಒಳಗಾಗದೆ ಇಲ್ಲ? ಸತ್ಯವಾದಿಯಾದ ಒಬ್ಬ ಬಡವನನ್ನು, ಒಬ್ಬ ಕಡು ಮೂರ್ಖ ಶ್ರೀಮಂತನನ್ನು ಚುನಾವಣೆಗೆ ನಿಲ್ಲಿಸಿದರೆ ಸರ್ವಾನುಮತದಿಂದ ಮೂರ್ಖ ಶ್ರೀಮಂತನೇ ಆರಿಸಿ ಬರುವಲ್ಲಿ ಇಂದಿನ ನಮಗೆ ಆಶ್ಚರ್ಯವೇ ಇಲ್ಲದಾಗಿ ಹೋಗಿದೆ. ಚುನಾವಣೆಯಲ್ಲಿ ರಾಜಕೀಯವಿರುತ್ತದೆಯೆಂದೂ, ರಾಜಕಾರಣವು ಮೂರ್ಖನು ಆಡುವ ಚದುರಂಗದಾಟವೆಂದೂ ನೀವು ಹೇಳುವುದಾದರೆ ಒಬ್ಬ ದಾನಿಯನ್ನು ಎತ್ತಿಕೊಳ್ಳೋಣ.

ಮಹಾರಾಜನೊ, ದೇಸಾಯಿಯೊ, ಸೆಟ್ಟಿಸರದಾರರೊ ಸಾರ್ವಜನಿಕ ಸಂಸ್ಥೆಗಳಿಗೆ ಲಕ್ಷಗಟ್ಟಲೆ ದಾನವನ್ನು ಕೊಡುವುದನ್ನು ಕಂಡು ಜನ ಅಚ್ಚರಿಪಡುತ್ತದೆ. ಬಡವನಿಗೆ ಅದರಲ್ಲಿ ಸೋಜಿಗವೇನು ಬರಬೇಕು? ಅವನಿಗಿರುವ ಬಡತನದಲ್ಲಿ ಹೊರಳಾಡಲು ಆಸ್ಪದವೇ ಇಲ್ಲ. ಶ್ರೀಮಂತನ ದಾನ ಒಂದು ಕೈಯಿಂದ ಹೋಗಿ ಇನ್ನೊಂದು ಕೈಯಿಂದ ಬರುತ್ತದೆ.

ಮೇಲೆ ಕೀರ್ತಿಯ ಕಮೀಶನ್ ಒಂದು ಹೆಚ್ಚಿಗೆ ಬರುತ್ತದೆ. ಒಬ್ಬ ಕೀರ್ತಿವಂತ, ಸಿರಿವಂತನ ಹೆಸರಿನ ಮರೆಯಲ್ಲಿ ಸಹಸ್ರಾರು ಜನರ ಬಾಳುವೆಯು ಕೊಲೆಗೀಡಾಗಿರುತ್ತದೆಯೆಂಬುದನ್ನು ಎಂದಿಗೂ ಮರೆಯಕೂಡದು.

ದಾನಿಗೆ ಧರ್ಮವೇ ಅಪೀಮು. ಅಪಿಮು ಸೇವಿಸುವ ಚಟ ಸಿರಿವಂತರಿಗೇ ಕಟ್ಟಿಟ್ಟಿದ್ದು. ಬಡವರಿಗೆ ಅನ್ನಕ್ಕೆ ಗತಿಯಿಲ್ಲ. ಇನ್ನು ಮಕ್ಕಳ ಔಷಧಿಗೆ ಬಿಡಿಕಾಸು ಎಲ್ಲಿಂದ ತರಬೇಕೆನ್ನುವುದೇ ಅವರಿಗೆ ಚಿಂತೆ. ಆಗ ಪ್ರಾರ್ಥನೆಯೆ ಅವರ ಭಂಡವಾಲು. ಶಿವನಿಗೆ ಮರೆಹೊಗುತ್ತಾರೆ. 'ನಿನ್ನ ಧರ್ಮ. ಮಗನನ್ನು ಕಾಯಲೋ' ಎಂದು ಗುಡಿಯ ಮುಂಗಡೆಯಲ್ಲಿ ನಿಂತು ಪ್ರಾರ್ಥಿಸುತ್ತಾರೆ.

ಸಿರಿವಂತನ ಪ್ರಪಂಚವೇ ಬೇರೆ. ಬಡವನ ಊರೇ ಬೇರೆ. ಸಿರಿವಂತನ ಸಂತೆಯಲ್ಲಿ ದುಡ್ಡುಕೊಟ್ಟರೆ ಮಾನ ಸಿಗುತ್ತದೆ, ಕೀರ್ತಿ ಸಿಗುತ್ತದೆ, ಧರ್ಮ ಸಿಗುತ್ತದೆ, ದೇವರು ಸಿಗುತ್ತಾನೆ. ಬಡವರ ಪೇಟೆಯಲ್ಲಿ ಉಪ್ಪು, ಖಾರ, ಬೆಲ್ಲ ಮೊದಲಾದದ್ದು ಸಿಗುತ್ತವೆ. ಒಬ್ಬ ಬಡವನ ಹೆಂಡತಿಯನ್ನು ಅಪಮಾನಗೊಳಿಸಿ ವಕೀಲನನ್ನು ಕೊಟ್ಟು ನ್ಯಾಯಾಧೀಶನನ್ನು 'ಚೆಂಬರ'ದಲ್ಲಿ ಕರೆದು ಕೈ ಬೆಚ್ಚಗೆ ಮಾಡಿದರೆ ಸಿರಿವಂತನಿಗೆ ಮಾನ ಬರುತ್ತದೆ. ಒಬ್ಬ ಜಗದ್ಗುರುವನ್ನು ಮನೆಗೆ ಬಿನ್ನೈಸಿ ಬಂಗಾರದ ದೇವರನ್ನು ಮಾಡಿಸಿ ಅವನಿಗೊಂದು ಅರ್ಪಿಸಿ ತಾನೊಂದು ಗದ್ದುಗೆ ಗೊಳಿಸಿದ ಸಿರಿವಂತನಿಗೆ ಧರ್ಮವೂ, ಮೋಕ್ಷವೂ ಕೂಡಿಯೇ ಸಿಗುತ್ತದೆ. ಬಡವನಿಗೆ ಈ ಭಾಗ್ಯ ಎಲ್ಲಿಂದ ಬಂದೀತು? ಆದ ಅವಮಾನ ಸೆರಗಿನ ಮರೆಯಲ್ಲಿ ಮುಚ್ಚಿಟ್ಟುಕೊಂಡು ಅಳುವುದೆ ಅವನಿಗೆ ಗತಿ ಮತಿ. ನೆಲದ ಮಣ್ಣೇ ಅವನಿಗೆ ದೇವರು. ಮಣ್ಣು ದೇವರೆಂದು ನಚ್ಚಿಕೊಂಡವನಿಗೆ ಮಣ್ಣೇ ಗತಿ.

ಧನಿಕರು ಧನಿಕರಾಗುತ್ತಲೆ ಇರುವುದು, ಬಡವನು ಕಡುಬಡವನಾಗುತ್ತಲೆ ಹೋಗುವುದು ರಾಜಕಾರಣಿಯ ಸಂಕಲ್ಪ. ಸೆಟ್ಟಿಯ ಮಗ ಸಿಂಗಾರವಾಗದ ಹೊರತು ಬಡವನ ಮಗನಿಗೆ ಅನ್ನವಿಲ್ಲ, ಬಟ್ಟೆಯಿಲ್ಲ.

ಸಿರಿವಂತಿಕೆ ಕಾಪಿಯ ಬುರುಕೆ. ಆ ಬುರುಕೆಯ ಮರೆಯಲ್ಲಿ ನೂರುಕಡೆ ಕಣ್ಣು ಹಾರಿಸಬಹುದು. ಸಹಸ್ರಾರು ಕಡೆ ನಾಲಿಗೆ

ತಿರುಗಿಸಬಹುದು. ಅದರ ಫಲವಾಗಿ ಹಣ ಇನ್ನೂ ಅಪರಿಮಿತವಾಗಿಯೆ ಬರುತ್ತದೆ. ಬಡವನ ನಗ್ನ ದಾರಿದ್ರ್ಯಕ್ಕೆ ಸತ್ಯವೆ ಹೊದಿಕೆಯೆಂದಮೇಲೆ ಅಲ್ಲಿ ಕಣ್ಣು ಮುಚ್ಚಾಲೆಗೆ ಆಸ್ಪದವೆ ಇಲ್ಲ.

ಹಸಿದವನಿಗೆ ಯಾವ ಕಾಲಕ್ಕೂ ಜಾತಿ ಮತಗಳಿಲ್ಲ. ಕುಲ ಗೋತ್ರಗಳಿಲ್ಲ. ರಾಜಕಾರಣಿಗಳು, ಧರ್ಮ ಸಾಮ್ರಾಟರು ತಮ್ಮ ಸ್ವಾರ್ಥ ಸಾಧನೆಗಾಗಿ ಹಣಕೊಟ್ಟು ಸಾಕ್ಷಿ ಒಡೆಸುತ್ತಾರೆ. ಕೂಡಿದವನು ಅಟ್ಟು ಉಂಡ, ಒಡೆದವನು ಬೇಡಿ ತಿಂದ. ಕೂಡಿದವರನ್ನು ಬಿಡಿ ಮಾಡಿರಿಸಿ ದವನು ಆಳಿ ಬಾಳಿದ. ಈ ಆಳುವವರ ಮುಂಗಮುಷ್ಟಿಯಲ್ಲಿ ಸಿರಿವಂತಿಕೆಯ ತಕ್ಕಡಿಯ ತೂಗುದಂಡವಿರುತ್ತದೆ.

ಬಡವರ ಬಾಳನ್ನು ಕಣ್ಣಿಟ್ಟು ಆರಾಧಿಸಿದವನಿಗೆ ಸಿರಿವಂತಿಕೆಯ ಕಷ್ಟನಿಷ್ಠುರತೆಗಳನ್ನು ಕಂಡು ಕನಿಕರವಾಗುತ್ತದೆ. ಮನುಷ್ಯನಿಗೆ ಎಷ್ಟು ಪಾಲು ಭೂಮಿ ಬೇಕು? ಮೂರುವರೆ ಗೇಣು ಎಂದು ಮಹಾತ್ಮ ಟಾಲ್‌ಸ್ಟಾಯಿ ಹೇಳಿದ ಉತ್ತರವನ್ನು ಜನ ಎಂದು ನಂಬಿ ಬದುಕೀತೋ ಎನ್ನುವ ಹಾಗಾಗುತ್ತದೆ. ಸಿರಿವಂತಿಕೆ ತಂದೆ ಮಕ್ಕಳನ್ನು, ಸುತ ಸೋದರರನ್ನು, ಹೆತ್ತ ತಾಯಿಯನ್ನು ಕೈಯಾರೆ ಕೊಲ್ಲಲು ಹಚ್ಚುತ್ತದೆ. ಹಣದ ಆಡಂಬರದ ಸೋಗಿನಲ್ಲಿ ತಲೆಯೆತ್ತಿ ತಿರುಗಾಡುವ ಸಿರಿವಂತನ ಆತ್ಮಕ್ಕೆ ಎಂದಿಗೂ ಶಾಂತಿಯಿರುವುದಿಲ್ಲ. ಹೆಂಡತಿ ಬಂಜೆ. ಮಗ ರೋಗಿ. ಆಳುಗಳು ವಂಚಕರು. ಹಗಲು ರಾತ್ರಿ ಹಾಳು ಸಿರಿವಂತಿಕೆಯ ಆರೈಕೆಗಾಗಿ ನಿದ್ರೆಗೇಡು. ಇಷ್ಟಾದರೂ ಸಿರಿಯೆಡೆಗೆ ಕುಡಿಗಣ್ಣು ನೋಟ ಹಾರಿಸುವ ಹವ್ಯಾಸವೇ ಅವನನ್ನು ಬಿಡಲೊಲ್ಲದು!

ವೈದಿಕ ಋಷಿ ಕಾಂಚಾಣವನ್ನೇ ಕಣ್ಣೆದಿರಿನಲ್ಲಿಟ್ಟುಕೊಂಡು ವರ್ಣಾಶ್ರಮ ಧರ್ಮಗಳನ್ನು ಸೃಜಿಸಿದನು. ಇಂದು ನಾವು ಲೋಕದ ಜನರನ್ನು ಎರಡೇ ತೆರನಾಗಿ ವಿಂಗಡಿಸಬಹುದು: ಬಡವ, ಶ್ರೀಮಂತ. ಶ್ರೀಕೃಷ್ಣ ಪರಮಾತ್ಮನ ಕ್ಷಮೆ ಕೋರಿ ಇನ್ನೊಂದು ಶ್ರೀಮತ್ ಭಗವದ್ಗೀತೆಯನ್ನು ಬರೆಯುವುದಾದರೆ ಅದರಲ್ಲಿ ಬಡವನ ಕರ್ಮಮಾರ್ಗ ಭಕ್ತಿಮಾರ್ಗ, ಮೋಕ್ಷಮಾರ್ಗಗಳೇ ಬೇರೆ, ಶ್ರೀಮಂತನ 'ಮಾರ್ಗ'ಗಳೇ ಬೇರೆ ಬೇರೆಯಾಗಿರುವವು. ಮೋಕ್ಷಸನ್ಯಾಸ ಯೋಗದಲ್ಲಿ ಬಡವನ ಆಹಾರ ಜಪತಪಾದಿಗಳೇ ಒಂದು ವಿಧ. ಶ್ರೀಮಂತನ ಉಪಾಸನವೇ

ಉದುರ ಬೇಕಾದುವರಿಂದ ಪಯಣಿಗನು ಕುಸುಮಕ್ಕಿಂತ ಕೋಮಲವಾಗಿರಬೇಕು ಎಂದೆ ನಾನು. ಆದರೆ ಬಹಳ ಕಣ್ಣೀರು ಹಾಕಬಾರದು. ಕಾಲನೆಷ್ಟು ಕ್ರೂರ ವಿಮರ್ಶಕನೋ ಅಷ್ಟೇ ಕಠೋರವಾಗಿ ನೀನೂ ಕೂಡ ಇದ್ದು ಕಂಡು ಸತ್ಯಾಸತ್ಯತೆಗಳನ್ನು ವಿಮರ್ಶಿಸಿ ವರದಿ ಮಾಡಬೇಕು.

ಪ್ರವಾಸಿಗನ ದಾರಿಯಲ್ಲಿ ಇತಿಹಾಸವೆ ಮೈಲುಗಲ್ಲು; ದಿನಚರಿಯೆ ನಿಲುದಾಣ. ಯಾವ ಮೈಲುಗಲ್ಲಿನ ಹತ್ತಿರ ಯಾರು ಯಾರು ದಣಿದು ಮಲಗಿದ್ದಾರೆನ್ನುವುದನ್ನು ಸೂಕ್ಷ್ಮವಾಗಿ ಅಭ್ಯಸಿಸಬೇಕು. ದಿವ್ಯರ್ಷಿ ಇರುವಾಗಲೂ ಮೌನಿ, ಇಲ್ಲದಾಗಲೂ ಮೌನಿ. ಆದುದರಿಂದ ಪ್ರವಾಸಿಗನಿಗೆ ಎಚ್ಚರ ಹೇಳಬಯಸುತ್ತೇನೆ. ಅಂತಹ ದಿವ್ಯಜ್ಞಾನಿಗಳನ್ನು ಬಹು ಜಾಗರೂಕತೆಯಿಂದ ಅರಸುತ್ತ ಹೋಗಬೇಕು. ಎಲ್ಲಿಯೊ ವೀಣೆ ನುಡಿಸಿ, ಎಲ್ಲಿಯೊ ಕೊರಲೆತ್ತಿ ಹಾಡಿ, ಎಲ್ಲಿಯೊ ಉಳಿಯೆತ್ತಿ ಕಟೆದು, ಎಲ್ಲಿಯೊ ಮೌನದಿಂದ ತಪಗೈಯ್ದು ಸದ್ದಿಲ್ಲದೆ ನೆಲವನ್ನು ಹೊದೆದು ಅವರು ಮಲಗಿರುತ್ತಾರೆ. ಮಣ್ಣಿನ ಗುಂಪೆಯೊಂದು ಎಡವುತ್ತ ಹೋದರೆ ಏಳು ಜನ್ಮದ ಪಾಪ ಬಂದೀತು ಪಯಣಿಗನಿಗೆ. ಕಾರಣ ಬಹು ಜೋಕೆ! ಅಂತಹರು ಬಂದು ಮಲಗಿದ ತಾಣವನ್ನು ನಿನ್ನ ಇತಿಹಾಸದಲ್ಲಿರುವ ನಕಾಶವನ್ನು ತೆಗೆದು ಗುರುತಿಸಿ ಗುರುವು ಮಲಗಿದ ಗೋರಿಯ ಬಳಿ ಬಂದು ಸದ್ದಿಲ್ಲದೆ ಅವರನ್ನು ನುತಿಸು. ತಾಯಿ ಪೃಥಿವಿಯ ಹೆಸರಿನಲ್ಲಿ ಅವರಿಗೆ ಹುವ್ವನೇರಿಸಿ ಮುಂದಕ್ಕೆ ಸಾಗು. ಸತ್ತವರ ಮಣ್ಣು ಗುಂಪೆಯಿಂದಲೇ ವಿಶ್ವ ಸಂಸ್ಕೃತಿಯ ತೂಗು ತೊಟ್ಟಿಲಾದ ಹಿಂದೂ ಸಂಸ್ಕೃತಿಯ ಇತಿಹಾಸ ಮೊಹೆಂಜೋದಾರೋದಲ್ಲಿ ಮೂಡಿ ಬಂದುದನ್ನು ಪ್ರಾಕ್ತನವಿಮರ್ಶವಿಚಕ್ಷಣರು ಸಾರಿ ಸಾರಿ ಹೇಳುತ್ತಿರುವ ಮಾತು ಯಾವಾಗಲೂ ಪ್ರವಾಸಿಗನಿಗೆ ಜ್ಞಾಪಕದಲ್ಲಿರಬೇಕಾದದ್ದು.

ದಿನದ ದಾರಿ ನಡೆದು ದಣಿವಾಂತ ಪ್ರವಾಸಿಗನು ಊರ ಮಧ್ಯದಲ್ಲಿಯ ಗುಡಿಯಲ್ಲಿ ಮಲಗಬೇಕು. ಆ ಊರಿನಲ್ಲಿಯ ದೊಡ್ಡವರ ನೆರವನ್ನು ಎಂದಿಗೂ ಕೋರಬಾರದು. 'ಹಂಗಿನರಮನೆಗಿಂತ ಇಂಗಣದ ಗುಡಿಲೇಸು' ಎಂದು ಸರ್ವಜ್ಞ ಹೇಳಿದ್ದರಲ್ಲಿ ತುಂಬ ಸತ್ಯವಿದೆ.

ಗುಡಿಯಲ್ಲಿ ಹಳ್ಳಿಯ ಸಂಸ್ಕೃತಿಯನ್ನು, ಹರಿವ ನದಿಯ ದಡದಲ್ಲಿ ಜಿಲ್ಲೆಯ ಜೀವಾಳವನ್ನು, ಗುಡ್ಡ ಬೆಟ್ಟಗಳ ಮೇರೆಯಿಂದ ಪ್ರಾಂತ್ಯದ ಪ್ರಾಮುಖ್ಯತೆಯನ್ನು, ರಾಷ್ಟ್ರಪತಿಯ ನೀತಿಯಿಂದ ರಾಜಧಾನಿಯ ಗಾಂಭೀರ್ಯವನ್ನು, ಶಿಲ್ಪದ ಇತಿಹಾಸದಿಂದ ದೇಶದ ನಾಗರಿಕತೆಯನ್ನೂ ಕಂಡು ಹಿಡಿಯಬಹುದು.

ನಿಲ್ಮನೆಯೊಂದರಲ್ಲಿ ತಂಗಿದ ಪ್ರವಾಸಿಗನು ವಿಶ್ರಾಂತಿ ತಳೆದಾದ ಮೇಲೆ ದಿನಚರಿಯೊಡನೆ ಮಾತನಾಡಬೇಕು. ಇನ್ನುಳಿದ ಯಾರೊಡನೆಯೂ ಅವನ ಸಲುಗೆ ಬೇಡ. ದಾರಿಕಾರನ ಸ್ನೇಹವು ಸಂತೆಯಲ್ಲುಂಟಾದವರ ಪರಿಚಯದಂತಿರುವುದು. ಆದ್ದರಿಂದ ನಿಷ್ಕಾ-ರಣವಾದ ಸಂಗದಿಂದ ಏನು ಪ್ರಯೋಜನ? ಪ್ರಯೋಜನಕಾರಿಯಾದ ಪ್ರವಾಸದಲ್ಲಂತೂ ಅದು ತುಂಬ ಅನವಶ್ಯಕವಾದುದು.

ದೇಶವನ್ನು ತಿರುಗಿ ಬಂದ ಮೇಲೆ ಋಷಿ ಬರೆದ ಕಾವ್ಯ ತೆರೆದು ನೋಡಿದರೆ ಅಲ್ಲಿ ತಾನು ಕಂಡ ವಿವರವನ್ನೆಲ್ಲ ಕವಿ ಬಣ್ಣಿಸಿದುದು ಗೋಚರವಾಗುತ್ತದೆ. ಅದೇ ಗುಡ್ಡ ಬೆಟ್ಟಗಳು, ಅದೇ ಕೆರೆಕಾಪಲಿಗಳು, ಅದೇ ನದಿ ಸರೋವರ, ಅದೇ ಅಪರಂಪಾರ ಜಲ ನೆಲ ಬಾನು —ಓಹೋ ಕವಿಯೇ, ಓಹೋ ಪ್ರವಾಸಿಗನೇ..........! ಜೀವನದುದ್ದಕ್ಕೂ ಆ ನೆನಪು ಆ ಅನುಭವ ಹೇಳಬಾರದ ಸುಖ; ಅದೇ ಅಕ್ಷಯ ನಿಧಿ.

ನನಗೊಂದು ಆಸೆ ಇದೆ. ಕನ್ನಡ ನಾಡಿನ ಕವಿತಿಲೋತ್ತಮರ ಗೋರಿಗಳನ್ನೊಮ್ಮೆ ಸಂದರ್ಶಿಸಿ ನನ್ನ ಮನದ ಮಂದಾರ ಅರ್ಪಿಸಿ ಬರಬೇಕೆಂಬ ಬಯಕೆಯೊಂದು ನನ್ನಲ್ಲಿ ಬಲವಾಗಿ ಬೇರೂರಿದೆ. ದೂರ ಹೋಗುವ ದೈವ ರೇಷೆಯಿದ್ದರೆ ಮಾತ್ರ ಥೇಮ್ಸ ನದಿಯ ನೀರು ಕುಡಿದು ಉಮರ ಕವಿಯ ಗೋರಿಯನ್ನು ಸಂದರ್ಶಿಸಿ ಪ್ರವಾಸದ ಹಂಬಲನ್ನು ಅಲ್ಲಿಯೆ ಮುಗಿಸಬೇಕೆಂದಿದ್ದೇನೆ.

ಪ್ರವಾಸಿಗರಲ್ಲಿ ಭಿನ್ನ ಜನವಿದ್ದಷ್ಟು ಭಿನ್ನ ರುಚಿ. ಆದರೂ ವಿದ್ಯೆಯ ಆರಾಧನೆಯೆ ಅದರ ಗೋಪುರ. ಆತ್ಮದ ಸಂಸ್ಕಾರವೆ ಆ ಗೋಪುರದ ಕಳಸ.

ಸ್ತುತಿ

ಸ್ತುತಿ ತನಿ ಹೊನ್ನ ವೇಷ ತೊಟ್ಟು ಬರುತ್ತದೆ. ನಿಂದೆ ಬಿಚ್ಚುಗತ್ತಿಯನ್ನು ಹಿಡಿದುಕೊಂಡು ಬರುತ್ತದೆ. ನಿಧಾನವಾಗಿ ಯೋಚಿಸಿ ಹೇಳು. ಈ ಎರಡರಲ್ಲಿ ಯಾವುದನ್ನು ನೀನು ಆರಿಸಿಕೊಳ್ಳುತ್ತೀ?

ಸ್ತುತಿ ಪಾಠಕನು ಆಸೆ ಆಮಿಷಗಳಿಂದ ಪ್ರೇರಿತನಾಗಿರುತ್ತಾನೆ. ಆದೇ ನಿಂದಕನ ನುಡಿಯ ಮರೆಯಲ್ಲಿ ಸ್ವ ಪರರ ಹಿತಚಿಂತನೆಯಿರುತ್ತದೆ. ನಿಂದೆಗೆಯ್ಯುವವನು ತನಗೆ ತಾನೆ ತಿಳಿಯದಂತೆ ಇದಿರಾಳುವಿನ ಹಿತ ಬಗೆಯುತ್ತಾನೆ. ಒಳಗಣ್ಣು ತೆರೆದು ನೋಡುವವನಿಗೆ ಸ್ತುತಿ ನಿಂದೆಗಳು ಜೀವನದ ಎರಡು ನಿಲವುಗಳೆಂದು ಕಂಡು ಬರುತ್ತದೆ.

ಸ್ತುತಿ ಮಾಡುವವನ ಮನಸ್ಸು ಚಂಚಲ, ನಿಂದಕನ ಮನಸ್ಸು ನಿಶ್ಚಲ. ಇವೆರಡಕ್ಕೂ ಪಕ್ಕಾದವನ ಮನಸ್ಸು ಅಡಕೊತ್ತಿನಲ್ಲಿ ಸಿಲುಕಿದ ಅಡಕೆಯಂತಿರುವದು. ಸ್ತುತಿ ನಿಂದೆಗಳು ಕ್ಷಣಭಂಗುರ. ಸಾಕ್ಷಿಯ ಚೌಕಿಯಲ್ಲಿ ನಿಂತು ಸಾಕ್ಷಿ ಹೇಳುವ ದಿನ ನಿನ್ನ ಜನ್ಮದಲ್ಲಿ ಒಂದೇ ಬಾರಿ ಬರುತ್ತದೆ. ನಿನ್ನನ್ನು ಟೀಕಿಸಿದವರು ನಿನ್ನ ನ್ಯಾಯಾಧೀಶನನ್ನೂ ಟೀಕಿಸಿರುತ್ತಾರೆ. ಆದುದರಿಂದ ಅದಕ್ಕೆ ನ್ಯಾಯ ಸಮ್ಮತವಿಲ್ಲ. ನಿನ್ನ ಸ್ತುತಿಗೆಯ್ದವರು ನಿನ್ನ ಮನಸ್ಸನ್ನು ಕಲುಷಿತ ಮಾಡಲು ಯತ್ನಿಸಿರುತ್ತಾರೆ. ಅದಕ್ಕೆ ನೀನು ನೊಂದೆಯೊ, ಬೆಂದೆಯೊ, ಸೊಕ್ಕಿದೆಯೊ, ಸೊರಗಿದೆಯೊ ಎಂಬುದರ ವಿಚಾರಣೆಯಾಗುವದು. ಅಲ್ಲಿ ನೀನು ಜಯಹೊಂದಬೇಕು. ನಿನ್ನ ಚಾರಿತ್ರ್ಯದ ಬಗೆಗೆ ಅಲ್ಲಿಯೆ ಕೊನೆಯ ತೀರ್ಪು ಸಿಗುವುದು.

ಯಾವಾಗಲೂ ಸ್ವಂತಕ್ಕೆ ಮೆಚ್ಚುಗೆಯಾದ ವಸ್ತುವನ್ನು ಇನ್ನೊಬ್ಬರ ಇದಿರಿನಲ್ಲಿ ಹೇಳಬಾರದು. ಹಾಗೆ ಹೇಳುವುದರಿಂದ ನಿನಗೆ ಸುಖವಾದರೂ ಕೇಳುವವನ ಹೃದಯದಲ್ಲಿ ಅಸಂತೋಷದ ತೆರೆಗಳು ಒಂದೇ ಸವನೆ ತಾಡಿತವಾಗುತ್ತಿರುತ್ತವೆ. ಪ್ರೇಮವು ಗುಪ್ತಗಾಮಿನಿಯಾಗಿರಬೇಕು. ಕೃತಜ್ಞತಾಭಾವವು ಮನಸ್ಸಿನಲ್ಲಿ ಹುದುಗಿಕೊಂಡಿರ

ಬೇಕು. ದಿನದ ಹೋರೆ ಮುಗಿದು ರಾತ್ರಿಯು ವಿಶ್ರಾಂತಿ ಕಾಲ ಬಂದಾಗ ಹಾಸುಗೆಯ ಮೇಲೆ ಕುಳಿತುಕೊಂಡು ಫಲಾಪೇಕ್ಷೆಯಿಲ್ಲದಂತ ಸ್ತುತಿ ಮಾಡಬೇಕು. ತದ್ವಿರುದ್ಧವಾದದ್ದು ಅನಿಷ್ಟಕರ.

ಸ್ತುತಿಸ್ರೋತ ಸಂತತವಾಗಿ ಹರಿಯುವುದಿಲ್ಲ. ಮಳೆಗಾಲದಲ್ಲೇ ಅದಕ್ಕೆ ಮಹಾಪೂರ. ಅದು ಉಕ್ಕಿ ಹರಿದ ಮರುದಿನವೇ ಬತ್ತಿ ಹೋಗುತ್ತದೆ. ಅದರ ನೀರನ್ನು ಬಳಸಿಕೊಳ್ಳುವವನ ಪಾಡೂ ಅಷ್ಟೆ. ಅವನ ನರನಾಡಿಗಳು ಆ ಕ್ಷಣದಲ್ಲಿ ವಿದ್ಯುಲ್ಲತೆಯಂತೆ ಹರಿದಾಡಿ ಮರು ಚಣದಲ್ಲಿ ಮಂದವಾಗಿ ಹೋಗುವವು. ಸ್ತುತಿ ನಿಂದಾತೀತರ ಬದುಕು ಹಾಗಲ್ಲ. 'ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದೊಡೆ ಸಮಾಧಾನಿಯಾಗಿರಬೇಕು' ಎಂದು ಹೇಳುತ್ತಾರೆ ಅವರು. ಹೊಗಳು ವವರು ಹೊನ್ನಶೂಲಕ್ಕೇರಿಸುವವರೆಂಬ ನಂಬುಗೆ ಅವರದು. ಯಾವಾಗಲೂ ನ್ಯಾಯ ನಿಷ್ಠುರರಾದವರು ಸ್ತುತಿನಿಂದೆಗಳಿಗೆ ದಾಕ್ಷಿಣ್ಯ ಪರರಾಗಿರುವುದಿಲ್ಲ.

ಹೆಂಡತಿಯನ್ನು ಸ್ತುತಿಸಬೇಡ. ತಾಯಿಯನ್ನು ನಿಂದಿಸಬೇಡ. ಗುರುವಿನಲ್ಲಿ ಅನಾದರ ವ್ಯಕ್ತಪಡಿಸಬೇಡ. ಬಲ್ಲಿದರ ಸ್ತುತಿಗೆ ಒಂದೇ ಕಿವಿಗೊಡು. ಮಂದಮತಿಗಳ ಸ್ತುತಿಗೆ ಬರೀ 'ಹೂಂ' ಗೊಡು. ಅಲ್ಪರ ಸ್ತುತಿಗೆ ಅವಜ್ಞತೆ ತೋರು. ನೀನು ಸತ್ತು ಸಹಸ್ರಾರು ವರುಷಗಳು ಗತಿಸಿದ ನಂತರ ನಿನ್ನ ಗೋರಿಯ ಮೇಲೆ ಹಕ್ಕಿಯೊಂದು ಬಂದು ಕುಳಿತು ಅಚ್ಚ ನೀಲಿಯ ಮುಗಿಲನ್ನು ನೋಡಿ ನೋಡಿ ನಿನ್ನ ಗುಣಗಾನ ಮಾಡಿದರೆ ನೀ ಅದನ್ನು ಕಿವಿ ಮಾಡಿ ಕೇಳು. ಗಂಗೆಯ ಕಣ್ಣೀರ ಕಾಡಿಗೆಯಲ್ಲಿ ನವಿಲು ಗರಿಯ ತೀಡಿದಂದು ಹಕ್ಕಿಯು ಕೊರಲ ಹಾಡು ಮಾಡಿ ಬಂದಿರುವುದು.

ಸ್ತುತಿ ಪುಷ್ಪ ಬಾವಿಯ ಮೇಗಡೆಯಲ್ಲಿ, ಕಪ್ಪಲಿಯ ನೀರು ಹರಿ ಯುವ ದಾರಿಯಲ್ಲಿ ಅರಳುವುದು. ಯಾತ ಹೊಡೆಯುವವನ ಎತ್ತಿನ ಕಾಲಿಗೆ ಒಂದು ದಿನ ನೋವಾದರೆ ಯಾತದ ಹಾಡು ಹೇಳುವವನ ಗಂಟಲು ನೋವಾದರೆ ಮರುದಿನವೇ ಪುಷ್ಪ ಬತ್ತಿ ಹೋಗುತ್ತದೆ. ಅಂತ ಹೂವನ್ನೇ ನಚ್ಚಿ ದೇಗುಲದ ವಿಗ್ರಹದಾರಾಧನೆ ಯನ್ನು ನಿಲ್ಲಿಸಿ ಬಿಡುವವನು ಕೈಯಾರೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಅಲ್ಲಿ ಗುಡ್ಡದೋವರಿಯಲ್ಲಿ, ಕಲ್ಲು ಮುಳ್ಳುಗಳ ಪೊದೆಯಲ್ಲಿ, ಬಂಜರು ಬೀಳುಗಳ ಮಧ್ಯದಲ್ಲಿ ಮೂಡಿನಿಂತ ಬಿಲ್ವವೃಕ್ಷದಲ್ಲಿ ನಿಂದೆಯು ಪತ್ರಿಯಿದೆ, ಸ್ತುತಿಯು ಕಾಯಿಯಿದೆ. ಬಿಲ್ವಪತ್ರಿಯ ಮೂರು ಪಕಳಿಗಳು ಹರಿಯುವಂತೆ ಎಚ್ಚರದಿಂದ ಆಯಬೇಕು. ಕಾಯಿಯ ಅಂಟು ಕೈಗೆ ಹಿಡಿಯುವಂತೆ ಅದನ್ನು ಇಳಿಸಬೇಕು. ಆನಂತರ ದೇಗುಲದ ಚೈತನ್ಯ ಮೂರುತಿಯ ಆರಾಧನೆ ನಡೆಯಲಿ. ಆಗ ಹೊನ್ನ ವೇಷ ಹಾಕಿಕೊಂಡು ಬಂದ ಎರಳೆಯೂ ಮೋಹಿಸದು. ಬಿಚ್ಚುಗತ್ತಿಯನ್ನು ಹಿಡಿದುಕೊಂಡು ಬಂದ ರಾಕ್ಷಸಿಯೂ ಹಿಂದೆಗೆಯುವಳು.

ಸ್ತುತಿ ನಿಪುಣನಿಗೆ ನೌಕರಿ ಬೇಗ ಸಿಗುತ್ತದೆ. ಉದ್ಯಮದಲ್ಲಿ ಯಶಸ್ಸು ಸಿಗುತ್ತದೆ. ಹಸಿಯುವುದಕ್ಕಿಂತಲೂ ಮುನ್ನವೆ ಅನ್ನ ದೊರೆಯುತ್ತದೆ. ಆದರೆ ಅಂತಹ ಲಾಭ ಹಂಚಿಕೆ, ಕನಸಿನ ಗಂಟು, ತಾತ್ಪೂರ್ತಿಕವಾದ ಸುಖ. ಸ್ತುತಿಗೆ ಪ್ರಿಯಜನರು ಬೇಗ ಮರುಳಾಗುತ್ತಾರೆ. ಮರುಳಾದ ಮೇಲೆ ಅದೊಂದು ಚಟವೇ ಹಿಡಿದು ಹೋದ ಸ್ತುತಿಯ ಆರಾಧಕನಿಗೆ ಸುಮ್ಮನಿರುವದಕ್ಕಾಗುವದಿಲ್ಲ. ಸ್ತುತಿಯ ಹಂಬಲವಿದ್ದವನ ವ್ಯಕ್ತಿತ್ವ ಎಂದಿಗೂ ವಿಕಸನ ಹೊಂದಲಾರದು.

ಆದರೂ ವ್ಯಾವಹಾರಿಕವಾದ ಈ ಪ್ರಪಂಚದಲ್ಲಿ ಸ್ತುತಿ ಅಲ್ಲಲ್ಲಿ ಬೇಕು: ಊಟಕ್ಕೆ ಉಪ್ಪಿನಕಾಯಿ ಇದ್ದ ಹಾಗೆ. ಮಗನಿಗೆ ತಾಯಿಯ ಸ್ತುತಿ, ಕವಿಗೆ ವಿಮರ್ಶಕನ ಸ್ತುತಿ, ಕೋಗಿಲೆಗೆ ಕವಿಯ ಸ್ತುತಿ.... ಈ ರೀತಿಯ ಆಂತರಿಕ ಸಂಬಂಧ ಇರುವದಾದರೆ ಒಳ್ಳೆಯದೇ. ಸ್ತುತಿಯಲ್ಲಿ ಸತ್ಯವೂ ಉಂಟು, ಅಸತ್ಯವೂ ಉಂಟು. ಸತ್ಯಕ್ಕೆ ಕಿವಿಗೊಟ್ಟವರಷ್ಟೇ ವಿವೇಕಿಗಳು. ತಾಯಿ ಹೊಗಳಿದಳೆಂದು ಮಗ ಪರನಾರಿಯರ ಮೇಲೆ ಹರಿಹಾಯ್ದರೆ, ವಿಮರ್ಶಕ ಹೊಗಳಿದನೆಂದು ಕವಿಯ ಪಿತ್ತ ನೆತ್ತಿಗೇರಿದರೆ, ಕವಿ ಸ್ತುತಿಸಿದನೆಂದು ಕೋಗಿಲೆ ರಾಜಹಂಸನ ಬಣ್ಣವನ್ನು ಬಳಿಸಿದರೆ ಪತಂಗ ಅಗ್ನಿಕುಂಡದ ದಳ್ಳುರಿಗೆ ಸಿಕ್ಕಂತಾಗುತ್ತದೆ. ಆದುದರಿಂದ ಸ್ತುತಿಯನ್ನು ‘ಕ್ವಿನೀನ್’ನ ಹಾಗೆ ಸೇವಿಸಬೇಕು.

ಜೀವನ ಪಥದಲ್ಲಿ ಸ್ತುತಿ ನಿಂದೆಗಳು ಕೈಗಂಬಗಳು. ದಾರಿ ಕವಲೊಡೆಯುವಲ್ಲಿ ಅವು ನೆಲೆನಿಂತು ಊರು ಸಮೀಪಿಸಿತೆಂದು ಪಥಿಕನಿಗೆ ಸನ್ನೆಗೆಯ್ದು ಉತ್ತೇಜನ ಕೊಡುತ್ತವೆ. ಇದಿರುಬಂದ ವಾಹನಗಳು

ಅಪಘಾತಕ್ಕೀಡು ಮಾಡದಂತೆ ದಾರಿಯ ಒಂದು ಮಗ್ಗುಲನ್ನು ಹಿಡಿದು ಪಯಣಿಗನು ಊರು ಸೇರಬೇಕು. ನಿಂದೆಯ ಕೈಗಂಬಗಳು ದಾರಿ ಚಕ್ರಾಕಾರವಾಗುವಲ್ಲಿ ನಿಂತಿರುತ್ತವೆ. ಪಯಣಿಗನಿಗೆ ಅದೊಂದು ಸಂಧಿಕಾಲ. ಸತ್ಯಾಸತ್ಯತೆಯನ್ನವಲೋಕಿಸಿ ಅವನು ತನ್ನ ದಾರಿಯನ್ನು ಕಂಡುಕೊಳ್ಳಲಿ.

ಸ್ತುತಿಯು ಶಿವನ ಬುಟ್ಟಿಯಂತೆ, ಪಾತರಗಿತ್ತಿಯಂತೆ ಪಲವು ಬಣ್ಣ ತೊಟ್ಟು ಮೈ ತಳೆದ ಕರುಣೆಯಾಗಿ ಬರುತ್ತದೆ. ಆತ್ಮದ ಹಂತನ್ನು ಮೇಲೆ ಮೇಲಕ್ಕೇರಿಸಿದವನಿಗೆ ಈ ಬಣ್ಣ ಬಣ್ಣಗಳ ಸಂಭಾರ ವನ್ನು ಪರೀಕ್ಷಿಸುವ ಅರ್ಹತೆ ಬರುತ್ತದೆ. ಜೀವನ ಅಪಾರ ವಾರಿಧಿ. ಬದುಕು ನಾವು. ನೀನು ನಾವಿಕ. ನಿಂದೆ ಚುಕ್ಕಾಣಿ. ಸ್ತುತಿ ಹಾಯಿ. ಅನುಭವ ಲಂಗರು. ಇದನ್ನರಿತುಕೊಂಡು ನೀನು ಅಪಾರ ವಾರಿಧಿಯ ಅಂಚನ್ನು ಮುಟ್ಟಬೇಕಾಗಿದೆ. ಆದುದರಿಂದ ಜೋಕೆ ಹೇಳುತ್ತೇನೆ ಪ್ರಿಯ ಓದುಗ, ಬಹಳ ಎಚ್ಚರದಿಂದ ಪಯಣ ಕೈಕೊಳ್ಳು. ನಿನ್ನ ದಾರಿಯನ್ನು ಶಿವ ಕಾಯಲಿ.

ಮೂಢಭಕ್ತಿ

ಸಾವಿಗೆ ಅಂಜುವವನು ಮೂಢಭಕ್ತಿಯನ್ನು ಅನುಸರಿಸುವನು. ಮೃತ್ಯು ಮುಖಕ್ಕೆ ಮೂಢ ಭಕ್ತಿಯ ಕುಂಟು ನೆವವೊಂದನ್ನು ಮುಂದೆ ಮಾಡಿ ಹುಸಿ ವಿನಯವನ್ನವನು ತೋರುವನು. ಏನಾದರೇನು ? ಹುಸಿ ವಿನಯಕ್ಕೆ ಬೆಲೆಯೆ ಇಲ್ಲ. ಬೆಲೆವೆಣ್ಣಿನ ಕುರುಳೊಳಗಿಂದ ಬಾಡಿ ಬಿದ್ದ ಹೂ, ಸ್ವಾರ್ಥ ಸಾಧನೆಗಾಗಿ ದುರ್ಮುಖಿಯು ತೋರುವ ಹುಸಿ ವಿನಯ, ಸಂಕಟದೊಳಗಿದ್ದವನು ತಳೆಯುವ ಮೂಢಭಕ್ತಿ— ಇವುಗಳ ಅರ್ಥ ಹುಸಿ ಸೊನ್ನೆ.

ಮಂಗಲ ಕಾರ್ಯಕ್ಕೆ ಹೊರಟಾಗ ಮಕ್ಕಳು ಸೀನಬಾರದು, ಬರಿಗೊಡ ಇದಿರಿಗೆ ಬರಬಾರದು, ಕಾಗೆ ಬೆಕ್ಕುಗಳು ಅಡ್ಡ ಹಾಯಬಾರದು. ಇಂಥ ನೂರು ಕಾರಣಗಳನ್ನು ನಂಬಿ ಬಾಳು ಹೊರೆಯುವವರನ್ನು ಕಪ್ಪೆಗಳೂ ಹೆದರಿಸುತ್ತವೆ. ಕತ್ತಲಲ್ಲಿ ಹೆದರಿದವನಿಗೆ ಕಂಟಿಯೇ ದೆವ್ವವಾಗಿ ತೋರುವುದು, ಬಳ್ಳಿಯೇ ಹಾವಾಗಿ ನಿಲ್ಲುವುದು. ಅದೇ ಧೈರ್ಯದಿಂದ ಮುನ್ನುಗ್ಗಿ ನಡೆವವನಿಗೆ ಏಳುಸುತ್ತಿನ ಕೋಟೆಯೂ ಬಾಗಿಲು ಬಿಚ್ಚಿ ದಾರಿ ಮಾಡಿ ಕೊಡುವುದು. ತನ್ನಲ್ಲಿಯೇ, ತನಗೆ ಅಪಾರ ವಿಶ್ವಾಸವಿದ್ದವನನ್ನು ಮೂಢಭಕ್ತಿಯು ಸೋಂಕದು.

ಭಕ್ತಿಯನ್ನು ಕೋರಿ ನಿಂತ ದೇವರೂ ಕೂಡ ಭಿಕ್ಷುಕನಾಗುತ್ತಾನೆ. ಆದರೆ ದೇವರು ಭಿಕ್ಷುಕನಲ್ಲ. ತನ್ನ ಕಾರ್ಯ ಸೌಲಭ್ಯಕ್ಕಾಗಿ ಜನತೆಯು ಅಂತ ವಿಶ್ವಾಸವನ್ನು ತಳೆದಿದೆ. ಶಾಸ್ತ್ರಕಾರನು ತನ್ನ ಹೊಟ್ಟೆ ಬಟ್ಟೆಯ ಮನುಷ್ಯಗಾಗಿ ಭಕ್ತಿಗೊಂದು ಬಣ್ಣ ಬಳಿದುದು ನಿಜ. ಪೂಜಾರಿಯು ತೆಂಗು ಕಾಂಚಾಣದ ಪ್ರಾಪ್ತಿಗಾಗಿ ಶಿಲಾಮೂರ್ತಿಗೆ ಎಣ್ಣೆ ಮಜ್ಜನ ತೀಡಿ ಜನರ ಕಣ್ಣಿಗೆ ಭಕ್ತಿಯ ಅಂಜನ ಹಚ್ಚಿದುದೂ ನಿಜ ಅಷ್ಟು ಸಂಚಕಾರಕ್ಕೆ ಒಲಿಯಲು ದೇವರೇನು ಬಣಜಿಗನೇನು ? ಅವನಿಗೆ ಪೂಜೆ ಪುರಸ್ಕಾರಗಳ ಹಂಬಲವಿಲ್ಲ. ಆದಿ ಅನಂತತೆಗಳ ಅಂಜಿಕೆಯಿಲ್ಲ. ಆತ ನಿರಪೇಕ್ಷಿ. ಅಂತ ವಿಶ್ವತೋರೂಪನಾದ ಸುಂದರಾಂಗನಲ್ಲಿ ಅಲ್ಪತೆಯನ್ನೂ, ಆಸೆಯನ್ನೂ ಎಣಿಸುವುದು ಅಕ್ಷಮ್ಯ ಅಪರಾಧ

ಆಯಿತು. ಭಕ್ತಿ ಮೂಢಭಕ್ತಿಗಳಿಗೆ ದೇವರು ಸಂಪ್ರೀತನಾಗುವುದಕ್ಕೆ ಅವನೇನು ಲಪ್ಪಿನ್ಯೂ ಅಧಿಕಾರಿಯೋ, ಕಳ್ಳಪೇಟೆಯ ಬಣಜಿಗನೇ ?

ದೇವರು ಸೃಜಿಸಿದ ಸದ್ಧರ್ಮದಲ್ಲಿ 'ನಂಬುಗೆಯಿಲ್ಲದವನಿಗೆ ಮೂಢಭಕ್ತಿಯ ರೋಗ ಅಂಟಿಕೊಳ್ಳುತ್ತದೆ. ಆ ರೋಗಕ್ಕೆ ಔಷಧಿಯೇ ಇಲ್ಲ. ಅಂತ ಜೇಸಿಗನನ್ನು ಸಾವು ಜಡಿದು ಕೊಂಡೊಯ್ಯುವದು. ಆ ದುರ್ವಿಧಿ ಬರಬಾರದೆಂದೇ ವ್ಹೋಲ್ಟೇಅರ್ ಹೇಳಿದ್ದಾನೆ. 'ಅಕೀರ್ತಿ ಭಾಜನವಾದ ಮೂಢಭಕ್ತಿಯನ್ನು ಒರಸಿಹಾಕು.'

ಸಂಕಟದಲ್ಲಿದ್ದವನಿಗೆ ಮೂಢಭಕ್ತಿಯೆ ಊರುಗೋಲು. ಅದನ್ನು ಹಿಡಿದು ನಡೆದವನಿಗೆ ಹಾಳು ಭಾವಿಯೇ ಗತಿ. ದುಃಖಿಗೆ ಕಣ್ಣಿದ್ದರೂ ಕತ್ತಲೆ. ಅಂತ ಕಾಲದಲ್ಲಿ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಳ್ಳಬೇಕು. ಹೃದಯದ ಅಂಚಿನಲ್ಲಿ ಅರಿವಿನ ಸೂರ್ಯ ಮೆಲ್ಲ ಮೆಲ್ಲನೆ ಉದಯವಾಗ ತೊಡಗಿದಂದು ಕತ್ತಲೆಯ . ಕಾಳ ರಾತ್ರಿ ಸರಿದು, ಮೂಢಭಕ್ತಿಯ ಮಂಜು ಮಾಯವಾಗಿ ಸುತ್ತಲೂ ಬೆಳ್ಳಂಬೆಳಕು ತೋರುತ್ತದೆ. ಆ ಬೆಳಕಿನಲ್ಲಿ ತ್ರಮಿಸಿ ಹೋರಾಡಿ ದಿನಗಳೆಯುವವನು ಭಾಗ್ಯಶಾಲಿ.

ಹಳ್ಳಿಯ ಅಜ್ಞಾನದ ಅಂಗಡಿಯಲ್ಲಿ ಮೂಢಭಕ್ತಿಯ 'ಮಾಲು' ಸಿಗುತ್ತದೆ.ಅಲ್ಲಿ ಮತಾಧಿಕಾರಿಯೇ ದಲಾಲಿ ವಹಿಸುತ್ತಾನೆ. ಸಂಕಟದಲ್ಲಿದ್ದವನೇ ವ್ಯವಹಾರ ಮಾಡುತ್ತಾನೆ.ವರ್ತಕನು ಯಾವಾಗಲೂ ಮೋಸ ಮಾಡಿ ಹಣ ಗಳಿಸುತ್ತಾನೆ. ಸುಳ್ಳು ಕಳ್ಳತನಗಳನ್ನೆಲ್ಲ ಬಣಜಿಗನು ಬಲ್ಲನೆಂದು ಸರ್ವಜ್ಞನೇ ಹೇಳಿದ್ದಾನೆ.ಆದುದರಿಂದ ಮೂಢಭಕ್ತಿಯುಳ್ಳವನನ್ನು ಸುತ್ತು ಕಡೆಯಿಂದ ಬಂದು ಸುಲಿಗೆಗಾರರು ಸುಲಿಯುತ್ತಾರೆ. ಸನಾತನವಾದಿಗಳೆಂದು ಕೊಚ್ಚಿ ಕೊಳ್ಳುವವರ ಲಕ್ಷ್ಯ ಯಾವಾಗಲೂ ಇತ್ತ ಕಡೆಗೆ ಇರಲಿ.

ದಾರಿದ್ರ್ಯಕ್ಕೂ ರೋಗರುಜಿನಗಳಿಗೂ ಪುರಾತನ ಕಾಲದಿಂದ ಬಂದ ಸಂಬಂಧ. ಬಡವನಿಗೆ ದೇವರಿಲ್ಲ. ಆ ಕಾರಣದಿಂದಲೇ ಬಡವರು ತಮ್ಮ ಪಾಲಿನ ಲೋಕವೊಂದನ್ನು ಕಲ್ಪಿಸಿಕೊಂಡು ಅಲ್ಲಿ ತಮ್ಮ ಆಸೆ ಆಕಾಂಕ್ಷೆ ಗಳಿಂದ ಪ್ರೇರಿತನಾದ ದೇವರನ್ನು ಗದ್ದುಗೆಗೊಳಿಸಿ ಮೂಢಭಕ್ತಿ ಯಿಂದ ಅವನನ್ನು ಆರಾಧಿಸುತ್ತಾರೆ. ದಾರಿದ್ರ್ಯ ವೃಕ್ಷದಲ್ಲಿ ಬಿಡುವ

ಫಲವೇ ಮೂಢಭಕ್ತಿ. ಬೀಜಾಂಕುರ ನ್ಯಾಯದಿಂದ ಈ ಸರಪಳಿ ಅವಿಯಿಂವ ತಿರುಗುತ್ತಲೆ ಇರುವುದು.

ಮೂಢಭಕ್ತಿಯ ಲೋಪದೋಷಗಳನ್ನಷ್ಟು ಮರೆತರೆ ಅದೊಂದು ಆದರಣೀಯವಾದ ಅಭ್ಯಾಸ. ದೀನರಿಗೆ, ದುಃಖಿಗಳಿಗೆ, ದರಿದ್ರರಿಗೆ ಒಂದಿಲ್ಲ ಒಂದು ರೀತಿಯಿಂದ ಸಾಂತ್ವನ ಬೇಕೇಬೇಕು. ಬಂಜೆಗೆ ಊರ ಮುಂದಿನ ಬಿಲ್ವವೃಕ್ಷವೆ ಶಾಂತಿ ಪಾಠ ಹೇಳಿಕೊಡುವ ಗುರು ಸಾವಿನ ದವಡೆಯಲ್ಲಿ ಮಗನನ್ನಿರಿಸಿ ಬಂದ ತಾಯಿಗೆ ಕಲ್ಲು ದೇವರ ಬಲ ಭುಜದಲ್ಲಿರುವ ಜಾಜಿಯ ಹೂವೇ ಸಮಾಧಾನ ಕೊಡಬೇಕು. ಪಾಪಿ ಸಿರಿವಂತರಿಗೆ ಧರ್ಮವೇ ರಕ್ಷಾಕವಚ. ಇಂತ ನೂರೊಂದು ಸಂದರ್ಭಗಳಲ್ಲಿ ಮೂಢಭಕ್ತಿ ಬಂದು ನೆರವಾಗದೆ ಹೋದಲ್ಲಿ ಬಾಳು ಅಸಹನೀಯವಾದ ಬಂಜರು ಭೂಮಿಯಾದೀತು.

ಮೂಢಭಕ್ತಿ ಜನಜನಿತವಾಗಿ ಗತಾನುಗತಿಕವಾಗಿ ಬಂದ ಸಾಂಕೇತ. ಫಲದ್ರೂಪವಾದ ಬಾಳಿನಲ್ಲಿ ಅದು ಬೇರು ಬಿಟ್ಟ ಕರಿಕೆ. ಕವಿಗೆ ಕವಿಸಮಯವಿದ್ದಂತೆ ಜನತೆಗೂ ಇದೊಂದು ಜನಸಮಯ. ಇವೆರಡಕ್ಕೂ ಸಮ್ಮತಿ ಸೂಚಿಸುವವರು ಸೂಜಿಗೆ ಮುದ್ದು ಕೊಟ್ಟಂತಿರ ಬೇಕು. ವಿರೋಧವನ್ನು ವ್ಯಕ್ತಪಡಿಸುವವರು ಹೊಸ ಸಂಪ್ರದಾಯ ವನ್ನು ಹಾಕಿಕೊಡಲಿ.

ಸಹವಾಸ

'ನೀನು ಕೀರ್ತಿವಂತನಾಗಬಯಸಿದರೆ ಒಳ್ಳೆಯ ಚಾರಿತ್ರ್ಯವುಳ್ಳವರ ಸಹವಾಸವನ್ನೆ ಮಾಡು. ಕುಹಕರ ಸಂಗಕ್ಕಿಂತ ಏಕಾಂತವೆ ಮಿಗಿಲು' ಎಂದು ಜಾರ್ಜ ವಾಸಿಂಗ್ಟನ್ ಎಂಬಾತನು ಹೇಳಿರುವನು. ಸಹವಾಸದಿಂದ ಕೀರ್ತಿಯ ಫಲವನ್ನಪೇಕ್ಷಿಸುವುದಕ್ಕಿಂತಲೂ ಆತ್ಮ ಸಂಸ್ಕಾರದ ಹೆಚ್ಚಳವನ್ನು ಕಂಡುಕೊಳ್ಳುವುದು ನೂರು ಪಾಲಿಗೆ ಒಳ್ಳೆಯದು. ಸಹವಾಸದ ಲಾಭವು ಎಂದಿಗೂ ಎದ್ದು ತೋರುವುದಿಲ್ಲ. ಸಹವಾಸದ ಆಶ್ರಯದಲ್ಲಿ ದಾರಿ ನಡೆದವನು ಕೆಲಕಾಲ ಗತಿಸಿದ ನಂತರ ಹಿಂದಕ್ಕೆ ತಿರುಗಿ ನೋಡಿದರೆ ಮೂಡಿ ಬಂದ ತನ್ನ ಹೆಜ್ಜೆಗಳನ್ನು ಗುರುತಿಸುತ್ತಾನೆ. ಆಗ ಅವನು ಅಳಬೇಕು, ಇಲ್ಲವೆ ಹೆಮ್ಮೆಯಿಂದ ಹಿಗ್ಗಬೇಕು. ಅಂತ ಜಾವದಲ್ಲಿ ನಕ್ಕರೂ ಒಂದು ಚಂದ, ಅತ್ತರೂ ಒಂದು ಚಂದ. ನಕ್ಕವನು ತನ್ನ ಸುತ್ತಣ ಬಾಳನ್ನು ನಗಿಸುತ್ತ ಸಾಗಬೇಕು. ಅತ್ತವನು ತಾನು ತಪ್ಪಿದ ದಾರಿಯನ್ನು ಬಿಟ್ಟು ಸತ್ ಪಥದಲ್ಲಿ ನಡೆಯಬೇಕು. ಕಣ್ಣೀರಿನಲ್ಲಿ ಮಿಂದು ಬಂದವನಿಗೆ ಪೂರ್ವದ ದೋಷ ತೊಲಗಿ ಹೋಗಿ ಸತ್ ಸಂಗದ ಲಾಭವುಂಟಾಗಿ ಅವನು ಬದುಕುತ್ತಾನೆ.

ತಾಯಿಯಲ್ಲಿ ವಿಶ್ವಾಸವಿರಬೇಕು; ಸಹವಾಸದಲ್ಲಿ ಕಣ್ಣಿರಬೇಕು. ತಾಯಿ ಯಾರ ಸಹವಾಸವನ್ನು ಬೇಡವೆಂದು ಹೇಳುತ್ತಾಳೋ ಅಂತಹರನ್ನು ಕೂಡಲೆ ಬಿಟ್ಟುಬಿಡಬೇಕು. ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ ಎಂದು ಸರ್ವಜ್ಞನು ಹೇಳಿದ್ದಾನೆ. ಸರ್ವರೊಳಗೊಂದು ನುಡಿಗಲಿತು ವಿದ್ಯೆಯ ಪರ್ವತವೆ ತಾನಾದ ಸರ್ವಜ್ಞನ ಮಾತಿನಲ್ಲಿ ವಿಶ್ವಾಸವಿರಲಿ. ಇದಕ್ಕಿಂತಲೂ ಆತ್ಮೀಯವಾದ ಸಲಹೆಯನ್ನು ನಿನಗೆ ಯಾರೂ ಕೊಡಲಾರರು. ನಿನ್ನ ಬಾಳನ್ನು ತನ್ನ ಜೀವಮಾನದುದ್ದಕ್ಕೂ ಹರಸಿ ಕಾಯುವವಳೊಬ್ಬಳೇ ತಾಯಿ. ಬರಿ ಮನೆಯಲ್ಲಷ್ಟೇ ನಿನ್ನ ಹಿತವನ್ನು ಅವಳು ಕೋರುವದಿಲ್ಲ. ಹೊರಗೆ ಹೋದಾಗಲೂ ನಿನ್ನ ಪರೀಕ್ಷೆಯಲ್ಲಿಯೂ ಹಿತಚಿಂತನೆಯಲ್ಲಿಯೂ ಅವಳು ಮಗ್ನಳಾಗಿರುತ್ತಾಳೆ. ಆದುದರಿಂದ ನೀನು ಮಾಡುವ ಸಹವಾಸಕ್ಕೆ ತಾಯಿಯ

ಸನ್ಮತಿಯಿರಲಿ. ಅವಳು ಅಭಯವಿತ್ತರೆ ವೇದವಾಕ್ಯವನ್ನು ನೀನು ಕಡೆಗಣಿಸಿ ನಡೆದರೆ ನನ್ನದೇನೂ ಆಕ್ಷೇಪವಿಲ್ಲ.

ಬಾಳಿನ ಉದ್ಯಾನದಲ್ಲಿ ಸಹವಾಸಿಗನೇ ತೋಟಿಗ. ಹೂವಿಗೆ ಕೀಡೆ ಹತ್ತದಂತೆ ಅವನು ನೋಡಿಕೊಳ್ಳಬೇಕು. ಆವಾರದ ಕಳ್ಳಿ ಬೆಳೆದು ಲತಾಕುಂಜಗಳನ್ನು ಮುಸುಕದಂತೆ ಜಾಗರೂಕತೆ ವಹಿಸಬೇಕು. ಮರಕುಟಿಗಗಳು ಬಂದು ದಾಳಿಂಬದ ಚಿಗುರುಗಳನ್ನು ಕತ್ತರಿಸದಂತೆ ಎಚ್ಚರ ವಹಿಸಬೇಕು. ಅಬ್ಬರದ ಬಿರುಗಾಳಿ ಕೊಚ್ಚಿಬಂದು ತೋಂಟದ ಕುಸುಮ ಪುಂಜ ಕಿತ್ತು ಹಾಕದಂತೆ ಭದ್ರತೆಯನ್ನು ಮಾಡಿಕೊಳ್ಳಬೇಕು. ಇಷ್ಟಾದಲ್ಲಿ ಉಪವನವು ರಮ್ಯಮನೋಹರವಾಗಿ ತೋರಿ ಪಥಿಕರಿಗೂ ನಿರಾಶಾಪೀಡಿತರಿಗೂ ಆಹ್ಲಾದವನ್ನುಂಟು ಮಾಡುವುದು. ಇಂತಹ ಸಹವಾಸಿಗಳನ್ನು ಸಂಪಾದಿಸಿಕೊ. ಆಗ ನೀನೇ ಪುಣ್ಯವಂತ.

ಸಿರಿ ಬಂದ ಕಾಲಕ್ಕೆ ಸಹವಾಸಿಗಳು ಕೂಡಿ ಬರುತ್ತಾರೆ. ದಾರಿದ್ರ್ಯ ಒಂದಡರಿದ ಸಮಯಕ್ಕೆ ಹುಟ್ಟು ಹರಿದ ಜೇನ್ನೊಣದಂತೆ ಅವರು ತೊಲಗಿ ಹೋಗುತ್ತಾರೆ. ಆದುದರಿಂದ ಸಿರಿವಂತಿಕೆಯಲ್ಲಿ ಸಹವಾಸಿಗಳ ನಿಶ್ಚಲ ಮನೋವೃತ್ತಿಯನ್ನು ನಿರ್ಧರಿಸುವ ಗುಣವಿಲ್ಲ. ಒಂದು ವೇಳೆ ಶ್ರೀಮಂತನು ತನ್ನ ಸಹವಾಸಿಗಳ ಮನಸ್ಸನ್ನು ಪರೀಕ್ಷಿಸಬೇಕೆಂದು ಎಳಸಿದರೆ ಆತನು ದರಿದ್ರ ಚಾರುದತ್ತನ ಪಾತ್ರವಹಿಸಲಿ. ಆಗ ತಾನು ನಿಂತ ನೆಲೆ ಏನೆನ್ನುವುದು ಗೊತ್ತಾಗುತ್ತದೆ. ಹೊರಗಿನಿಂದ ವಸಂತಸೇನೆ ಬರುವದೊತ್ತಟ್ಟಿಗಿರಲಿ. ಮನೆಯ ಮಡದಿಯೂ ಮೂಗು ಮುರಿಯಲು ತೊಡಗುತ್ತಾಳೆ. ಇನ್ನು ಹೊರಗಿನವರ ಪಾಡೇನು? ದಾರಿದ್ರ್ಯವೇ ಸಹವಾಸಿಗಳ ಮನಸ್ಸನ್ನು ಪರೀಕ್ಷಿಸಿ ನೋಡುವ ಸೂಜಿಗಲ್ಲು. ಖಂಡಿತದ ನುಡಿಯೊಂದನ್ನು ನಾನು ಹೇಳಬಯಸುತ್ತೇನೆ. ಸಿರಿವಂತರಿಗೆ ಇರುವ ಸಹವಾಸಿಗಳೆಲ್ಲರೂ ವಂಚಕರು. ಅವರು ಹುಸಿ ವಿನಯ ತೋರುತ್ತಾರೆ. ಕಾಮಿತ ಕಾಂಕ್ಷಿತದ ತೃಪ್ತಿಯ ಲಾಭಕ್ಕಾಗಿಯೆ ಅವರು ಸಹವಾಸದ ಸೋಗು ಹಾಕಿಕೊಂಡು ಬಂದಿರುವ ನಟರು.

ಸಹವಾಸ ವಯಸ್ಸಿಗೆ ತಕ್ಕಂತೆ ರೂಪ ತಳೆದು ಬರುವದು. ಚಿಕ್ಕಂದಿನಲ್ಲಿ ಕಲ್ಲು ಮಣ್ಣು, ಹೂವು ಹುಲ್ಲು, ಮಾತಾಪಿತೃಗಳ

ಸಹವಾಸದ ಆರೈಕೆದೊಟ್ಟಿಲಲ್ಲಿರು. ಪ್ರಾಯಕ್ಕೆ ಬಂದಾಗ ಗ್ರಂಥಾದಿಗಳ ಸಹವಾಸವಿರಲಿ. ನಡುವಯದಲ್ಲಿ ಗ್ರಂಥಗಳ ಜತೆಗೆ ದೇಶಕೋಶಗಳ ಸಹವಾಸವೂ ಬೇಕು. ಮುಪ್ಪಿನಲ್ಲಿ ಮಾತ್ರ ಎಳೆಯರ ಸಹವಾಸ ಅತ್ಯಗತ್ಯ. ಬಾಲ್ಯಕ್ಕೂ ಮುಪ್ಪಿಗೂ ನೆಳಲು ಬೆಳಕಿನ ಬಾಂಧವ್ಯವುಂಟು. ಯಾವ ಕಾಲಕ್ಕೂ ಓರಗೆಯವರ ಸಹವಾಸ ಬೇಡ. ನನಗೆ ಸರಿಕರಲ್ಲಿ ವಿಶ್ವಾಸವಿಲ್ಲ.

ಬಾಲ್ಯದ ಸಮಯ ಸುಮಕೋಮಲ. ಹಸಿಯ ಗೋಡೆಯಂತೆ ಎಳೆಯರ ಮನಸ್ಸು. ಒಂದು ಹರಳು, ಒಂದು ಗಾಜಿನ ಚೂರು ಒಗೆದರೆ ಅಲ್ಲಿ ನೆಟ್ಟು ಮರೆಯದಂತಹ ಗಾಯ ಮಾಡುತ್ತದೆ. ಆ ಗಾಯ ಸಂದಿಸುವುದೇ ಕಷ್ಟ. ಜೀವನದುದ್ದಕ್ಕೂ ಅದರ ಗುರುತು ಮೂಡಿ ನಿಲ್ಲುವುದು. ಸಹವಾಸದ ಫಲವಾಗಿ ಎಳವಯದಲ್ಲುದ್ಭವಿಸುವ ಚಟವು ಜೀವನ ನಾಟಕದ ಕೊನೆಯಂಕಿನ ಪಡದೆ ಬೀಳುವವರೆಗೂ ತನ್ನ ಕಪಿಮುಷ್ಟಿಯನ್ನು ಬಿಚ್ಚುವುದೇ ಇಲ್ಲ. ಗರ್ಭಿಣಿಯ ಹೆರಿಗೆಯ ಸುಮುಹೂರ್ತದ ಬಗೆಗೆ ವಹಿಸುವ ಜಾಗ್ರತೆಯನ್ನೆ ಎಳೆತನದಲ್ಲೊದಗುವ ಸಹವಾಸದ ಸುಮಂಗಲ ಸಮಯದಲ್ಲೂ ವಹಿಸಬೇಕು. ಒಳ್ಳೆಯ ಸಹವಾಸದಿಂದ ದೊರೆತ ಫಲವೂ, ಬಂಜೆ ದೀರ್ಘಕಾಲದ ನಂತರ ಪುತ್ರ ರತ್ನವನ್ನು ಕಾಣುವ ಭಾಗ್ಯವೂ ಸಮ.

ಉತ್ತಮರ ಸಹವಾಸ ಬಯಸುವವನು ಮೊದಲು ತಾನು ಒಳ್ಳಿವನಾಗಿ ತೋರಲಿ. ಪರುಷ ಮುಟ್ಟಿದ ಕಲ್ಲು ಪರುಷವೇ ಆಗುವುದಲ್ಲದೆ ಶಿಲೆಯಾಗಿ ಉಳಿಯಲಾರದು. ನಿನ್ನ ಸ್ಪರ್ಶದಲ್ಲಿ ಸ್ನೇಹಾಮೃತವಿದ್ದರೆ ನೀನು ಮುಟ್ಟಿದ ಬದನೆಯ ಕಾಯಿಯೂ ಶಿವಲಿಂಗವಾಗುವದು, ಕಾರಣಪುರುಷರ ಬಾಳಿನಿಂದ ಈ ಮಾತಿನ ಅರ್ಥವನ್ನರಿತುಕೊ.

ಸತ್ ಸಂಗಕ್ಕಾಗಿ ಹಾತೊರೆದು ನಿಂತವನಿಗೊಂದು ಕಿವಿ ಮಾತು ಹೇಳಬಯಸುತ್ತೇನೆ. ಕೇದಗೆಯಲ್ಲಿ ಹಾವು ವಾಸಿಸಿರುತ್ತದೆ. ಹಾವಿನ ಕೊರಳಲ್ಲಿ ವಿಷವಿರುತ್ತದೆ; ಹೆಡೆಯಲ್ಲಿ ರತ್ನವಿರುತ್ತದೆ. ಇವೆರಡರಲ್ಲಿ ಬೇಕಾದುದನ್ನು ಆರಿಸಿಕೊ. ನಿನ್ನ ಇಷ್ಟ.

ಮೌನ

ಮೌನವು ಪಂಡಿತನ ಲಕ್ಷಣ. ನಿಷ್ಕಾರಣವಾದ ಮಾತು ಬಂಡವಾಳವಿಲ್ಲದ ಬಡಾಯಿಯ ಚಿಹ್ನ. ಪ್ರಶಾಂತವಾದ ನೀರಿನ ಸಮಪಾತಳಿ ಜಲ ಸಮೃದ್ಧಿಯನ್ನು ಸೂಚಿಸುವಂತೆ ಪ್ರತಿಭಾವಂತನ ನಿರ್ಮಲ ಮೌನ ಪಾಂಡಿತ್ಯದ ಗಭೀರತೆಯನ್ನು ಸೂಚಿಸುತ್ತದೆ. ಗಾಳಿಗೆ ಕದಲುವ ನೀರಿಗೆ ಆಳವಿರುವದಿಲ್ಲ. ಗೊತ್ತು ಗುರಿಯಿಲ್ಲದ ಮಾತಿಗೆ ಬೆಲೆಯಿಲ್ಲ.

ಏಕಾಂತದಲ್ಲಿ ತನ್ನೊಡನೆಯೆ ತಾನು ಮಾತನಾಡಬೇಕು. ಒಳಗಿರುವ ಜೀವಾತ್ಮನೊಡನೆ ವಿಶ್ವಾಸಕೊಟ್ಟು ಮಾತನಾಡಬೇಕು. ತಾನು ಮಾಡಿದ ತಪ್ಪನ್ನು ಅವನ ಸಮ್ಮುಖದಲ್ಲಿ ಒಪ್ಪಿಕೊಂಡರೆ ಮುಂದಕ್ಕೆ ತನಗೆ ಬದುಕಿರಲು ಕಾಲವುಂಟು. ಅವನಿದಿರಿನಲ್ಲಿ ಸುಳ್ಳು ಹೇಳ ಬಯಸುವವನು ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುವನು. ಅದಕ್ಕಾಗಿಯೆ 'ನಿನ್ನನ್ನು ನೀನರಿತುಕೊ; ಶಿವ ತಾನಾಗಿಯೆ ನಿನ್ನನ್ನರಿವ' ಎಂದು ಬಲ್ಲಿದರು ಹೇಳಿದರು. ಯಾರ ಇದಿರಿನಲ್ಲೂ ನಿನಗೆ ನಿನ್ನ ಲೋಪ ದೋಷಗಳನ್ನು ಒಪ್ಪಿಕೊಳ್ಳುವುದಕ್ಕಾಗದಿದ್ದರೂ ನಿನ್ನಲ್ಲಿ ಮಾತ್ರ ವಂಚಿಸಿಕೊಳ್ಳಬೇಡ.

ಜ್ಞಾನಿಯು ಮೌನದಿಂದ ತನ್ನ ಸಮ್ಮತಿಯನ್ನು ಸೂಚಿಸುತ್ತಾನೆ. ಡಾಂಭಿಕನು ಹಾಗೆ ಮಾಡದೆ ತನ್ನ ಜ್ಞಾನದ ದಾರಿದ್ರ್ಯವನ್ನು ಮೊದಲು ಬಯಲಿಗಿರಿಸಿ ನಂತರ ಒಪ್ಪಂದದ ಮಾರ್ಗಕ್ಕಿಳಿಯುತ್ತಾನೆ. ಮೌನದಿಂದ ನುಡಿಯುವವರು ಉತ್ತಮರು. ನುಡಿದು ಮೌನ ತಳೆಯುವವರು ಮಧ್ಯಮರು. ನುಡಿಸದೆ ನುಡಿಯುವವರು ಅಧಮರು.

ಮುಖ ನೋಡಿ ಮಣೆ ಹಾಕುವವರು ಹೆಜ್ಜೆ ಹೆಜ್ಜೆಗೂ ಉಂಟು. ಅಡಿ ಅಂಗಳ ತೋರಿಸಿದರೆ ಒಳಗಿನ ಹಂದರವನ್ನೇ ಹಿಡಿದು ಸೆಳೆಯುವುದಕ್ಕೆ ಸಿದ್ಧರಾದವರಿಗೆ ಕೊರತೆಯಿಲ್ಲ. ಅಂತಹರ ಇದಿರಿನಲ್ಲಿ

ಮೌನ ತಳೆದಿದ್ದಾದರೆ ಮಣ್ಣು ತಿಂದ ಕಿಶೋರನ ಬಾಯನ್ನು ತೆರೆಯಿಸಿ ಯಶೋದೆಯು ಕಷ್ಟಪಟ್ಟಂತೆ ಇವರೂ ಕಷ್ಟಪಡುತ್ತಾರೆ. ಮೌನವ್ರತ ಹಿಡಿದ ಮೂರ್ಖನಿಗೂ ಕಾಲವಶದಿಂದ ಬುದ್ಧಿವಂತಿಕೆಯ ಪಟ್ಟ ಬರುತ್ತದೆ.

ಮೌನ ಮೂರು ವಿಧ: ನಿದ್ರಾಮೌನ, ಪಾಪಿನಮೌನ, ಪಂಡಿತನ ಮೌನ. ಮೊದಲನೆಯದು ಕ್ಷಣಿಕ, ಬೆಲೆಯಿಲ್ಲದ್ದು. ಎರಡನೆಯದು ದೀರ್ಘ, ಬೆಲೆಗೆ ನಿಲುಕದುದು. ಮೂರನೆಯದು ಸಮಯೋಚಿತವೂ, ಪ್ರಜ್ಞೆಯಿಂದೊಡಗೂಡಿದುದು, ಬೆಲೆ ಕೊಟ್ಟರೂ ಬಾರದದು. ಈ ಮೌನವನ್ನು ಅರಸ ಆಳಲರಿಯನು, ಸರ್ವಾಧಿಕಾರಿಯು ಸಂಪಾದಿಸ ಲರಿಯನು. ಮೌನವನ್ನು ಕೊಂಡು ತರಬಲ್ಲೆಯಾ? ಪ್ರಯತ್ನಿಸಿ ನೋಡು.

ದುಃಖದ ಅತಿರೇಕವನ್ನು, ಆನಂದದ ಹೆಚ್ಚಳವನ್ನು ವ್ಯಕ್ತ ಪಡಿಸುವ ಶಕ್ತಿ ಮಾತಿಗಿಲ್ಲ. ಎಂತ ವಾಗ್ಮಿಯೂ ತನ್ನ ಮನಸ್ಸಿನ ವಿಚಾರಗಳನ್ನು ಸ್ಪಷ್ಟವಾಗಿ ಮಂಡಿಸಲರಿಯನು. ಎಂತ ಲೇಖಕನೂ ತನ್ನ ಭಾವನೆಯ ಓಟವನ್ನು ಶಬ್ದ ಜಾಲದಲ್ಲಿ ಹಿಡಿದು ನಿಲ್ಲಿಸಲರಿಯನು. ವಿಚಾರವಾಹಿನಿಗೆ ಮಹಾಪೂರ ಬಂದ ಸಂದರ್ಭದಲ್ಲಿ ಭಾವಾರ್ಥಕ ಚಿಹ್ನೆಗಳೇ ಅಡ್ಡ ಬಂದು ನಿಂತು ಪ್ರವಾಹಕ್ಕೆ ದಾರಿಮಾಡಿ ಕೊಡುವವು. ಮಾತು ಸೋತು ನಿಂತಾಗ ಅದರ ಕಾರ್ಯವನ್ನು ಮೌನವು ಯಶಸ್ವಿಯಾಗಿ ನಿರ್ವಹಿಸಿ ವಿಜಯ ಕಿರೀಟವನ್ನು ಧರಿಸಿ ನಿಲ್ಲುವುದು.

ನಂಟರಿದ್ದಲ್ಲಿ ಹಣ ಎಣಿಸಬಾರದು. ಕಳ್ಳರಿದ್ದಲ್ಲಿ ವಸತಿ ಮಾಡ ಬಾರದು. ಸುಳ್ಳರಿದ್ದಲ್ಲಿ ಮೌನ ಬಿಚ್ಚಬಾರದು. ಆಡಿದ ಒಂದು ಮಾತಿನಿಂದ ಅಂಗೈ ಗೆರೆಗಳನ್ನು ಎಣಿಸುವುದರಲ್ಲಿ ಸುಳ್ಳರು ಪ್ರವೀಣರು. ಮಾತು ಎಣಿಸಿ ಆಡುವುದು ಬಹು ಕಷ್ಟಕರವಾದದ್ದು. ಅದು ನಿನಗೆ ಸಾಧ್ಯವಿದ್ದರೆ ಒಳ್ಳೆಯದೆ ಆಗುವುದು. ಕಷ್ಟವೆಂದೆನ್ನಿಸಿದರೆ ಸರ್ವತ್ರ ಸಾಧನವಾದ ಮೌನವನ್ನೆ ಮರೆಹೊಗು.

ಆಧ್ಯಾತ್ಮಿಗೆ ಮೌನವೆ ಊರುಗೋಲು. ರಾಜಕಾರಣಿಗೆ ಮಾತು ಗಾರಿಕೆಯೆ ಪ್ರಗತಿಯ ಸೋಪಾನ. ಲೋಕವ್ಯವಹಾರಿಗೆ ಮೌನದಲ್ಲೂ

ಹಿಡಿತವಿರಬೇಕು. ಮಾತಿನಲ್ಲೂ ತೂಕವಿರಬೇಕು. ಅವನು ಮೌನ ತಳೆದರೆ 'ನಂಬಬಾರದ ಗುಂಬ'ನೆಂದೆಂಬ ಟೀಕೆಗೆ ಗುರಿಯಾಗುತ್ತಾನೆ. ಮಿತಿ ಮೀರಿ ಮಾತನಾಡಿದರೆ 'ಬಾಯಿ ಬಡಕ' ನೆಂದೆಂಬ ಜರುನುಡಿಗೆ ಈಡಾಗುತ್ತಾನೆ. ಆದುದರಿಂದ ಮೌನವನ್ನು ಕಾಲ, ದೇಶಗಳ ಹದಣವನ್ನರಿತು ಧರಿಸಬೇಕು. ಮೌನಿ ಮಾನಸ ಶಾಸ್ತ್ರದಲ್ಲಿ ಪಂಡಿತನಾಗಿರುವುದು ಅಗತ್ಯ.

ಅಪರಾಧಿಗೆ ಮೌನವೇ ತಕ್ಕ ಶಾಸ್ತಿ. ತಪ್ಪು ಮಾಡಿದವನು ಏಕಾಂತದಲ್ಲಿ ಹೋಗಿ ತನ್ನಲ್ಲಿಯೆ ತಾನು ಕ್ಷಮೆ ಬೇಡಿಕೊಳ್ಳಬೇಕು. ಅಲ್ಲಿ ಅವನಿಗೆ ದಯೆ ದೊರೆಯುವುದು. ಏಕಾಕಿಯಾಗಿದ್ದವನನ್ನು ಮೌನವು ಹಿಂಬಾಲಿಸಿ ಅವನನ್ನು ರಹಸ್ಯವಾದ ತಾಣಕ್ಕೆ ಕರೆದೊಯ್ದು ವಿವೇಕೋದಯವನ್ನುಂಟು ಮಾಡುತ್ತದೆ. ಅವನ ಕದಡಿದ ಚಿತ್ತವನ್ನು, ಹರಿದ ಇಂದ್ರಿಯಗಳನ್ನು ಬಂಧಿಸಿ ಮನಸ್ಸನ್ನು ಕೇಂದ್ರೀಕರಿಸಿ ಸನ್ಮಾರ್ಗದ ಕಡೆಗೆ ಮೊಗದಿರುಗಿಸುತ್ತದೆ. ಆ ದಾರಿಯಲ್ಲಿ ನಡೆದವನಿಗೆ ಸಮಸ್ತ ಮಂಗಲವೂ ಉಂಟು.

ಜ್ಞಾನಿಗಳು ಮೌನವನ್ನೇ ಹಿಂಬಾಲಿಸಿ ಬಾಳ ಬಟ್ಟೆಯ ಪರಮಾಗವನ್ನು ಕಂಡುಕೊಳ್ಳುವರು. ಹಕ್ಕಿಯು ತನ್ನ ಬಳಗವನ್ನಗಲಿ ಏಕಾಂತವಾದ ತಾಣದಲ್ಲಿ ಹೋಗಿ ಬೆಳೆದ ತನ್ನ ರೆಕ್ಕೆಗಳನ್ನು ಚಂಚುಪುಟದಿಂದ ಕಿತ್ತುಹಾಕಿ ಹೊಸ ರೆಕ್ಕೆಗಳ ಉದಯಕ್ಕೆ ಇಂಬುಮಾಡಿಕೊಡುವಂತೆ ಜ್ಞಾನಿಯು ಜನವಿಹೀನವಾದ ಪ್ರದೇಶಕ್ಕೆ ಹೋಗಿ ತನ್ನ ಮಲಿನವಾದ ಮನಸ್ಸನ್ನು ಪ್ರಾಯಶ್ಚಿತ್ತದ ಕಣ್ಣೀರಿನಿಂದ ತೊಳೆದು ಹೃದಯವನ್ನು ಹಸನುಗೊಳಿಸುತ್ತಾನೆ. ವಿವೇಕ ಚಂದ್ರಮನುದಯವಾದ ಬಳಿಕ ಹೃದಯದ ತಿಳಿನೀರ ಕಾಸಾರದಲ್ಲಿ ಕನ್ನೈದಿಲೆಗಳು ಪುಟಪುಟನೆ ಅರಳುವುದು ಸ್ವಾಭಾವಿಕವಷ್ಟೇ!

ಲೋಕದ ಘನ ಮೌನವನ್ನು ಮುರಿದವನು ನೀನೊಬ್ಬನೆಂದರಿತುಕೊ. ಆಗ ತುಸು ಮೌನ ತಳೆದು ನೋಡು. ಸುತ್ತಲೂ ಚಿರಶಾಂತಿ ನೆಲೆಸಿರುವುದನ್ನು ನೀನು ಅನುಭವಿಸುವಿ. ಇಷ್ಟು ದಿನ ಇಳೆಯ ಮೌನ ಕೆಡಿಸಿದುದಕ್ಕೆ ನೀನು ಆಗ ಕ್ಷಮೆ ಬೇಡುವಿ.

ಮೌನದ ಮಹತಿಯನ್ನರಿಯಬಯಸುವವನು ಸೂರ್ಯ ಚಂದ್ರಮರ ಉದಯಾಸ್ತಗಳನ್ನು ನಿರೀಕ್ಷಿಸಲಿ. ಮೌನವಾಂತ ತರುಮರಾದಿಗಳನ್ನವಲೋಕಿಸಲಿ. ದಿನಗಳಿಂತು ಉರುಳಿದ ಮೇಲೊಂದು ದಿನ ಈ ಮೌನದಾರಾಧನೆಯಿಂದುದ್ಭವಿಸಿದ ತನ್ನಲ್ಲಿಯ ಮಹದಂತರದ ಕಾರಣವನ್ನು ಮೌನದಿಂದ ಭಾವಿಸಲಿ.

ಸೌಂದರ್ಯ

ವಿಶಾಲವಾದ ಪೃಥ್ವಿಯೆ ಸೌಂದರ್ಯದ ತವರುಮನೆ. ಬಾನಿನುದ್ದ ಅಗಲ ಹಬ್ಬಿದ ಈ ಸೃಷ್ಟಿಯ ಅಣುರೇಣುವಿನಲ್ಲಿಯೂ ಸೌಂದರ್ಯದ ಕಿಡಿ ಅಡಕವಾಗಿದೆ. ಅದರಿಂದ ನಿನ್ನ ಅಂತಶ್ಶಕ್ತಿಯನ್ನು, ಬಾಹ್ಯ ತೇಜಸ್ಸನ್ನು ಹೆಚ್ಚಿಸುವುದು ನಿನ್ನನ್ನೇ ಕೂಡಿದೆ. ಮರಬಳ್ಳಿ, ಕಲ್ಲುಮಣ್ಣು, ನೆಲ ಜಲ ಬಾನು, ಸೂರ್ಯ ಚಂದ್ರ ತಾರಾಗಣ........ ನಿನ್ನ ಕಣ್ಣಿಗೆ ಏನೇನು ಕಾಣಿಸುತ್ತಿವೆಯೊ ಅವೆಲ್ಲ ನಿನ್ನ ಮನಸ್ಸನ್ನು ಮುಟ್ಟಿ ನಿನ್ನ ಆಹ್ಲಾದವನ್ನು ಅರಳಿಸುವುದಕ್ಕೇ ಹುಟ್ಟಿ ಬಂದಿವೆ. ಪ್ರಿಯ ಮನುಜ, ನೀನು ಬಹಳ ಪುಣ್ಯವಂತ. ಲೋಕಕ್ಕೆ ಲೋಕವೇ ಸೃಷ್ಟಿಗೆ ಸೃಷ್ಟಿಯೇ ನಿನ್ನನ್ನು ಓಲೈಸುವುದಕ್ಕೆ ಸಿದ್ಧವಾಗಿ ನಿಂತಿದೆ. ಹಾಸುಗೆಯಿಂದ ಏಳುವ ಮುನ್ನವೆ ಉದಯ ರವಿ ನಿನ್ನ ಮುಂಜಾವಿನ ಸೇವೆಗಾಗಿ ಮುಗುಳು ಮಲ್ಲಿಗೆಗಳನ್ನರಳಿಸಿ, ಗಿಡಗಂಟಿಗಳ ಕೊರಳೊಳಗಿಂದ ಹಾಡನುಕ್ಕಿಸಿ ನಿನ್ನ ಹಸಾದಕ್ಕಾಗಿ ಕಾಯುತ್ತ ನಿಂತಿರುವನು. ನೀನು ಅಂಗಳದಲ್ಲಿ ಹೊರಸಿನ ಮೇಲೊರಗಿದಾಗ ಮೇಲೆ ಬಾನಿನಲ್ಲಿ ನಕ್ಷತ್ರಗಳು ಮೂಡಿ ಬಂದು ಒಂದರ ಹಿಂದೊಂದು ಚಿತ್ರಾಕಾರವಾಗಿ, ಚನ್ನಮ್ಮನ ದಂಡೆಯಾಗಿ ಬಂದು ನಿಂತು ನಿನ್ನೊಲ್ಮೆಯನ್ನು ಸಂತಸದಿಂದ ತುಂಬಿ ತುಳುಕಿಸುವದಕ್ಕಾಗಿ ಹಾತೊರೆಯುತ್ತಿರುವವು. ಎಲೆಮುಚುಗನನ್ನು ನೋಡು, ಸೂರ್ಯಪಾನವನ್ನು ಪರಿಕಿಸು, ಮಾಂದಳಿರನ್ನವಲೋಕಿಸು! ದುಂಬಿಗಾನ, ಜೇನೆಯುಲಿ, ಕೋಗಿಲದಿಂಚರ- ಯಾವ ಹಕ್ಕಿಯ ಹಾಡು ಕೇಳು! ನದಿಯ ರಾಗ, ಝರಿಯ ನಾದ, ಸಮುದ್ರ ಗೀತ ಒಂದೊಂದೂ ನಾದ ಬಂಧುರ, ಭಾವ ಸುಂದರ! ಓಂ! ಸತ್ಯಂ ಶಿವಂ ಸುಂದರಂ! ಭೂಮಿಯಲ್ಲಿ ನೋಡಬೇಕಾದದ್ದು ಪಡೆಯಬೇಕಾದದ್ದು ಇದೇನೆ. ನೀನು ಜನುಮ ತಳೆದು ಬಂದುದು ಇದಕ್ಕೇನೆ. ಇದರ ಹೊರತು ಇಲ್ಲಿ ಸಾಧಿಸುವ ಶ್ರೇಯ ಸಂಪದಗಳಿನ್ನೇನಿಲ್ಲ. ಇದರ ಸವಿಗಿಂತ ಮಿಗಿಲಾದುದನ್ನು ಅನುಭವಿಸಲು ನೀನು ಇಲ್ಲಿ ಇರಬೇಕಾದುದಿಲ್ಲ. ಇರುವಷ್ಟು ಕಾಲ ನಿಮಿಷ ನಿಮಿಷಗಳನ್ನು ಎಣಿಕೆ ಮಾಡಿ ಈ ಅದ್ಭುತ ಸೃಷ್ಟಿಯ ಅಣುರೇಣುವಿನಲ್ಲಿಯೂ

ಅಡಕವಾದ ಸೌಂದರ್ಯ ಜಲಧಿಯನ್ನು ಬೊಗಸೆ ತುಂಬ ಈಂಟು,ಸುಖಿಸು, ಕೃತ ಕೃತ್ಯತೆಯನ್ನು ಹೊಂದು.

ಸೌಂದರ್ಯವನ್ನು ಸಣ್ಣ ಮನಸ್ಸಿನಿಂದ ನೋಡಬೇಡ. ಹೆಣ್ಣಿನಲ್ಲಿರುವ ಸೌಂದರ್ಯ ನೀನು ತಿಳಿದಷ್ಟು ಕ್ಷುಲ್ಲಕವಾಗಿಲ್ಲ. ಹುವ್ವಿನಲ್ಲಿರುವ ಚೆಲುವು ನೀನೆಣಿಸಿದಷ್ಟು ಅಲ್ಪವಾಗಿಲ್ಲ. ಮಳೆಬಿಲ್ಲಿನಲ್ಲಿರುವ ಮೋಹಕತೆಯು ನೀನು ಭಾವಿಸಿದಷ್ಟು ಕ್ಷಣಿಕವಾಗಿಲ್ಲ. ಸೌಂದರ್ಯ ಎಲ್ಲಿಯೇ ಇರಲಿ, ಇದ್ದುದು ಅರೆ ನಿಮಿಷವೆ ಇದ್ದು ಆರಿ ಹೋಗಲಿ ಅದರ ಮಹತಿಯನ್ನು ವ್ಯಾವಹಾರಿಕ ದೃಷ್ಟಿಯಿಂದ ನೀನು ನಿರ್ಧರಿಸಬೇಡ. ಸೌಂದರ್ಯ ಅವಿನಾಶಿ. ಅದು ನಿತ್ಯಸತ್ಯವೂ, ನಿತ್ಯಾನಂದದಾಯಿಯೂ ಆಗಿರುವುದು. ಅದನ್ನು ಬೆಲೆಯಿಂದ ನಿರ್ಧರಿಸಲಾಗದು. ಎಂತಲೆ ನಾಗಚಂದ್ರನೆಂಬ ಕವಿ '....ಬೆಲೆಯಿಂದಕ್ಕುಮೆ ಎಲೆ ಗಾವಿಲ! ಭುವನದ ಭಾಗ್ಯದಿಂದಮಕ್ಕುಂ! ನೋಳ್ಪಂ ಬೆಲೆಗೊಟ್ಟು ತಾರ, ಮಲಯಾನಿಲನಂ, ಮನೋಜನಂ, ಮಧುಮಹೀತನಂ, ಕೌಮುದಿಯುಂ' ಎಂದು ಹೇಳಿರುವನು. ಸೌಂದರ್ಯದ ನಿಜರೂಪವನ್ನರಿತುಕೊಳ್ಳುವದಕ್ಕೆ ಹೃದಯವೂ ಕಣ್ಣೂ ಬೇಕು. ಮೇಲು ನೋಟಕ್ಕೆ ಸುಂದರ ಪದಾರ್ಥಗಳು ಕ್ಷಣಿಕವಾಗಿಯೂ ಕೆಲಸಕ್ಕೆ ಬಾರದವುಗಳಾಗಿಯೂ ಕಾಣುತ್ತವೆ. ಆದರೆ ಸೌಂದರ್ಯದ ವಸ್ತುಸ್ಥಿತಿಯನ್ನರಿತುಕೊಂಡವನು ಹಾಗೆಂದಿಗೂ ಭಾವಿಸುವದಿಲ್ಲ.ಮೂಡಿ ಮುಳುಗುವ ನೇಸರಿನ ಹೊಂಗಿರಣಗಳಲ್ಲಿಯೂ, ಅರಳಿ ಬಾಡುವ ಕುಸುಮಗಳ ಪರಿಮಳದಲ್ಲಿಯೂ, ಏರಿ ಇಳಿಯುವ ತೆರೆಗಳ ತಾಕಲಾಟದಲ್ಲಿಯೂ ಸೌಂದರ್ಯದ ಅಂತರಂಗದ ಗುಟ್ಟನ್ನು, ಶಿವನ ಸೃಷ್ಟಿಯ ಸಂಕೇತವನ್ನೂ ಪಡೆದು ಅವನು ದಿವ್ಯಾನಂದವನ್ನು ಹೊಂದುತ್ತಾನೆ. ಹೊರಗಣ್ಣಿಗೆ ಕಂಡ ಸುಖ ಒಳನೋಟಕ್ಕೆ ಅರ್ಥವಾದಾಗ ಅವನಿಗಿನ್ನೂ ಮಿಗಿಲಾದ ಸಂತಸವುಂಟಾಗುತ್ತದೆ. ಸೌಂದರ್ಯದ ಊಹೆಯಲ್ಲಿಯೆ ಸಂತತವಾದ ಆನಂದವಿದೆ. ಅದನ್ನು ಮುಟ್ಟಿ ಅನುಭವಿಸಬಾರದು. ಮುಟ್ಟದಿದ್ದಲ್ಲಿ ಸೌಂದರ್ಯವಾದರೆ ರಸಾನುಭವಿಯೂ ಹೆರವರ ಸುಖಕ್ಕೆ ಈಡಾಗುವ ಸುಂದರ ವಸ್ತುವೆ ಆದಾನು!

ಸೌಂದರ್ಯದ ಪೂಜೆಯಲ್ಲಿ ಪಾರಮಾರ್ಥಿಕ ಶ್ರೇಯವಿದೆ.

ಅಂತರಂಗದ ತೇಜೋಭಿವೃದ್ಧಿಯಿದೆ. ಮನಮುಟ್ಟಿ ಪ್ರಕೃತಿಯನ್ನು ಪೂಜಿಸಿದವನಿಗೆ ಮಾನಸಿಕ ಕ್ರಾಂತಿ ತೋರುವುದೆಂದು ಕು. ವೆಂ. ಪು. ಹೇಳಿದ್ದಾರೆ. ಪ್ರಕೃತಿ ರೂಪಸಿ ಸಾಮಾನ್ಯನನ್ನು ಒಲಿಯುವುದಿಲ್ಲ. ಅವಳು ಸದ್ಗುಣಿಯನ್ನೇ ಅರಸಿಕೊಂಡು ಬರುತ್ತಾಳೆ. ಒಳ್ಪು, ನನ್ನಿಗೆ ಆಗರವಾದವನ ಆರ್ತಿಕೆಯನ್ನು ಪಡೆಯಲು ಅವಳಿಗಿಷ್ಟ. ಗುಣನಿಧಿಯನ್ನು ಪ್ರಕೃತಿ ಚಂಚಲೆಯೂ, ಸೌಂದರ್ಯವನ್ನು ಸದ್ಗುಣಿಯೂ ಹುಡುಕಿಕೊಂಡು ಬಂದು ಒಬ್ಬರನ್ನೊಬ್ಬರು ಒಲೈಸಿ ಬದುಕಿನ ಸಾರ್ಥಕ್ಯವನ್ನು ಹೊಂದುವರು. ಪ್ರಕೃತಿ ರೂಪವತಿಯಾದಂತೆ ವಿರಾಗಿಣಿಯೂ ಆಗಿದ್ದಾಳೆ. ಕಲಾಪ್ರೇಮಿ ರಸಾನುಭವಿಯಾದಂತೆ ಋಷಿಯೂ ಆಗಿದ್ದಾನೆ. ಇಂತ ತಾದಾತ್ಮ್ಯ ಪೂರ್ವದ ಪುಣ್ಯದಿಂದ ದೊರೆಯುತ್ತದೆ. ಎಲ್ಲರೂ ಅದನ್ನು ಹುಟ್ಟಿದ ಮೇಲೆ ಗಳಿಸಲಾರರು. ಹುಟ್ಟಿನೊಡನೆ ಅದು ಹರಿದು ಬಂದಿರುತ್ತದೆ. ಸೌಂದರ್ಯವನ್ನು ಮನಮುಟ್ಟಿ ಪೂಜಿಸುವ ಭಕ್ತನಿಗೆ ಶಿವನ ಆದೇಶವು ಕೇಳಿ ಬರುವುದು. ಒಂದು ಹುವ್ವು ನೋಡಲಿ, ಒಂದು ಮೋಡ ನೋಡಲಿ, ಒಂದು ಪಕ್ಷಿಯನ್ನೇ ನೋಡಲಿ ಅದೆಲ್ಲ ಅವನಿಗೆ ನಂದನವನದಪ್ಸರೆಯರು ನಡೆಸಂತಹ ಸ್ವರ್ಗೀಯ ಸುಖವನ್ನೇ ತಂದುಕೊಡುತ್ತದೆ. ಈ ಲೋಕದಲ್ಲಿ ಕೋಟಿಗಟ್ಟಲೆ ಹಣಗಳಿಸಿದ ಸೆಟ್ಟಿ ಸಿರಿವಂತರು ಇಂತಹ ಸುಖವನ್ನು ಹಣ ಸೂರೆಮಾಡಿ ಪಡೆಯಬಲ್ಲರೇ? ಎಂತಲೆ ಕವಿ 'ಇಳೆಯಾಣ್ಮನ ದಿವ್ಯ ಸೃಷ್ಟಿಯನ್ನು ಕಂಡು ಸುಖವನ್ನನುಭವಿಸದವನು ಕೋಟಿ ಹಣವನ್ನು ಗಳಿಸಿದ್ದರೂ ಅವನ ಬಾಳು ಹೆಣದ ಬಾಳುವೆಯೆ ಸರಿ' ಎಂದು ನಕ್ಕು ನುಡಿದಿದ್ದಾನೆ.

ಮನಸ್ಸನ್ನು ಸೌಂದರ್ಯದಾರಾಧನೆಯ ಕಡೆಗೆ ಸಾಧನೆಯ ಮೂಲಕ ಕೊಂಡೊಯ್ಯಬೇಕು. ಆ ದಿಶೆಯಲ್ಲಿ ಸಾಗುವವನ ಮನಸ್ಸು ನಿರ್ಮಲವಿರಬೇಕಾದುದು ಅಗತ್ಯ. ಒಳ್ಪು, ನನ್ನಿ ಇವುಗಳಿಂದ ಅಲಂಕೃತವಾಗಿರಬೇಕು ಅವನ ಬಾಳು. ಗುಡಿಯ ವಿಗ್ರಹವನ್ನು ಪೂಜಿಸುವುದನ್ನು ಬಿಟ್ಟು ದೇವಶಿಲ್ಪಿ ಕಟೆದ ವಿಶಾಲ ವಿಶ್ವವನ್ನೇ ಭವ್ಯ ಸುಂದರ ದೇಗುಲವೆಂದು ಭಾವಿಸಿಕೊಳ್ಳಲಿ. ಸೃಷ್ಟಿಯ ಸುಂದರ ಲೋಕವನ್ನು

ಪೂಜಿಸುವ ಪೂಜಾರಿ ತಾನೇ ಎಂದು ನಂಬಿ ಹೃದಯದಾರತಿಯನ್ನೆತ್ತಲಿ, ಬಹಳ ಭಕ್ತಿಯಿಂದೆತ್ತಲಿ. ಆಗ ಅವನಿಗೆ ಅಪೂರ್ವವಾಣಿಯೊಂದು ಕೇಳಿ ಬರುತ್ತದೆ. ಗುಡುಗು ಮಿಂಚುಗಳಲ್ಲಿ, ಗಾಳಿ ಬೆಳಕಿನಲ್ಲಿ ಈ ಮೊದಲು ಕಾಣಬಾರದ ಸೌಂದರ್ಯವನ್ನು ಕಾಣುತ್ತಾನೆ. ಸೌಂದರ್ಯದ ಸ್ಪರ್ಶನಕ್ಕೆ ಸಿಲುಕಿದ ಅವನ ಬಾಳು ಬೃಂದಾವನವಾಗುತ್ತದೆ. ಆಗೋ! ಅಲ್ಲಿ ಕೇಳುವ ಕೊಳಲ ಗಾನ........ ಸತ್ಯಂ ಶಿವಂ ಸುಂದರಂ ! ಹಾಡು, ಕುಣಿ, ಜಿಗಿ, ಚೀರು, ನಗು ಆನಂದವೇ ಆನಂದ ! ಓ, ಶಿವ ಕುಣಿವೆನ್ ಬಾರಯ್ಯ! ಓ, ನಾಟ್ಯಂಗಲಿಸುವ ನಟರಾಜ ಕುಣಿವೆನ್ ಕಲಿಸೆನಗೆ! ಬಾರಯ್ಯ, ಓ ಶಿವ ಬಾರಯ್ಯ !

ಪುಸ್ತಕಗಳು

ಹೊತ್ತಿಗೆಗಳಲ್ಲಿ ಜೀವನದ ವಿಮರ್ಶೆ ಅಡಕವಾಗಿರುತ್ತದೆ. ಬಾಳಿನಲ್ಲಿ ಕಂಡು ಬರುವ ಸುಖ - ದುಃಖ, ಮದ - ಮತ್ಸರ, ಆಸೆ ಆಮಿಷಗಳ ಹೊಂತು ಸಂತೆಯನ್ನು ಪುಸ್ತಕಗಳು ಕನ್ನಡಿ ಹಿಡಿದು ತೋರಿಸುತ್ತವೆ. ಮಾನವನ ಯಥಾವತ್ತಾದ ಇರುವಿಕೆಯನ್ನು ಗ್ರಂಥಕರ್ತನು ತನ್ನ ಬಿಂಬಗ್ರಹಣದ ಶಕ್ತಿಯಿಂದ ಚಿತ್ರಿಸುವುದು ಮಾತ್ರವಲ್ಲದೆ ಅವನ ಲೋಪದೋಷಗಳನ್ನು ಎತ್ತಿ ಹಿಡಿದು 'ಇದು ಈ ಸಂತಕ್ಕೇರಿಸುತ್ತದೆ' 'ಇದು ಈ ದಾರಿಗೆ ಒಯ್ಯುತ್ತದೆ' ಎಂಬ ಹಿತಮಿತ ನ್ನುಡಿ ವಚನವನ್ನರುಹುತ್ತಾನೆ. ಸಾಹಿತಿಗೆ ಬಾಳಿನ ಮೇಲೆ ಅವ್ಯಾಜವಾದ ಪ್ರೇಮ. ತನ್ನ ಸುತ್ತಣ ಬದುಕು ಬೃಂದಾವನವಾಗಿದ್ದರೆ ಪ್ರೈಮಣಿದು ಕೊಳಲನೂದುತ್ತಾನೆ. ಅದು ಇಂದ್ರನ ವಜ್ರಾಹತಿಗೆ ಸಿಲುಕಿ ಗೋಗರೆವ ಗೋವರ್ಧನಗಿರಿಯಾಗಿದ್ದರೆ ಕೈ ಬೆರಲಲ್ಲಿ ನವಿಲುಗರಿ ಹಿಡಿದು ಅಭಯಲಿಪಿತ ಬರೆಯುತ್ತಾನೆ. ಆಕಾಶದಿಂದ ತೂರಿ ಬರುವ ಮೋಡ ಮಿಂಚು ಗುಡುಗು ಮಳೆ ಆಲಿಕಲ್ಲು ಸೆಳೆತ ಇವುಗಳನ್ನು ಸಾಹಿತಿಯು ತನ್ನ ಲೇಖನಿಯ ಗೆರೆಯ ದಾರಿಯಲ್ಲಿ ಬಂಧಿಸುವನು. ಕವಿ ಅಜನ ಅಪರಾವತಾರ. ಅವನ ಕೃತಿಗಳು 'ಮೂರ್ತಿಮತೀವ ಸತ್ಕ್ರಿಯಾ'.

ಋಷಿಯಾದವನು ಮಾತ್ರವೇ ಹೊತ್ತಿಗೆ ಬರೆಯಬಲ್ಲನು. ಆದರೆ ಹೊತ್ತಿಗೆ ಬರೆದವರೆಲ್ಲರೂ ಋಷಿಗಳಾಗಿರಲಾರರು. ಗ್ರಂಥಗಳಲ್ಲಿ ಲೋಪದೋಷಗಳಿದ್ದರೆ ಬರೆದವನಲ್ಲಿಯೂ ಅಂತವೇ ಕೊರತೆಗಳು ಖಂಡಿತವಾಗಿ ಇರಲೇಬೇಕು. ಆದುದರಿಂದ ಸತ್ಕೃತಿಯ ಸಂಗ ಬಯಸುವವನು ಋಷಿಯನ್ನು ಹುಡುಕುತ್ತ ಹೋಗಬೇಕು. ಆತನು ಬಣಜಿಗರ ಕಳ್ಳಪೇಟೆಯಲ್ಲಿ ಸಿಗುವದಿಲ್ಲ. ಸ್ತುತಿ ಪಾಠಕರ ಮಹಡಿಯ ಮನೆಯ ಮೇಲೆ ವಾಸಿಸಿರುವದಿಲ್ಲ. ರಾಜ ಮಹಾರಾಜರ ಭವ್ಯಮಂಟಪದ ಭದ್ರಾಸನದಲ್ಲಿ ಮಂಡಿಸಿರುವದಿಲ್ಲ. ಅಂತಹವನನ್ನು ಬಹು ಪ್ರಯಾಸದಿಂದ ಅರಸುತ್ತ ಹೋಗಬೇಕಾಗುವದು. ಹಳ್ಳಿ ಪಟ್ಟಣಗಳಿಂದಾಚೆಗೆ,

ಗುಡ್ಡ ಬೆಟ್ಟಗಳಿಂದಾಚೆಗೆ, ಆಗೋ ಅಲ್ಲಿ ಕಾಣುವ ಗಿಡಮರಗಳ ಗುಂಪಿನಲ್ಲಿ ಗುಡಿಸಲೊಂದಿದೆ. ಅಲ್ಲಿ ಜೇನಿನ ಜೇಂಗೊಡ, ಕೋಗಿಲದ ಪಂಚಮದಿಂಚರ, ಖಗಕುಲದ ಮರ್ಮರ, ನವಿಲ ನರ್ತನವುಂಟು ಅಲ್ಲಿಯ ಎಳಗರಿಕೆಗೆ ಆರಿಕೆಯಿಲ್ಲ, ಬೆಳಕಿಗೆ ಕತ್ತಲೆಯಿಲ್ಲ. ಆದೆ ತಾಣದಲ್ಲಿ ಸಾವು ಕೇಡಿಲ್ಲದ ಹೊತ್ತಗೆಯ ಸೃಷ್ಟಿ ಆದದ್ದು. ಅಂತ ಸೃಷ್ಟಿಯ ಪಾಲಿಗಾಗಿ ನೀನು ಬೇಡಿಕೋ.

ನಿನ್ನ ಬಾಳಿನ ಅಂತಿಮ ಗುರಿಯೇನು ? ನೀನು ಏತಕ್ಕೆ ಇಲ್ಲಿಗೆ ಬಂದೆ? ಮಾಡಬೇಕಾದ ಕರ್ತವ್ಯವೇನು? ಇವೇ ಮೊದಲಾದ ಪ್ರಶ್ನೆಗಳಿಗೆ ಪ್ರತಿಯೊಬ್ಬನು ಉತ್ತರ ಹೇಳಬೇಕಾಗುತ್ತದೆ. ಉತ್ತರಿಸದವನಿಗೆ ಉತ್ತರೋತ್ತರವಿಲ್ಲ. ಈ ಪರೀಕ್ಷೆಯಲ್ಲಿ ಉತ್ತೀರ್ಣನಾಗ ಬಯಸು ವವನು ಹೊತ್ತಗೆಗಳನ್ನು ಓದಿ ಉತ್ತರವನ್ನು ಕಂಡುಕೊಳ್ಳಲಿ. ಆದರೆ ಅಂತಹನು ಬೇಕನ್‌ನೆಂಬ ಹೆಸರಿನ ಶ್ರೇಷ್ಠ ಆಂಗ್ಲ ಪ್ರಬಂಧಕಾರನು ಹೇಳಿದ ಮಾತುಗಳನ್ನು ನೆನಪಿನಲ್ಲಿಡಬೇಕು. 'ಕೆಲವು ಹೊತ್ತಗೆಗಳನ್ನು ಬರಿರುಚಿ ನೋಡಬೇಕು. ಕೆಲವುಗಳನ್ನು ಮನದಟ್ಟು ಮಾಡಿಕೊಳ್ಳ ಬೇಕು. ಇನ್ನೂ ಕ್ವಚಿತ್ತಾಗಿರುವ ತುಸು ಪುಸ್ತಕಗಳನ್ನು ಮೆಲುಕು ಹಾಕುತ್ತ ಜೀರ್ಣಿಸಿಕೊಳ್ಳಬೇಕು'. ಈ ಸಲಹೆಯನ್ನು ಮನ್ನಿಸಿದವನಿಗೆ ಸಮಸ್ಯೆಯ ಪರಿಹಾರ ದೊರೆಯುತ್ತದೆ.

ಸೃಷ್ಟಿಯ ಸಂದೇಶವನ್ನು ಪುಸ್ತಕಗಳು ಮೌನದಿಂದ ಸಾರುತ್ತವೆ. ಹಕ್ಕಿ ಹಾಡುತ್ತಿವೆ. ನಿರ್ಝರಿಣಿ ಮೊರೆಯುತ್ತಿವೆ. ಸೂರ ಚಂದ್ರಮರು ಮೂಡಿ ಮುಳುಗುತ್ತಿದ್ದಾರೆ. ನೆಲಬಾನ್ಗಳಲ್ಲಿ ಕತ್ತಲು ಬೆಳಕಿನ ಸಂಚಾರ ಒಂದೇ ಸವನೆ ನಡದೇ ಇದೆ. ಆದರೆ ಎಲ್ಲರ ಕಿವಿಗೆ ಕೇಳಬಾರದ ಧ್ವನಿ ಕವಿಗೆ ಕೇಳಬರುತ್ತದೆ. ರವಿಕಾಣದ ನೋಟ ಕವಿಯ ಕಣ್ಣಿಗೆ ಗೋಚರವಾಗುತ್ತದೆ. ಇಂತು ಪುಸ್ತಕಗಳು ಪ್ರಕೃತಿಯ ಅನುಕರಣವಾದರೂ ಅವು ನವನವೋನ್ಮೇಷಶಾಲಿನಿಯಾದುವು. ಮುಳುಗಿ ಮೂಡುವ ಸೂರ್ಯನ ಸಹವಾಸ ದಿನದಿನವೂ ಹೊಸತಾದುದೇ.

ಹೊಸ ಹೊತ್ತಿಗೆಯೊಂದನ್ನು ನೀನು ಓದಿದ ದಿನ ಹೊಸ ಹಿತಚಿಂತಕನೊಬ್ಬನು ನಿನ್ನ ಮನೆಗೆ ಬಂದನೆಂದು ತಿಳಿದುಕೊ. ಈ

ಹಿತಚಿಂತಕನು ನಿನ್ನ ಆಸ್ತಿಯ ಪಾಲು ಬೇಡಬಂದವನಲ್ಲ. ಇವನು ನಿನ್ನ ಸುಖದ ಬಂದಂತವನ್ನಾದರೂ ನೆಚ್ಚಿ ಬಂದವನಲ್ಲ. ಇಂದಿಲ್ಲ ನಾಳೆಯಾದರೂ ನಿನಗೆ ಬಂದೊದಗುವ ದುಃಖದಲ್ಲಿ ಸಮಭಾಗಿಯಾಗ ಬಯಸಿ ಬಂದಾತನಿವನು. ಕಾರಣ ನಿನ್ನ ತಾಯಿಗೆ ಚಿಂತೆ ಮಾಡದಿರಲು ತಿಳಿಸು.

ಹೊತ್ತಗೆಗಳಿಂದ ಸಾಂತ್ವನ ಕಂಡುಕೊಳ್ಳುವುದು ಸುಲಭ ಸಾಧ್ಯವಲ್ಲ. ಶಾಸ್ತ್ರಪ್ರತಿಯ ಪರಿಚಯ, ವಿದ್ವತ್ ಸೇವಾನುರಾಗ, ಪ್ರಕೃತ್ಯೋಪಾಸನೆಯ ಪ್ರಣ್ಯಾಥ ಫಲವಾಗಿ ಸತ್ಕೃತಿಯ ಆರಾಧನೆಯಿಂದ ಬಾಳಿನಲ್ಲಿ ಅನಿರ್ವಚನೀಯವಾದ ಆಹ್ಲಾದ ದೊರೆಯುವುದು. ಅದಕ್ಕಾಗಿ ನೀನು ಶ್ರಮಿಸಬೇಕು. ಹಿತಚಿಂತನೆಯ ಸೋಗು ಹಾಕಿಕೊಂಡು ಬಂದ ಗ್ರಂಥಕರ್ತರ ಮಾತಿಗೆ ಮರುಳಾಗದೆ ಜನಮನದ ಉದ್ಧಾರವನ್ನೇ ನಂಬಿ ಬರೆದ ಧರ್ಮನಿರತನಾದ ಕವಿಯನ್ನು ಕಂಡು ಕೊಳ್ಳುವುದು ನಿನ್ನನ್ನೇ ಕೂಡಿಕೊಂಡಿದೆ.

ಪುಸ್ತಕ ಪ್ರಪಂಚದಲ್ಲೂ ದಲ್ಲಾಳಿಗಳ ಕೈವಾಡವಿರುತ್ತದೆ. ಸೂಳೆಗೇರಿಯೊಂದರಲ್ಲೇ ಅವರು ಇರುವುದಿಲ್ಲ. ಇಲ್ಲಿಯೂ ಕೂಡ ಅವರ ವ್ಯವಹಾರ ಸಾಗುತ್ತದೆ. ದಲಾಲಿಯ ಹಣ ಹೆಚ್ಚಿಗೆ ಬಂದರೆ ತೀರಿತು. ಗಿರಾಕಿಯನ್ನು ತಮ್ಮ ಕಿಸೆಗೆ ಹಾಕಿಕೊಳ್ಳುವುದಕ್ಕೆ ಸಿದ್ಧರಾಗಿರುತ್ತಾರೆ. ಅಂತ ಮೋಸದಿಂದ ಪಾರಾಗುವದನ್ನು ಬುದ್ಧಿಶಕ್ತಿಯಿಂದ ಕಲಿಯಬೇಕು. ಹೊತ್ತಗೆಯನ್ನು ಬೆಲೆಯಿಂದ ನಿರ್ಧರಿಸಬಾರದು. ಹಸುವನ್ನು ಕರೆದು ನೋಡಬೇಕು. ಹೊತ್ತಗೆಯನ್ನು ಓದಿ ನೋಡಬೇಕು. ಒಂದು ಹಾಲನ್ನು ಕರೆದರೆ, ಇನ್ನೊಂದು ರಕ್ತವನ್ನೇ ಸೂಸುವುದು. ಆ ರಕ್ತ ಸಂದೇಶದಲ್ಲಿ ನೀನು ಜೀವನದಿಂದಾಚೆಗಿರುವ ಜೀವನದ ಅಂತಿಮ ಗುರಿಯನ್ನೇ ಕಂಡುಕೊಳ್ಳುವಿ.

ಪುಸ್ತಕಗಳನ್ನು ಮನೆಯಲ್ಲಿ ಸಿಂಗಾರಕ್ಕೆಂದು ಇರಿಸುವವರು ಕೆಲವರು. ಜ್ಞಾನಾಡಂಭರವನ್ನು ಕೊಚ್ಚಿಕೊಳ್ಳುವುದಕ್ಕೋಸುಗ ಕೆಲರು ಇರಿಸುವರು. ಉಭಯಪಕ್ಷದವರಿಗೆ ಹೊತ್ತಗೆಗಳ ಉಪಯೋಗ ಗೊಡ್ಡು ಎಮ್ಮೆಯ ಕೊರಳೊಳಗಿನ ಗಂಟೆಯ ಹಾಗೆ ಇರುವದು.

ಆತ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲೆಂದು ಹೊತ್ತಗೆಗಳನ್ನು ಮನೆಯಲ್ಲಿರಿಸುವವರದಿನ್ನೊಂದು ಪಕ್ಷ. ಇಂತಹರಿಗೆ ಪುಸ್ತಕವೆ ಭಂಡವಾಲು. ತಾವು ಸಾಯುವಾಗ ಮಕ್ಕಳಿಗೆ ಬಿಟ್ಟು ಹೋಗುವ ಆಸ್ತಿಯೆಂದರೆ ಹೊತ್ತಗೆಗಳ ಭಾಂಡಾರವೇ ಸರಿ. ಕಲೋಪಾಸಕರ ಜೀವನದ ರಹಸ್ಯವನ್ನು ಅವರ ಸಾವಿನಲ್ಲಿ ನೋಡಬೇಕು ಎನ್ನುವ ಮಾತಿಗೆ ಇವರೆ ದೃಷ್ಟಾಂತ.

ಓದುಗನು ದೇಶದ ನಾಗರಿಕತೆಯ ದೇಗುಲವನ್ನು ಕಟ್ಟುವ ಉಪ್ಪಾರ. ಲೇಖಕನು ದೇಗುಲದೊಳಗಿನ ವಿಗ್ರಹವನ್ನು ಕಡೆಯುವ ಶಿಲ್ಪಿ. ಶಿಲ್ಪಿಯಲ್ಲಿ ಸಿದ್ಧಹಸ್ತವಿದ್ದರೆ ಶಿವನ ಸಾಕ್ಷಾತ್ಕಾರವಾಗುತ್ತದೆ ಓದುಗನಲ್ಲಿ ಭಕ್ತಿಯಿದ್ದರೆ ನೆಲವೆ ನಾಕವಾಗುತ್ತದೆ. ರಾಷ್ಟ್ರದ ಸಂಸ್ಕೃತಿಯ ಇತಿಹಾಸವನ್ನು ಅಭ್ಯಸಿಸ ಬೇಕೆನ್ನುವವರು ಅದರ ಓದುಗರನ್ನು, ಲೇಖಕರನ್ನು, ಹೊತ್ತಗೆಯ ಸೃಷ್ಟಿಯನ್ನು ಪರೀಕ್ಷಿಸಿ ನೋಡಲಿ.

ಅನುಭವ

ಕಾರ್ಯಲತೆಯು ಬಿಟ್ಟ ಹೂವೇ ಅನುಭವ. ನಿಸರ್ಗ ನಿಯಮಕ್ಕೆ ಹೊಂದಿಕೊಂಡು ವಿಕಸಿತವಾದ ಪುಷ್ಪಕ್ಕೂ, ಕೃತ್ರಿಮ ರಚನೆಗೀಡಾದ ಪುಷ್ಪಕ್ಕೂ ಬಹ್ವಂತರವುಂಟು. ಮೊದಲನೆಯದು ತಾಯ ಆರೈಕೆಯಲ್ಲಿ ಬೆಳೆದ ಕೂಸು. ಎರಡನೆಯದು ತಾಯ್ತನದಿಂದ ದೂರವಾಗಿ ಹೆಸರಿಡಿಸಿಕೊಳ್ಳದೆ ಬೆಳೆದ ಅನಾಥ ಶಿಶು. ಅನುಭವದನುವಿನಲ್ಲಿ ಬೆಳೆದವರು ಅನುಪಮ ಸುಖಿಗಳು.

ಜೀವನದ ಗತಿ ಯಾವಾಗಲೂ ವಕ್ರ. ಅಲ್ಲಿ ಹಳುಕಲು ಕೊರಕಲು ತುಂಬ ಉಂಟು. ಮುಳ್ಳು ಮೊರಡಿಗಳಿಗೆ ಅಲ್ಲಿ ಕೊರತೆಯೇ ಇಲ್ಲ. ದಾರಿಕಾರನು ಸೂಕ್ಷ್ಮವಾಗಿ ತನ್ನ ದಾರಿಯನ್ನು ತಾನೇ ಅರಿತುಕೊಂಡು ಸಾಗಬೇಕಾಗುವದು. ದಾರಿ ತೋರುವವರು ಬರಿ ಕೈ ಬೆರಳು ಚಾಚಿ ದಾರಿಯನ್ನು ತೋರ ಬಲ್ಲರೆ ವಿನಹ ಜತೆಯಲ್ಲಿ ಬಂದು ಮಾರ್ಗದರ್ಶನ ಮಾಡಲಾರರು. ಅಂತ ಸೂಚನೆ ಯಾವಾಗಲೂ ವಿನಾಶಕಾರಿ. ದಾರಿಗೆ ಕವಲುಂಟು, ಅಲ್ಲಲ್ಲಿ ಹಾದಿ ಬಡೆಯುವವರುಂಟು, ಅಪಶಕುನದ ಪಕ್ಕಿಗಳುಂಟು, ಕ್ರೂರ ಮೃಗಗಳುಂಟು. ದಾರಿಗೆ ಬರಿ ದಾರಿಯೇ ಹಬ್ಬಿದ ಹೊತ್ತಿನಲ್ಲಿ ಪಥಿಕನಿಗೆ ಎಂತದೊ ಅನುಭವವುಂಟಾಗುತ್ತದೆ. ಅದೇ ನಿಜವಾದ ಬುತ್ತಿಗಂಟು. ಅದನ್ನು ನಂಬಿಯೇ ಪಯಣಿಗನು ಬದುಕಬೇಕಾದದ್ದು. ಸ್ವಪರಿಶ್ರಮದಿಂದ ಸಂಪಾದಿಸಿದ ಅನುಭವ ಸಂಪತ್ತಿಗೆ ಯಾರಿಂದಲೂ ಊನವಿಲ್ಲ.

ಉಪದೇಶ ಹೊಂಯ್ ನೀರು, ಅನುಭವ ಮಳೆ ನೀರು. ಹೊಂಯ್ ನೀರಿನಿಂದ ಪೋಷಿತವಾದ ಸಸಿ ಚಳಿ ಮಳೆಯನ್ನು, ಬಿಸಿಲು ಬೇಗೆಯ ಕಷ್ಟ ನಿಷ್ಠುರತೆಗಳನ್ನು ಸಹಿಸಲಾರದು. ಮೂರ್ಖನಿಗೆ ಉಪದೇಶ ಎಷ್ಟು ಹೇಳಿದರೇನು? 'ಕುದುರೆಗೆ ನೀರು ತೋರಿಸಿಕೊಂಡು ಬಾ' ಎಂದು ಹೇಳಿದರೆ ಅವನು ಅದಕ್ಕೆ ನೀರು ತೋರಿಸಿಕೊಂಡು ಬರಬಲ್ಲನೆ ಹೊರತು ನೀರು ಕುಡಿಸಿಕೊಂಡು ಬರಲರಿಯನು.

ಅನುಭವದ ದಾರಿಯಲ್ಲಿದ್ದವನಿಗೆ 'ದೇವರಿಲ್ಲದಲ್ಲಿಗೆ ಹೋಗಿ ಈ ಹಣ್ಣು ತಿಂದು ಬಾ' ಎಂದು ಹೇಳಿದರೆ ಅವನು ಉಪವಾಸವಿರಬಲ್ಲನಲ್ಲದೆ ಹಣ್ಣು ಸೇವಿಸಲಾರನು. ಉಪದೇಶದ ಧಾರಾಕಾರದಿಂದ ಮೂಡಿ ನಿಂತ ಬಳ್ಳಿಗೆ ತಾಯಿಬೇರು ಇರುವುದೇ ಇಲ್ಲ. ಬಿಸಿ ಮಳೆ ಹೊಡೆಯಿತೆಂದರೆ ಸುಟ್ಟುರಿ ಗಾಳಿ ಊದಿತೆಂದರೆ ಅದು ಹೇಳ ಹೆಸರಿಲ್ಲದಂತೆ ಕೊಚ್ಚಿ ಕೊಂಡು ಹೋಗುವುದು. ಅನುಭವದ ಜಡಿಮಳೆಯಲ್ಲಿ ಬೇರು ಬಿಟ್ಟ ಜೀವನ ವೃಕ್ಷಕ್ಕೆ ಯಾರ ಕೊಡಲಿಯು ಸಹ ಕಚ್ಚು ಮೂಡಿಸಲಾರದು.

ಅನುಭವವು ಯಶಸ್ಸಿನ ಶಿಖರಕ್ಕೆ ಕರೆದೊಯ್ಯುವ ಸೋಪಾನ. ಗಿರಿಶಿಖರವನ್ನು ಏರುವವನಿಗೆ ಆಳಲು ಸಿಕ್ಕಾಸಗಳು ಬರುತ್ತವೆ. ಅವು ಬಂದಷ್ಟೂ ಒಳ್ಳೆಯದೆ. ಅವನು ಪಡುವ ಶ್ರಮಕ್ಕೆ ಜನರು ನಕ್ಕರೂ ನಗಬಹುದು, ಆಶ್ಚರ್ಯವೇನಲ್ಲ. ಅಜ್ಞಾನಿಗಳೂ ಮೂರ್ಖರೂ ಅನುಭವದ ಕುಲುಮೆಯಲ್ಲಿ ನಿಂತು ಕಾರ್ಯದ ಸುತ್ತಿಗೆಯನ್ನೆತ್ತಿ ಸಲಕರಣೆಗಳನ್ನು ಸಿದ್ಧಪಡಿಸುವುದಕ್ಕೆ ಹಿಂಜರಿಯುತ್ತಾರೆ. ಇಂದಿಲ್ಲ ನಾಳೆಯಾದರೂ ಅವರು ಹುಲಿಯ ಬಣ್ಣಕ್ಕೆ ಮನಸೆಳಸಿ ಮೈಸುಟ್ಟುಕೊಂಡ ನರಿಯ ದುರ್ದೆಸೆಯನ್ನು ಅನುಭವಿಸಿಯೇ ತೀರುತ್ತಾರೆ. ಜೋಕಾಲಿಯ ಜುರಿ ಒಮ್ಮೆಲೆ ಏರುವುದಿಲ್ಲ, ಜೀಕಬೇಕು. ಅನುಭವಿಸಬೇಕು, ಶ್ರಮ ಪಡಬೇಕು, ಆನಂತರ ಜೋಕಾಲಿಯ ಮೇಲಾಟದಲ್ಲಿ ಅವನಿಗೆ ಬಹುಮಾನ ದೊರೆಯುತ್ತದೆ. ಅಂತೆಯೆ ಜೀವನವೂ ಒಂದು ಮೇಲಾಟ. ಅಲ್ಲಿ ಹೆರವರ ತೋಳ ನೆರವಿನಿಂದ ಜೋಕಾಲಿಯನ್ನು ಏರಬಯಸುವವನಿಗೆ ತಾಣವೇ ಇಲ್ಲ.

ಸುತ್ತಣ ಜನರ ನಡತೆಯಿಂದ ಅನುಭವದ ಭಾಂಡಾಗಾರವನ್ನು ಹೆಚ್ಚಿಸಿಕೊಳ್ಳಬೇಕು. ಪ್ರಪಂಚವೇ ಒಂದು ವಿಶಾಲವಾದ ಕುಲುಮೆ. ಅಲ್ಲಿ ಬೆಂಕಿಯಲ್ಲಿ ಕೈ ಸುಟ್ಟುಕೊಂಡವರನ್ನು ನೋಡಿ ನಾವು ಜಾಗರೂಕರಾಗಿರಬೇಕು. ಅಲ್ಲಿ ನಯವಾಗಿ ಕೆಲಸಮಾಡಿ ನೈಪುಣ್ಯ ಹೊಂದಿದವರನ್ನು ಅನುಸರಿಸಿ ನಾವು ಕೃತ ಕೃತ್ಯತೆಯನ್ನು ಹೊಂದಬೇಕು. ಆಶಾವಾದಿಯು ಯಾವಾಗಲೂ ಅನುಭವದ ಸೆರಗಿನ ಚುಂಗು ಹಿಡಿದು ನಡೆದಿರುತ್ತಾನೆ. ನಿರಾಶಾವಾದಿ ಸೋತು ನಿಂತಲ್ಲಿ ಧ್ಯೇಯವಾದಿಯು

ಕಾರ್ಯಕ್ರಮಕ್ಕೆ ಮೊದಲಾಗುತ್ತದೆ. ಅವರಿಬ್ಬರೂ ಸೂಜಿಯ ಎರಡು ಕಡೆಯ ಮೊನೆಗಳು. ಒಬ್ಬರೊಬ್ಬರು ಎಂದಿಗೂ ಕೂಡುವುದಿಲ್ಲ. ಆಶಾವಾದಿ ಅನುಭವದ ಸೇತುವೆಯ ಮೇಲೆ ನಡೆದಿರುವ ಸೇನಾನಿ. ನಿರಾಶಾವಾದಿ ಅವರ್ತತೆಯ ಅಂತರಿಕ್ಷದಲ್ಲಿ ಗರಿಗೆದರಿ ಹೊರಟ ಹಕ್ಕಿ. ಇಬ್ಬರನ್ನೂ ದಾರಿಗೆ ದಾಯಿಯೆ ಅಣಕಿಸುತ್ತದೆ. ಅಂತ ಕಡೆಯಲ್ಲಿ ಅನುಭವಿಕನಾದವನು ಸೇತು ಬಿಲ್ಲುವುದಿಲ್ಲ; ಸವಿಯಾದ ಕಂಕಣವನ್ನು ಪ್ರಸಾ ಕಟ್ಟಿ ಬಿಂತು ಕಾರ್ಯೋನ್ಮುಖನಾಗುತ್ತಾನೆ.

ಅನುಭವರಹಿತನಾದವನಿಗೆ ಈ ಜಗದ ಮೇಲೆ ನಿಲ್ಲಲು ಒಂದಂಗುಲದಷ್ಟು ಸ್ಥಳವಿಲ್ಲ. ಅವನು ನಿಂತಲ್ಲೇ ಪೊಳ್ಳು ಭೂಮಿ. ಅವನ ಜೀವನವು ತುಂಬ ದುಃಖಕ್ಕೀಡಾಗುವುದು. ಸಂದೇಹ ಸಂಶಯಗಳು ಅವನಲ್ಲಿ ಮನೆಮಾಡಿಕೊಂಡು ಇದ್ದಷ್ಟು ಆಯುಸ್ಸನ್ನು ನುಂಗಿ ನೊಣೆಯುವವು. ಅನುಭವವಿಲ್ಲದ ಮನುಷ್ಯ ತಂತಿಯಿಲ್ಲದ ತಂಬೂರಿಯಂತೆ. ಅವನ ಮುಂದೆ ಉಪದೇಶಿಸುವುದೂ ಕೋಣನ ಮುಂದೆ ಕಿನ್ನರಿ ಬಾರಿಸುವುದೂ ಸಮ.

ಸೇನಾಪತಿ, ಸಾಹಿತಿ, ಸಂನ್ಯಾಸಿ ಇವರಿಗೆಲ್ಲ ಅನುಭವವೇ ಊರುಗೋಲು. ಅವರಿಗೆ ಒಮ್ಮೆ ಬಂದೊದಗಿದ ಸೋಲು ಕಾಲಾಂತರದಲ್ಲಿ ಪೆನ್ನು ಪಡೆಯುವುದಾದ ಯಶಸ್ಸನ್ನೊದಗಿಸಿಕೊಟ್ಟು ತನ್ನ ಪಾಲಿನ ಕರ್ತವ್ಯವನ್ನು ವಿಶ್ವಾಸದಿಂದ ಪೂರೈಸುವದು. ಅವರು ಬಾಳಿನ ಪರ್ಯಂತ ನಡೆಸಿದ ಅನುಭವದ ಪ್ರಯೋಗಶಾಲೆಯ ರೀತಿ ನೀತಿಗಳನ್ನು ಕಂಡು ಲೋಕ ಅಚ್ಚರಿ ಪಡುವುದು. ಅಲ್ಲಿ ಮಾನಾಪಮಾನಗಳಿಗೆ ಸೋಲು ಗೆಲುವುಗಳಿಗೆ ಇಂಬು ಇಲ್ಲವೇ ಇಲ್ಲ. ಅವರು ಸಮಸುಖದುಃಖಿಗಳು. ಅವರು ತಮ್ಮ ಅನುಭವ ಕಡಿವಾಣದ ಮೂಲಕ ಜೀವನದ ಅಂತಿಮ ಧ್ಯೇಯದತ್ತ ಧೈರ್ಯಶಾಲಿಗಳಾಗಿ ನಡೆದು ಪರಮರಾಗವನ್ನು ಪಡೆದು ನಿತ್ಯತೃಪ್ತಿಗಳಾಗುತ್ತಾರೆ.

ಅನುಭವದ ಗರಗಸವು ಬಹಳ ಹರಿತವಾದುದು. ಅದು ಹೋಗುತ್ತ ಕೊರೆಯುತ್ತದೆ, ಬರುತ್ತ ಕೊರೆಯುತ್ತದೆ. ಅನುಭವಿಗಳ ಮೈಯೆಲ್ಲ ರಕ್ತಮಯ. ಒಮ್ಮೆ ಅದರ ಬಾಯಿಗೆ ಬಂದು ಸಿಲುಕಿದರೆ ಮೊದ

ನೋಡಲು ಸಂಕಟವಾಗುತ್ತದೆ. ಆ ನಂತರ ದುಃಖವಿಲ್ಲ. ಜೀವನವೆ ಬೆಳ್ಳಂ ಬಟ್ಟೆ.

ಬಣಜಿಗನು ತಕ್ಕಡಿಯಲ್ಲಿ ಅನುಭವವನ್ನಿಟ್ಟು ತೂಗುತ್ತಾನೆ. ಸೇನಾಪತಿಯು ಅನುಭವದ ಪರಡಿಯಲ್ಲಿ ಸೋಲು ಗೆಲವುಗಳನ್ನಿಟ್ಟು ರಾಷ್ಟ್ರದ ಭವಿಷತ್ತನ್ನು ನಿರ್ಧರಿಸುತ್ತಾನೆ. ಸಾಹಿತಿ ಸನ್ಯಾಸಿಗಳಿಬ್ಬರೂ ತಮ್ಮನ್ನೇ ಅನುಭವದ ಒರೆಗಲ್ಲಿಗೆ ಹಚ್ಚಿ ಉಜ್ಜಿ ನೋಡಿ ಸತ್ವಶಾಲಿಗಳಾಗಿ ಬಾಳುತ್ತಾರೆ. ಇಷ್ಟರ ಮೇಲಿಂದ ನಿನಗೂ ಅನುಭವಕ್ಕೂ ಇರುವ ಸಂಬಂಧವನ್ನು ನೀನೆ ತಿಳಿದುಕೋ.

ಮಾತು

ಮಾತಿನ ಪ್ರಪಂಚ ಜಲಧಿಯಷ್ಟು ಅಪಾರ, ಅನಂತ. ಬುದ್ಧಿಯ ಲಂಗರು ಹಾಕಿದರೆ ಅದರ ನೆಲೆ ತಿಳಿಯದು. ವಿಜ್ಞಾನದ ರಾಟಾಳ ಹಚ್ಚಿ ತಿರುಗಿಸಿದರೆ ಅದರ ತಳ ಕಂಡು ಬಾರದು. ತಾಂತ್ರಿಕ, ಯಾಂತ್ರಿಕ ಮಾಂತ್ರಿಕ ಈ ಮುವ್ವರೂ ಮಾತಿನ ಅಗಾಧ ಸಾಮರ್ಥ್ಯದ ಮುಂದೆ ಬೆಪ್ಪು ತಕ್ಕಡಿಗಳು. ಮಾತನ್ನು ಗೆಲಿದೆನೆಂದು ಹೇಳುವವನು ಯಶಸ್ವಿ ಹಿನ್ನಡೆಯ ಮಂತ್ರ ಜಪಿಸುವ ಶಿಪಾಯಿಯೇ ಹೊರತು ಇನ್ನೇನೂ ಅಲ್ಲ. ಮಾತಿಗೆ ಸೋಲು ಗೆಲವುಗಳಿಲ್ಲ. ಅಜ್ಞಾನದ ಗರ ಹಿಡಿದವನ ಕುರುಡು ಕಣ್ಣಿಗೆ ಮಾತ್ರ ಮಾತು ಜೇಡನ ಬಲೆಯ ಹಾಗೆ ಕಾಣುವುದು. ಅಂತಹನು ಮಾತಿನ ಜಾಲದಲ್ಲಿಯೇ ಸಿಲುಕಿ ಸಾಯುವನು.

ಮಾತು ಶಿವನ ಸೃಷ್ಟಿಯಲ್ಲಿಯ ಅದ್ಭುತ ಕೃತಿ. ಮಾತಿಗೆ ಬಾಯಿ ಕೊಟ್ಟವರಾರು? ನವಿಲುಗರಿಗೆ ಕಣ್ಣನಿತ್ತವರಾರು? ಮುಗಿಲಿಗೆ ರಂಗು ರಂಗಿನ ಬಣ್ಣ ಬಡಿದವರಾರು? ಈ ಪ್ರಶ್ನೆಗೆ ಪರಿಹಾರ ಕೇಳಿದಂದು, ತತ್ವದರ್ಶಿ, ಶಾಸ್ತ್ರಕಾರ, ಕವಿ ಮೌನ ತಳೆದು ತಲೆತಗ್ಗಿಸಿ ಬೆರಳು ಕಚ್ಚಿನಿಂತ ಹೊತ್ತಿನಲ್ಲಿ ಹಳ್ಳದ ದಡದ ಮೇಲೆ ಅರುಣೋದಯದ ಸಮಯದಲ್ಲಿ ಮಂದ ಮಂದವಾಗಿ ಪಕಳೆಗಳನ್ನು ಬಿಚ್ಚುವ ಕುಸುಮವೊಂದು ಮಾತ್ರ ಉತ್ತರ ಹೇಳಬಲ್ಲದು: ಮಾತು ಶಿವನ ಸಾಕಾರ ರೂಪ.

ಮಾತು ಮನುಷ್ಯನ ಸಂಸ್ಕೃತಿಯನ್ನು ಬಿಂಬಿಸುವ ಕೈಗನ್ನಡಿ. ಸುಸಂಸ್ಕೃತನೂ ಬುದ್ಧಿವಂತನೂ ಆದವನು ಮಾತಿಗೆ ಕೊಡುವಷ್ಟು ಬೆಲೆಯನ್ನು ಇನ್ನಾವುದಕ್ಕೂ ಕೊಡುವುದಿಲ್ಲ. ಅವನು ತನ್ನ ಸುಖದುಃಖಗಳನ್ನು ಎಂದಿಗೂ ಮಾತಿನ ಮೂಲಕ ಹೊರಹಾಕದೆ ಅವು ಹರಿದು ಹೋಗುವುದಕ್ಕೆ ಮೌನದ ಮುಖಾಂತರ ದಾರಿ ಮಾಡಿಕೊಡುತ್ತಾನೆ. ಕವಿಯ ಶೋಕ ಶ್ಲೋಕದಲ್ಲಿ, ಋಷಿಯ ಭಾವ ಗುಹೆಯಲ್ಲಿ, ಹಕ್ಕಿಯ ರಾಗ ಏಕಾಂತದಲ್ಲಿ ಹೊರಹೊಮ್ಮುವುದು.

ಕಾಗೆಗಳು ಇದ್ದಲ್ಲಿ ಕೋಗಿಲೆ ಹಾಡುವುದೇ ಇಲ್ಲ. ನಿಂದಕರು ನೆಲಸಿದಲ್ಲಿ ಕವಿ ಅಂತರ್ಧಾನನಾಗಿರುತ್ತಾನೆ. ಲೋಕದ ಕೊಂಕು ನಡತೆ ವ್ಯವಹರಿಸುವಲ್ಲಿ ಋಷಿ ದೂರವಾಗಿರುತ್ತಾನೆ. ಗೆಲವಿನ ಹಣ ತೊಟ್ಟು ವಾದಕ್ಕೆ ನಿಂತ ವಕೀಲನ ಇದಿರು ಮಾತು ಒಲ್ಲಿಜಾಣ ಬಂದು ಮುಂದು ನೋಡದೆ ತನ್ನ ಸೋಲನ್ನು ಒಪ್ಪಿಕೊಳ್ಳುವನು. ಅವನಿಗೆ ಕೋರ್ಟು ಕಛೇರಿಗಳ ಹಂಗು ಇಲ್ಲ, ವಕೀಲ ನ್ಯಾಯಾಧೀಶರ ಮುರವತ್ತಿಲ್ಲ. ಅವನ ಸಮಸ್ಯೆಗೆ ಅಂತರಂಗವೆ ಸಾಕ್ಷಿ. ಮೌನವೆ ನ್ಯಾಯಾಧೀಶ. ಕೊನೆಗೊಮ್ಮೆ ತನ್ನ ಅಭಿಪ್ರಾಯ ಸೂಚಿಸಿದನೆಂದರೆ ಎಂತಹನೂ ತಲೆ ತಗ್ಗಿಸಿ ಸಮ್ಮತಿ ಕೊಡಬೇಕಾಗುವುದು.

ಮೆಣಸಿನಕಾಯಿ ಮಾರುವ ವ್ಯಾಪಾರಿ, ಬಾಗವಾನ ರಾಜಕಾರಣಿಯಷ್ಟು ಮತಿಹೀನರು ಇನ್ಯಾರೂ ಇಲ್ಲ. ಅವರು ಯಾವಾಗಲೂ ಮಾತಿನ ಮಳೆ ಕರೆದು ಹಣ ಗಳಿಸುತ್ತಾರೆ. ಮುಂಜಾವಿನಿಂದ ಸಂಜೆಯವರೆಗೆ ಮಾತಿನ ದಲಾಲಿ ಹಚ್ಚಿ ಸಂತೆಯಲ್ಲಿ ಒಂದೇ ಸಮನೆ ಕಿರಿಚುತ್ತಾರೆ. ಅವರ ಹಣದ ಸಂದೂಕವೊಂದು ತುಂಬಿದರೆ ಸಾಕು, ಯಾರ ತೆಗಳಿಕೆ ತಿರಸ್ಕಾರಗಳೂ ಅವರನ್ನು ಮುಟ್ಟವು. ಮಾತಿನ ಅರ್ಥವೆ ಅವರಿಗಾಗುವುದಿಲ್ಲ. ಮೆಣಸಿನ ಕಾಯಿಯ ವ್ಯವಹಾರಿಗೆ ಮಾತಿನ ಬೆಲೆಯು ದಸರೆಯ ಮುನ್ನಾದಿನದ ಜಮಾಖರ್ಚಿನಲ್ಲಿಯೂ, ಬಾಗವಾನನಿಗೆ ಸಂತೆ ಮುಗಿಯುವ ಕಾಲದಲ್ಲಿಯೂ, ರಾಜಕಾರಣಿಗೆ ಚುನಾವಣೆಯ ತೀರ್ಪಿನ ಕಾಲದಲ್ಲಿಯೂ ಗುರುತಾಗುವದು. ಕ್ಷೌರಿಕರು ಹರಿತವಾದ ಅಲಗಿನಿಂದ ಕಾರ್ಯ ಮುಗಿಸಿ ದಿನದ ದುಡಿಮೆಯನ್ನು ಹೆಚ್ಚಿಸಿಕೊಂಡು ಹಿಗ್ಗುವಂತೆ ಇವರೂ ಕೂಡ ತೀಕ್ಷ್ಣವಾದ ಮಾತನ್ನು ತಮ್ಮ ಕಾರ್ಯಕ್ಕಾಗಿ ಬಳಸಿಕೊಂಡು ಸುಖಿಸುವರು. ದುರ್ಮತಿಗೆ ಮಾತು ಕ್ಷೌರಿಕನ ಕತ್ತಿಯೇ ಸರಿ.

ಬಾಳಿನಲ್ಲಿ ತೀವ್ರ ದುಃಖವಾದಾಗ, ಮಿಗಿಲಾದ ಸಂಭ್ರಮ ಉಂಟಾದಾಗ ಅದನ್ನು ತೀರ ಹತ್ತಿರದವರಿಗೆ ಹೇಳಬೇಕೆಂದೆನ್ನಿಸುತ್ತದೆ. ಅಂತ ಹೊತ್ತಿನಲ್ಲಿ ಮನಸ್ಸನ್ನಷ್ಟು ಬಿಗಿ ಹಿಡಿಯಬೇಕು. ಮಾತಿನ

ಸಂಯಮನದಿಂದ ಮನಸ್ಸು ವಿಕಾಸ ಹೊಂದುವದು, ಆತ್ಮದ ಹಂತ ಮೇಲಕ್ಕೇರುವದು. ಮಿತವಾಗಿ ಮಾತು ಬಳಸುವವನ ಚಾರಿತ್ರ್ಯ ನದಿಯ ನೀರಿನಂತೆ ಜುಳು ಜುಳು, ಅರಳಿದ ಮಲ್ಲಿಗೆಯಂತೆ ಪರಿಮಳ. ಮನಸ್ಸಿನ ಬಯಕೆಯನ್ನು ಹತ್ತಿಕ್ಕಿ ಹಿಡಿಯುವಲ್ಲಿ ತಾಳ್ಮೆಯ ಘನತೆಯುಂಟು. ಹೇಳಬೇಕೆನ್ನುವ ವಿಷಯವನ್ನು ಮಿತವಾಗಿಯೂ ಸಂಕ್ಷಿಪ್ತವಾಗಿಯೂ ಹೇಳುವವನ ಮಾತಿಗೆ ಯಾವಾಗಲೂ ಹಿರಿಮೆ ಉಂಟು.

ಮೊಗ್ಗು ಅರಳಿ ಬಂದಂತಿರಬೇಕು ಮಾತು. ಪಕಳೆಗಳು ಯಾವಾಗ ಬಿಚ್ಚಿದವೊ ಎನ್ನುವದು ಗೊತ್ತಾಗುವದೇ ಇಲ್ಲ. ಉದಯ ರವಿ ಮೇಲಕ್ಕೇರಿ ಬಂದಂತೆಯೆ, ತಂಗಾಳಿ ಸೂಸುತ್ತಿದ್ದಂತೆಯೆ ಬೇವಿನ ಮರಕ್ಕೆ ಸುತ್ತು ಹಾಕಿದ ಮಲ್ಲಿಗೆಯ ಬಳ್ಳಿ ಹೂ ಮುಡಿದು ನಿಂತಿರುತ್ತದೆ. ಮಾತು ಬಲ್ಲ ಜಾಣನ ಇರವೂ ಕೂಡ ಅಂತಿರುತ್ತದೆ. 'ಮಾತೇಕೆ ಕೃತಿಯಿರಲಿ; ಕೃತಿಯಲ್ಲಿ ಸೊಬಗಿರಲಿ' ಎನ್ನುವುದೆ ಅವನ ಹಿರಿಮೆಯ ಗುಟ್ಟು. ಮಾತುಕೊಟ್ಟು ಕೈ ಕಟ್ಟಿಸಿಕೊಳ್ಳುವ ಸ್ವಭಾವ ಎಂದಿಗೂ ಆತನಲ್ಲಿಲ್ಲ. ಅಜ್ಞಾನಿಯಾದರೊ ನೂರು ವರುಷದ ಕಾರ್ಯಕ್ರಮವನ್ನು ಮೊದಲೇ ಅತಿತೋರಿಸಿ ಅವಲಕ್ಷಣ ಹೇಳಿಸಿಕೊಳ್ಳುತ್ತಾನೆ. ಬಾಯಿಗೆ ಬಂದದ್ದನ್ನು ಬಯಲಿಗಿರಿಸಿ ಎದೆಯ ಮೇಲೆ ಕಲ್ಲು ಹಾಕಿಕೊಂಡು ಬಳಲುವನು. ಜನತೆಗೆ ಯಾವಾಗಲೂ ಮಾತಿನಲ್ಲಿ ವಿಶ್ವಾಸವಿಲ್ಲ. ಕೃತಿಯ ಕಡೆಗೇ ಎಲ್ಲರೂ ಕಣ್ಣಿಟ್ಟು ನೋಡುತ್ತಾರೆ. ಆದುದರಿಂದ ಮಾತನಾಡಿ ಮರುಗಬೇಡ. ಆಡದೆ ಕಾರ್ಯವೆಸಗಿ ಬಲ್ಲಿದನೆಂದೆನ್ನಿಸಿಕೊ.

ಬೊಮ್ಮನನು ಅರಿವಿದರೆ ಸುಮ್ಮನಿರಬೇಕಂತೆ! ಭಾವನೆಗಳ ಮಹಾಪೂರ ಬಂದಾಗ ಚಿಂತನೆಯ ಚಿರಂತತೆಗೆ ಶರಣುಹೊಗು ನೀನು. ಟೆನಿಸನ್ ಕವಿಯ 'ಮುದಿದ ಸನ್ಯಾಸಿ', ಆದಿಕವಿಯ 'ಆದಿಕಾವ್ಯ' ಈ ದಿಸೆಯಲ್ಲಿ ಸರ್ವೋತ್ತಮವಾದ ಉದಾಹರಣೆಗಳು. ಮಾತನಾಡುವುದರಲ್ಲಿಯೇ ನಿನಗೆ ಸುಖವಿದ್ದರೆ ದಯೆಯಿಟ್ಟು ನಿನ್ನೊಡನೆಯೆ ನೀನು ಮಾತನಾಡು. ಅದರಲ್ಲಿಯೇ ಸಕಲ ಸೌಭಾಗ್ಯ, ಸಚ್ಚಿದಾನಂದ ಸಂಪದವಿದೆ.

ಹಣವನ್ನು ನೀರಿನಂತೆ ಬಳಸುವವನಿಗೆ ಬಹಳವಾದರೆ ಕಡು ದಾರಿದ್ರ್ಯವುಂಟಾದೀತು. ಅಂತ ಬಡವನಿಗಾಗಿ ನಾವು ಎಷ್ಟೂ ಮರುಗಲಾರೆ. ಏಕೆಂದರೆ ದಾರಿದ್ರ್ಯದಿಂದ ಸುಖವೂ ಉಂಟು, ಪುಣ್ಯವೂ ಉಂಟು. ಮಾತನ್ನು ಮಾತ್ರ ಸಿಕ್ಕ ಸಿಕ್ಕ ಹಾಗೆ ಉಪಯೋಗಿಸುವವನನ್ನು ಕಂಡರೆ ನನಗೆ ಬಹಳ ದುಃಖವಾಗುತ್ತದೆ. ಓ, ಎಂಥ ಹಾನಿ! ಮಾತಿನ ಜಲಪಾತ ಉಪಯೋಗವಾಗದೆ ಹೋಗುವದಲ್ಲ!

ಆತ್ಮಶ್ರೀಯನ್ನು ಹೆಚ್ಚಿಸಬೇಕೆಂಬ ಹಂಬಲವುಳ್ಳವನು ಹವಣರಿತು ಮಾತನಾಡಲಿ. ಮಾತಿನ ಗುಟ್ಟು ಮೌನವಲ್ಲಿದೆಯೆಂಬುದನ್ನು ಲಕ್ಷಿಸಿ ಮಾತಾಳಿಯ ಓಘವನ್ನು ನೀನು ಗುರುತಿಸಿ ಸದಸ್ಪ್ರವೇಶಿಯಾಗಲೆತ್ನಿಸು. ನಿನಗೆ ಘನತೆ ಬೇಕಾಗಿದ್ದರೆ ಮಾತು ಹೇಳಬೇಡ, ಮಾತು ಕೇಳು. ಮಾತು ಜ್ಯೋತಿರ್ಲಿಂಗವೆಂದರಿತು ಮೌನದಿಂದ ಮಾತನ್ನಾರಾಧಿಸು. ಒಮ್ಮೊಮ್ಮೆ ಮಾತನಾಡಬೇಕೆಂಬ ಇಷ್ಟವಾದಾಗ ಬುದ್ಧಿವಂತಿಕೆಯಲ್ಲಿ ನಿನಗೆ ಸರಿಕರಾದವರ ಹತ್ತಿರ ಹೋಗಿ ಬಾಳು ಬದುಕಿನ ಅಂತಿಮ ಶ್ರೇಯವನ್ನೇ ಕುರಿತು ಮಾತನಾಡು.

ಅಧಿಕಾರ

ಅಧಿಕಾರದ ಸೊಕ್ಕು ತಲೆಗೇರಿದವನನ್ನು ನಾನು ಅಸ್ಪೃಶ್ಯನೆಂದು ಕರೆಯುತ್ತೇನೆ. ಅವನು ಮುಟ್ಟಿದ್ದೆಲ್ಲ ಮೈಲಿಗೆ. ಶಬ್ದಗಳು ಅವನ ಬಾಯಲ್ಲಿ ಸಿಗಬಾರದೆ ಸಿಕ್ಕು ಒಂದೇ ಸವನೆ ಕಷ್ಟ ಪಡುವವು. ಅವನ ಕಾಕದೃಷ್ಟಿಗೆ ಬಿದ್ದ ವಸ್ತುವೆಲ್ಲ ಹಾವಿನ ಕಣ್ಣಿಗೆ ಬಿದ್ದ ಪಕ್ಷಿಯಂತೆ ಇಲಿವಿಲಿ ಒದ್ದಾಡುವದು. ಬೆಳುದಿಂಗಳಲ್ಲಿ ಕೊಡೆ ಹಿಡಿಯುವುದರಲ್ಲಿಯೇ ಅವನು ತೃಪ್ತಿಯನ್ನು ಹೊಂದುತ್ತಾನೆ. ಇಕ್ಕಟ್ಟಿನಲ್ಲಿ ಬಂದು ಬಿದ್ದವರನ್ನು ಸಂಕಟಕ್ಕೀಡು ಮಾಡುವದರಲ್ಲಿಯೇ ಅವನು ಸೌಖ್ಯವನ್ನು ಪಡೆಯುತ್ತಾನೆ. ಆದುದರಿಂದಲೇ ಅಧಿಕಾರಿಯನ್ನು ಶೀಲ ಹೀನನಾದ ಹೊಲೆಯನೆಂದು ನಾನು ಕರೆದುದು.

ಕೀಳು ವಂಶದಲ್ಲಿ ಹುಟ್ಟಿದವನಿಗೆ ಅಧಿಕಾರದ ಹಿರಿಯ ಹುದ್ದೆಯನ್ನು ಎಂದಿಗೂ ಕೊಡಬಾರದು. ಬಚ್ಚಲದ ತಿಳಿ ನೀರು ಪಂಚಾಮೃತವಾಗಲಾರದು. ಬೇವಿನ ಸಸಿಗೆ ಬೆಲ್ಲದ ನೀರು ಹುಯ್ದರೆ ಬೇವು ಬೆಲ್ಲವಾಗಲಾರದು. ಕಾರಣ ಯಾವಾಗಲೂ ಪಾತ್ರಾಪಾತ್ರತೆಯನ್ನರಿತು ಅಧಿಕಾರದ ದಾನ ಮಾಡಬೇಕು. ಅಧಮನ ಕೈಯಲ್ಲಿ ಅಧಿಕಾರವನ್ನು ಕೊಡುವುದೂ, ಹಂದಿಯ ಮುಂದೆ ರತ್ನವನ್ನಿರಿಸುವುದೂ, ಮಂಗನ ಕೈಯಲ್ಲಿ ಮಾಣಿಕ ಕೊಡುವುದೂ ಅಷ್ಟೇ. ಹುಚ್ಚನೊಬ್ಬನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದರೆ ಅವನು ತನ್ನ ರಾಜಧಾನಿಯನ್ನು ದಿಲ್ಲಿಯಿಂದ ದೌಲತಾಬಾದಿಗೇ ಒಯ್ಯಲು ಹೇಳಿಯಾನು. ಕುರುಡರು ಕುಂಟರೆ ಮೊದಲಾದ ಅಂಗಹೀನರು ಆ ಹುಚ್ಚು ಅರಸನ ಆಜ್ಞೆಗೆ ಓ ಕೊಡದ ಪರಿಸ್ಥಿತಿಯಲ್ಲಿದ್ದಾಗ ತನ್ನ ಆಜ್ಞೆಗೆ ಅವಜ್ಞೆಯನ್ನುಂಟು ಮಾಡಿದರೆಂದು ಒಗೆದು ಅವರನ್ನು ದರದರನೆ ದೌಲತ್ತಾಬಾದಿನವರೆಗೆ ಎಳೆದೊಯ್ಯಲು ಅಪ್ಪಣೆಯನ್ನಿತ್ತಾನು. ಹುಟ್ಟಿನಲ್ಲಿಯೇ ಹೀನರಾದವರನ್ನು ಅಧಿಕಾರದ ಅಂತಸ್ತಿನಲ್ಲಿ ಕುಳ್ಳಿರಿಸುವದರಿಂದ ರಾಷ್ಟ್ರದ ರಾಜಕೀಯ ಭವಿತವ್ಯಕ್ಕೇ ಕುಂದು ಬರುತ್ತದೆಯೆಂದು ಇತಿಹಾಸ ಕೂಗಿ ಕೂಗಿ ಹೇಳುತ್ತದೆ. ಇನ್ನು ಚಿಕ್ಕ ಪುಟ್ಟ ಸಂಸ್ಥೆಗಳಲ್ಲಿ

ಸೇರಿಕೊಂಡ ಪಾತ್ರಹೀನರಾದ ಅಧಿಕಾರಿಗಳ ಕೈವಾಡವನ್ನು ಹೇಳಲೇ ಬೇಡ. ಅವರು ತಮ್ಮ ಅಧಿಕಾರದ ಸಿಡಿ ಮದ್ದಿನಿಂದ ಅಂತ ಸಂಸ್ಥೆಗಳನ್ನು ಮಣ್ಣುಗೂಡಿಸಿ ಅವುಗಳ ಮಸಣ ಭೂಮಿಯ ಮೇಲೆ ತಮ್ಮ ಮಂದಿರವನ್ನು ಕಟ್ಟಿ ಲೋಲವಾಡುವರು.

ಅಧಿಕಾರವು ಪಕ್ಷಪಂಗಡಗಳ ಬೆನ್ನನ್ನು ಕಟ್ಟಲೇ ಕೂಡದು. ಹಾಗೆ ಕಟ್ಟಿದ್ದಾದರೆ ಅಲ್ಲಿ ಅಧಿಕಾರದ ದುರುಪಯೋಗವು ನಿಸ್ಸಂದೇಹವಾಗಿ ಆಗುವುದು. ಪಕ್ಷ ಪಂಗಡಗಳು ಯಾವಾಗಲೂ ಸ್ವಾರ್ಥಸಾಧನೆಯೊಂದನ್ನೇ ಮುಂದು ಮಾಡಿಕೊಂಡು ಮೂಡಿ ಬರುವವು. ದುರುದ್ದೇಶದ ಬೀಜವನ್ನೇ ಬಿತ್ತಿ ಅದನ್ನು ಭದ್ರವಾಗಿರಿಸಲು ತಾವೇ ಮುಳ್ಳು ಬೇಲಿಯಂತೆ ನಿಂತುಕೊಂಡು ಕಾವಲುಗೆಯ್ಯುವವು. ಅಂತ ಬೇಲಿಯ ನೆಳಲಲ್ಲಿ ಎಷ್ಟೇ ದಣಿದು ಬಂದಿದ್ದರೂ ಸದ್ಗುಣಿಗಳು ನಿಂತು ದಣಿವಾರಿಕೆಯ ಬಿಸಿಯುಸಿರು ಹಾಕಲಾರರು. ದುಭಾಷಿಗಳಿಗೆ ಮಾತ್ರ ಅಲ್ಲಿ ಸ್ಥಾನವುಂಟು. ಬೇವಿನ ಮರವನ್ನು ಕಾಗೆ ಆಶ್ರಯಿಸುವದೆಷ್ಟು ಸ್ವಾಭಾವಿಕವೊ ಪಕ್ಷ ಪಂಗಡಗಳನ್ನು ದುರ್ಮತಿಗಳು ಆಶ್ರಯಿಸುವುದು ಅಷ್ಟೇ ಸ್ವಾಭಾವಿಕವಾಗಿದೆ. ಪಕ್ಷಪಂಗಡಗಳನ್ನಾಶ್ರಯಿಸಿದ ಸಂಸ್ಥೆಯು ಸ್ವಾರ್ಥ್ಯಸಾಧಕರ ಸಂಸ್ಥೆಯೇ ಸರಿ.

ರಾಜಕಾರಣಪಟುಗಳೂ, ಧರ್ಮಗುರುಗಳೂ ಯಾವಾಗಲೂ ಅಧಿಕಾರ ಪ್ರಾಪ್ತಿಗಾಗಿಯೆ ಹೋರಾಡಿ ಬದುಕನ್ನು ಹೊರೆಯುವ ಜೀವಿಗಳು. ಅವರಿಗೆ ಪಕ್ಷ ಪಂಗಡಗಳನ್ನು ಕಟ್ಟುವದರಲ್ಲಿಯೆ ಕಾರ್ಯ ಸಾಧನೆಯ ಮೊನೆಯಿರುತ್ತದೆ. ರಾಜಕಾರಣ ಮತ್ತು ಧರ್ಮವು ಮೂರ್ಖನೂ, ವಿಷಯ ಲಂಪಟನೂ ಆಡುವ ಗುಳುಗುಳಿಯಾಟ. ದೇಶದಲ್ಲಿ ತನ್ನದೇ 'ವಾದ'ವನ್ನು ಮುಂದು ಮಾಡುವ ರಾಜಕಾರಣಿಗೂ. ಸಮಾಜದಲ್ಲಿ ತನ್ನದೇ ತತ್ವವನ್ನು ಪ್ರಸ್ಥಾಪಿಸಲಿಳಸುವ ಆಚಾರ್ಯನಿಗೂ ಅವನು ಬೇಡುವ ಅಧಿಕಾರವೊಂದನ್ನಷ್ಟು ಕೊಟ್ಟು ನೋಡು. ಆಗಲೇ ವಾದದ ಪ್ರಚಾರ ನಿಲ್ಲಿಸಿ ಅಧಿಕಾರ ಸಿಂಹಾಸನದ ಮೇಲೆ ಕುಳಿತು ಕೊಂಡು ಆಜ್ಞೆಕೆಗೆ ಮೊದಲು ಮಾಡುವರು. ಇಂತ ದಾಂಭಿಕರಿಂದಲೇ ಈ ಲೋಕದ ಕೊಲೆಯಾಗುತ್ತದೆ. ಇವರು ಇದಿರಿಗೆ ನಿಂತು

ಕೊಳ್ಳುವುದಿಲ್ಲ. ನ್ಯಾಯ ನೀತಿಗಳನ್ನು ಮುಂದೆ ಮಾಡುತ್ತ, ಬೆನ್ನಲ್ಲಿ ಬರ್ಚಿಯನ್ನು ಹಾಕುವರು.

ಮೇಲ್ತರಗತಿಯ ಅಧಿಕಾರವನ್ನು ನೇರವಾಗಿ ಕೊಡಬಾರದು. ಕೆಳಗಣ ತರಗತಿಯಿಂದ ಮೊದಲ್ಗೊಂಡು ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತ, ಹೆಚ್ಚು ಹೆಚ್ಚು ತರಗತಿಯ ಅಧಿಕಾರದ ಸೋಪಾನವನ್ನು ಒಂದೊಂದಾಗಿ ಏರುತ್ತ ಬಂದವನಿಗೇ ಅದು ಮೀಸಲಾಗಿರಬೇಕು. ಉತ್ತಮವಾದ ಅಧಿಕಾರಿ ತನ್ನ ಮಣೆಯನ್ನು ಹೋರಾಟದಿಂದಲೂ, ಏರಿಕೆಯಿಂದಲೂ ಪಡೆದಿರಬೇಕಲ್ಲದೆ ದೊಡ್ಡವರ ಹೆಸರಿನ ಮೇಲೆಯೊ, ಪಕ್ಷ ಪಂಗಡಗಳ ಆಶ್ರಯದ ಮೇಲೆಯೊ ಅದನ್ನು ದೊರಕಿಸಲಾಗದು. ಹಾಗೆ ದೊರಕಿದ್ದಾದರೆ ಅಲ್ಲಿ ಸತ್ಯಕ್ಕೆ ವಂಚನೆಯುಂಟಾಗಿ ಕಾರ್ಯಕ್ಕೆ ವಿಘ್ನವುಂಟಾಗುತ್ತದೆ. ಅಂತಹ ಅಧಿಕಾರಿಯನ್ನು ಮೇಲಿಟ್ಟುಕೊಂಡು ದುಡಿಯುವ ಸಂಸ್ಥೆಯು ತನ್ನ ಕಚೇರಿಯ ಒಳಗೆ ಹೆಗ್ಗಣವನ್ನು ಮುಚ್ಚಿಟ್ಟು ಮೇಲೆ ಮಣ್ಣು ಹಾಕಿದಂತೆ ಮಾಡುವುದು. ಇಂದಿಲ್ಲ ನಾಳೆಯಾದರೂ ಅಂತಹ ಸಂಸ್ಥೆಯು ನಿಶ್ಚಯವಾಗಿ ಕುಪ್ಪಳಿಸಿಯೆ ತೀರುವುದು. ದೊಡ್ಡ ದೊಡ್ಡ ದೇಶಗಳೂ, ರಾಷ್ಟ್ರಗಳೂ ಅಧಿಕಾರವನ್ನು ಮೋಸದಿಂದ ಹಾರಿಸಿಕೊಂಡು ಬಂದವರ ಕೈಗೆ ಕೊಟ್ಟು ಮಣ್ಣು ಪಾಲಾಗಿ ಹೋದುದು ಇದನ್ನೇ ವಿಶದೀಕರಿಸುತ್ತವೆ.

ಅಧಿಕಾರವು ತಲೆಯೆತ್ತಿ ಬದುಕಬೇಕಾದರೆ ಅದು ನ್ಯಾಯ ನಿಷ್ಠುರರನ್ನೂ, ದಾಕ್ಷಿಣ್ಯಕ್ಕೊಳಗಾಗದವರನ್ನೂ ಹಿಂಬಾಲಿಸಲಿ. ಹೇಡಿ ವರಿಗೆ ಸೊಪ್ಪು ಹಾಕದವನ, ಲೋಕವಿರೋಧಿಯಾದವನ ಕೈಯಲ್ಲಿಯೇ ಅಧಿಕಾರ ಚಿರವಾಗಿ ಉಳಿದು ಅದರಿಂದ ಲೋಕ ಕಲ್ಯಾಣ ಆಗುವುದು. ಅವನು ಕಾರ್ಯದಕ್ಷತೆಯಿಂದಲೂ, ಸ್ವಪರಿಶ್ರಮದಿಂದಲೂ ಅಧಿಕಾರವನ್ನು ಪಡೆದಿರುವವರಿಂದ ಅಲ್ಲಿ ನ್ಯಾಯಾನ್ಯಾಯಗಳಿಗೂ, ಸೋಲು ಗೆಲವುಗಳ ಬಗೆಗೂ ನಿರ್ದಾಕ್ಷಿಣ್ಯವಾದ ಅಭಿಪ್ರಾಯ ದೊರೆಯುವುದು. ಅಂತವರನ್ನು ಒಲೈಸಿದ ಅಧಿಕಾರವು ಲೋಕ ಸಂಗ್ರಹ ಕಾರ್ಯದಲ್ಲಿ ನಿರತವಾಗುವುದು. ನಿರ್ಭೀತಿ, ನಿರ್ಭಿಡೆಯಿಂದೊಡಗೂಡಿದ ಅಧಿಕಾರದ ನೆಳಲಲ್ಲಿ ಸತ್ಯ ತ್ಯಾಗ ಸೇವೆಗಳು ತಾವಾಗಿಯೇ ಬಂದು ವಾಸ

ಮಾಡುವವು. ಈ ರೀತಿಯ ಅಧಿಕಾರವನ್ನು ನಾನು ಮುಕ್ತ ಮನಸ್ಸಿನಿಂದ ಒಲಮಾಡಿಕೊಂಡು ಅವರ ಆಳ್ವಿಕೆಗೆ ತಲೆಬಾಗುತ್ತೇನೆ.

ಆದರೆ ಈ ಎಲ್ಲ ಕಾಲದಲ್ಲಿ ಅಧಿಕಾರಿಗಳ ಮನೋವೃತ್ತಿಯನ್ನು ನಾನು ಪರೀಕ್ಷಿಸಿದ್ದೇನೆ. ಇತಿಹಾಸಕಾರನಿಗೆ ಕಿವಿಗೊಟ್ಟು ರಾಷ್ಟ್ರಾಧಿಪತಿಗಳ ಇರವಿಕೆಯನ್ನು ಕೇಳಿ ತಿಳಿದುಕೊಂಡಿದ್ದೇನೆ. ಅಧಿಕಾರವನ್ನು ಪಡೆದು ಸೂಳೆಗಾರಿಕೆಯ ಮಟ್ಟಕ್ಕಿಳಿದವರೇ ಎಲ್ಲ ಕಡೆಗೂ ಇದ್ದುದು ಕಂಡು ಬರುತ್ತದೆ. ಸೂಳೆಯು ಕುಡಿಗಣ್ಣಿನ ನೋಟ ಬೀಸಿ ಕಾಮುಕನನ್ನು ಹೊಯ್ದಾಡಿಸಿದ ತೆರದಲ್ಲಿಯೆ ಅಧಿಕಾರದ ಕೈದಂಡದಿಂದ ಪ್ರಜಾಕೋಟಿಯನ್ನು ಮಣಿಸಿ ಹಿಗ್ಗಿ ನಲಿದವರೇ ನೂರಕ್ಕೆ ನೂರರಷ್ಟಿದ್ದಾರೆ, ಅಧಿಕಾರದ ಮಬ್ಬಿನಲ್ಲಿ ಹೆಣ್ಣಿಗಾಗಿ ಹೋರಾಡಿ ರಾಷ್ಟ್ರವನ್ನೇ ದಾಳಿಯ ದಳ್ಳುರಿಯಲ್ಲಿ ನೂಕಿ ಕೇಕೆ ಹೊಡೆದು ಬಿದ್ದು ಬಿದ್ದು ನಕ್ಕವರನ್ನು ಕುರಿತು ಇತಿಹಾಸದ ಪಂಕ್ತಿ ಪಂಕ್ತಿಗಳೂ ಕಣ್ಣೀರು ಹಾಕುತ್ತ ಹೇಳುತ್ತಿವೆ. ದೂರದ ಮಾತೇಕೆ? ನಿನ್ನೆ ಬಡವನಾಗಿದ್ದ ಈ ಶ್ರೀಮಂತ, ನಿನ್ನೆ ಕಾರಕೂನನಾಗಿದ್ದ ಈ ಸಾಹೇಬ, ನಿನ್ನೆ ಅಗಸನಾಗಿದ್ದ ಈ ಅಮಾತ್ಯ, ನಿನ್ನೆ ದಲ್ಲಾಳಿಯಾಗಿದ್ದ ಈ ಧರ್ಮಾಧಿಕಾರಿ- ಇವರ ಜೀವನ ರೀತಿಯನ್ನು ಕಂಡು ನನಗೆ ಬುದ್ಧಿ ಭ್ರಮಣವಾದಂತಾಗಿದೆ. ಓ ಅಧಿಕಾರವೇ. ನೀನು ಮನುಷ್ಯರನ್ನು ಪತಂತ್ರಕ್ಕಿಳಿಸುತ್ತಿರುವ ಸನ್ಮೋಹಿನಿ! ಪಾವನ ಪುಣ್ಯ ಭೂಮಿಯನ್ನು ಎಷ್ಟು ನಾರಕ ಗತಿಗೀಡು ಮಾಡುತ್ತಿರುವಿಯಲ್ಲ! ಸ್ವರ್ಗದಿಂದ ಇಳೆಗೆ ಇಳಿದು ಬಂದ ಅಧಿಕಾರ ಮನುಜ ಮನುಜನೆದೆಯನ್ನೇ ಇರಿದು ಕೊಲೆಯಾಟವನ್ನಾಡುವಲ್ಲಿ ಮೇಲಿನ ಅಧಿಕಾರಿಗೆ ಸಂತೋಷವಾಗುತ್ತಿರಬೇಕೇನು!

ಶ್ರೇಷ್ಠ ತರಗತಿಯ ಅಧಿಕಾರಿಯೊಬ್ಬನು ಸತ್ತ ಮೇಲೆ ಅವನ ಗೋರಿಯ ಮೇಲೆ ಒಮ್ಮೆ ಕಾಲಾನಂತರದಲ್ಲಿ ಹೋಗಿ ಕುಳಿತು ಅವನ ಕಲಂಕರಹಿತ ಚಾರಿತ್ರ್ಯ ನೆನೆನೆನೆದು ಅಳುವ ಲೋಗನೊಬ್ಬನಾದರೂ ಈ ಭೂಮಿಯ ಮೇಲೆ ಇರುವನೇನು? ಇದ್ದರೆ ತೋರಿಸು. ನಾನೂ ಅವನ ಜೊತೆಯಲ್ಲಿಯೇ ಕುಳಿತು ಮನದ ಮಂದಾರ ಅರ್ಪಿಸುತ್ತೇನೆ.

ಯೌವನ

ಬಾಳಿಗೆ ಎರಡು ಮುಖ: ಯೌವನ ಮತ್ತು ಮುಪ್ಪು. ಅವುಗಳಲ್ಲೊಂದು ಉತ್ತರಾಯಣದ ಕಡೆಗೆ ನಡೆದರೆ ಇನ್ನೊಂದು ದಕ್ಷಿಣಾಯನದ ಕಡೆಗೆ ಸಾಗಿರುತ್ತದೆ. ಯೌವನದಲ್ಲಿ ಬಾಳಿನ ಪೂರ್ಣ ಚಂದ್ರಮನು ಮೂಡಿದಾಗ ಮುಪ್ಪು ಕಾಳ ರಾತ್ರಿಯಲ್ಲಿ 'ದರ್ಶನ' ರತ್ನವನ್ನು ಕಳೆದುಕೊಂಡು ಸಾವಿನ ನಸುಕನ್ನು ಕೈಮಾಡಿ ಕರೆಯುತ್ತಿರುತ್ತದೆ. ಯೌವನವು ಮತ್ತು ಮುಪ್ಪು ಜೀವನದಲ್ಲಿ ಒಂದೇ ಬಾರಿ ಬರುತ್ತವೆ. ಯೌವನದ ದಿನಗಳು ಬಂದರ ಹಿಂದೊಂದು ಸರಿ ಸರಿದು ಹೋಗುತ್ತಿದ್ದಾಗ ನೀನು ನಗಬೇಡ, ಗೋಳೋ ಎಂದು ಅಳು. ಏನು ಕೊಟ್ಟರೂ ನಿನ್ನೆ ನಿನ್ನಿಂದ ದೂರವಾದ ತಾರುಣ್ಯದ ಸಂಭ್ರಮದ ದಿನ ನಾಳೆ ಬಾರದು. ನಿನ್ನೆಯನ್ನು ಕಳೆದುಕೊಂಡು ನಿನ್ನ ಗೋರಿಯ ಕಡೆಗೆ ಮುಖ ಮಾಡಿಕೊಂಡು ಒಂದೊಂದೇ ಹೆಜ್ಜೆಯಿಕ್ಕುತ್ತ ನಡೆದಿರುವೆ. ನಿನ್ನ ಬದುಕು ಮುಕ್ಕಾಗುತ್ತಿದೆ; ಅದಕ್ಕೆ ಕಂಬನಿ ಅರ್ಪಿಸು.

ಯೌವನವು ಕಡಿವಾಣ ಬಿಚ್ಚಿದ ಕುದುರೆ. ಕುದುರೆಯ ನಡೆಯನ್ನು ತಿಳಿಯುವುದು ಅತಿ ಕಷ್ಟವೆಂದು ತುರಗ ಶಾಸ್ತ್ರಬಲ್ಲ ಪಂಡಿತರ ಅಭಿಪ್ರಾಯ. ಅದು ಹಸಿರು ಕಂಡಲ್ಲಿ ಓಡುವುದು, ನೀರ ಕಂಡಲ್ಲಿ ನಿಲ್ಲುವುದು, ತನ್ನ ಇಷ್ಟಕ್ಕೆ ಅಡ್ಡಿ ಬಂದ ಒಡೆಯನನ್ನೂ ಕೊಳ್ಳವಾಳದಲ್ಲಿ ತೂರಿ ಒಗೆದು ತನ್ನಾಸೆಯನ್ನು ಈಡೇರಿಸಿಕೊಳ್ಳುವುದು. ಸಕಲ ಇಂದ್ರಿಯಗಳನ್ನೂ ಸಂಯಮನದಿಂದ ಹಿಡಿದುಕೊಂಡು ನಡೆಯುವುದು ದುಸ್ಸಾಧ್ಯ. ಅಶ್ವಾರೋಹಿ ಎಷ್ಟೇ ಚತುರನಿದ್ದರೂ ಲಗಾಮು ಹಾಕಿ ತನಗೆ ಬೇಕಾದಾಗ ಅದನ್ನು ನಿಲ್ಲಿಸಲಾರನು. ನೈಮೇಲಿ ಮುತ್ತು ಬೆಳೆಯುವಂತೆ ತಪಗೆಯ್ದು ಹಿರಿಯರೇ ಕೈಯಲ್ಲಿ ಹಿಡಿದುಕೊಂಡ ಸಂಯಮನದ ಲಗಾಮನ್ನು ಕಳೆದುಕೊಂಡು ಮನೋವಿಕಾರದ ಅಬ್ಬರಕ್ಕೆ ಸಿಲುಕಿ ಸೋತು 'ಗಾಯಾಳುಗಳಾದ ಸಿಪಾಯಿ' ಗಳಾದ ಮೇಲೆ ಸಾಮಾನ್ಯರ ಮಾತೇನು? ತಾರುಣ್ಯದ ಒತ್ತಡದಿಂದ

ಪ್ರವಹಿಸಿ ಬರುತ್ತಿರುವ ರಕ್ತವಾಹಿನಿಯ ಇದಿರಿನಲ್ಲಿ ಸಂಯಮನ, ಸಹನ ಶೀಲತೆ, ಸಮಬುದ್ಧಿ ಸೌಜನ್ಯಾದಿಗಳು ನಿಲ್ಲುವದಿಲ್ಲ. ದುಷ್ಟ ಮೃಗಗಳ ಹತ್ತಿರ ಹಸುವಿನಂತಹ ಪ್ರಾಣಿಗಳು ಆಲೆಯುವದಿಲ್ಲ. ಯೌವನಾಶ್ವಕ್ಕೆ ಶಿವಭಕ್ತರ ಮುಗುವೇನು? ಅರಸನ ಹಂಗೇನು ? ತನ್ನ ಶಿಂಕದಿಂದ ನಡೆದುಕೊಂಡು ಹೋಗುವುದೊಂದೇ ಅದಕ್ಕೆ ಗುರುತು. ಯುವಕನೇ, ತಾರುಣ್ಯ ನಿನ್ನ ಪಾಲಿನ ಪರೀಕ್ಷಾಕಾಲ. ಈ ಬಿಕ್ಕಟ್ಟಿನ ಪರೀಕ್ಷೆಯಲ್ಲಿ ನೀನು ಉತ್ತೀರ್ಣನಾದರೆ ಉಜ್ವಲ ಭವಿತವ್ಯ ನಿನಗಾಗಿ ಕಾಯ್ದು ಕುಳಿತಿದೆಯೆಂದು ನಾನು ಸಾರಿ ಸಾರಿ ಹೇಳುತ್ತೇನೆ.

ತಾರುಣ್ಯದ ಗೀತ ಹೇಳುವ ಯುವಕನನ್ನು ಸೊಕ್ಕು ತಾನಾಗಿಯೆ ಹುಡುಕುತ್ತ ಬರುತ್ತದೆ. ಅಂತಹನಿಗೆ ಸಿರಿಯು ಸಂಗವೊಂದಿದ್ದರಂತೂ ಮುಗಿದೇ ಹೋಯಿತು. ಸೆರೆ ಕುಡಿದ ಮಂಗಕ್ಕೆ ಚೇಳು ಕಡಿಸಿದ ಹಾಗೂ, ಸೊಕ್ಕು ಬಂದ ಕತ್ತೆಯ ಬಾಲಕ್ಕೆ ಪಟಾಕ್ಷಿ ಕಟ್ಟಿದ ಹಾಗೂ ಆಗುತ್ತದೆ. ಇಂತಹ ಹುಚ್ಚು ಉನ್ಮಾದ ತರವಲ್ಲ. ಇಷ್ಟೊಂದು ಕ್ಷಣಿಕ ಸುಖವನ್ನು ತಂದೊಡ್ಡುವುದಕ್ಕಾಗಿ ಯೌವನವು ನಿನ್ನ ಮನದ ಬಾಗಿಲಲ್ಲಿ ಕಾಲಿಟ್ಟಿಲ್ಲ. ಜೀವನವು ನೀನೆಣಿಸಿದಷ್ಟು ಹಗುರಾಗಿಲ್ಲ. ನಿನ್ನ ಮುಂದಿನ ದಿನಮಾನಗಳು ದುಃಖಪೂರ್ಣವಾಗಿವೆಯೆಂಬುದನ್ನರಿತು ಓಡುವ ಚಾಂಚಲ್ಯಕ್ಕೆ ಸ್ವಲ್ಪ ಲಗಾಮು ಹಾಕು. ಯೌವನವು ಕೊನೆಯುವರೆಗೂ ನಿನ್ನಲ್ಲಿಯೆ ನೆಲೆ ನಿಲ್ಲುವುದಾಗಿದ್ದರೆ ಈ ಯೌವನಕ್ಕನುಗುಣವಾದ ಉದ್ವಿಗ್ನತೆಗೆ ನಾನೂ ಸಮ್ಮತಿ ಕೊಡುತ್ತಿದ್ದೆ. ಅರಳಿದ ಹೂ, ಸೆರೆ ಬಂದ ಹುಡುಗಿಯ ಚೆಲುವು, ತುಂಬಿದ ತಿಂಗಳು-ಬೆಳಕು- ಇದೆಲ್ಲ ಕಾಲ ಪ್ರವಾಹದ ಮೇಲೆ ತೇಲಿ ಬಂದ ನೊರೆ. ಜೀವನ ದ್ರಷ್ಟಾರರು ಆಳವಾದ ಬಾಳಿನ ಕಡಲ ಮೇಲೆ ತಿಳ್ಳಿಯಾಡುವ ನೊರೆಗೆ ಎಂದಿಗೂ ಮನಸ್ಸು ಮಾಡರು. ಮನಸ್ಸು ಬಿಗಿ ಹಿಡಿದು, ಓಡುವ ಉಸಿರನ್ನು ನಿಲ್ಲಿಸಿ ಒಂದೇ ಸವನೆ ಮುಳುಗುತ್ತ, ಮುಳುಗುತ್ತ ಅರಿವಿನಾಳದಲ್ಲಿಳಿದು ಅಲ್ಲಿರುವ ಅನರ್ಘ್ಯವಾದ ಆಣಿ ಮುತ್ತುಗಳನ್ನು ಮೇಲಕ್ಕೆ ತರಲು ದಿವಾರಾತ್ರಿ ಶ್ರಮಿಸುತ್ತಾರೆ. ಅಂತಹ ಶ್ರಮದಲ್ಲಿ ಕಷ್ಟವುಂಟು, ಸುಖವುಂಟು. ಸುಖವನ್ನು ಬಿಟ್ಟು ಮುಕ್ತಿ ಬೇರೆಯಿಲ್ಲ. ತುಂಬಿದ ಕೆನ್ನೆ ನಾಳೆಗೆ

ಬಳಸೇರಲಿರುವವು. ಉದಯದಲ್ಲಿ ಅರಳಿದ ಕಣ್ಣು ಸಂಜೆ ಬರುವ ಮುನ್ನವೆ ಕುಳಿ ಸೇರಲಿರುವವು. ಉದಯ ಅಪರಾಹ್ನಗಳು ಹೋದ ಮೇಲೆ ನಿಬಿಡಾಂಧಕಾರ ಕವಿದು ಬರಲಿದೆ. ಪ್ರಿಯ ಯುವಕ, ನಿನಗೆ ಉದ್ವಿಗ್ನತೆ ಬೇಡ, ಇದಿರು ಬಂದವರನ್ನು ತಡೆದು ನಿಲ್ಲಿಸೇನೆಂಬ ಬಿಂಕಬೇಡ, ಇಂದು ಇಂದಿಗೇ ಇರಲಿ, ನಾಳೆಗೆ ಮಾತ್ರ ಬಂದುದನ್ನು ನೋಡೋಣವೆಂಬ ದುಡುಕಬೇಡ; ಯೌವನವನ್ನು ಕಳೆದ ಬುದ್ಧಿವಂತರಾದ ವಯೋವೃದ್ಧರನ್ನು ಆಶ್ರಯಿಸು. ಅವರ ವಚನಾಮೃತಕ್ಕೆ ಕಿವಿಗೊಡು. ತಾರುಣ್ಯದ ತೇಜಸ್ಸಿಗೆ ವೃದ್ಧಾಪ್ಯದ ಗೌರವ ದೊರೆತರೆ ಬಂಗಾರಕ್ಕೆ ಕುಂದಣವಿಟ್ಟಂತಾಗುವದು.

ಜೀವನದ ಉಚ್ಛ್ರಾಯ ಕಾಲವೆ ಯೌವನವು. ಆಗ ಕಾರ್ಯ ಮಾಡಬೇಕೆಂಬ ಉತ್ಸಾಹವಿರುತ್ತದೆ. ಪೃಥಿವಿಯ ಸಂಶೋಧನೆಯನ್ನು ಪಡಸಬೇಕೆಂಬ ಹುಮ್ಮಸ್ಸಿರುತ್ತದೆ. ಅಂತ ಉತ್ಸಾಹ ಕಾಲದಲ್ಲಿ ಆದ ಕಾರ್ಯವೇ ನಿಜವಾದ ಕಾರ್ಯ. ಮುಪ್ಪಿಗೆ ಅಂತ ಹುಚ್ಚು ಇರುವದಿಲ್ಲ. ಇದ್ದಷ್ಟು ಸಂಪತ್ತನ್ನೆ ರಕ್ಷಿಸಿಕೊಂಡು ಹೋಗಬೇಕೆಂಬ ಬಯಕೆಯೊಂದು ಮಾತ್ರ ಮುಪ್ಪಿಗೆ ಗಂಟು ಬಿದ್ದಿರುತ್ತದೆ. ಅದು ತಪ್ಪೇನಲ್ಲ. ಬರಲಿರುವ ಜೀವನದ ಸಿದ್ಧತೆಗೆ ಮುಪ್ಪು ಒದಗಿಸುವ ಸೌಕರ್ಯವದು. ಸ್ವಯಂ ಪರಿಶ್ರಮದಿಂದ ದುಡಿದು ದುಡ್ಡನ್ನು ಹೆಸರನ್ನು ಗಳಿಸಿದವರು ವಿರಳವಾಗಿ ದೊರೆಯುತ್ತಾರೆ. ಒಬ್ಬ ಸಿರಿವಂತನ ಖಜಾನೆಯ ಹಿಂದೆ ತಲೆಮಾರಿನಿಂದ ಬಂದ ಹಿರಿಯರ ಶ್ರಮವಿರುತ್ತದೆ. ಕೀರ್ತಿವೆತ್ತ ಯುವಕನ ಶ್ರೇಯದ ಹಿಂದೆ ತಾತ ಮುತ್ತಾತಂದಿರ ಘನತೆಯ ಕೊಡುಗೆ ಇರುತ್ತದೆ. ಮಹತ್ವಾಕಾಂಕ್ಷೆಯಿಂದ ಪ್ರೇರಿತನಾದ ಯುವಕನ ಹೋರಾಟಕ್ಕೆ ನನ್ನ ಹೃತ್ಪೂರ್ವಕವಾದ ಬೆಂಬಲವಿದೆ. ಆದರೆ ನನ್ನದೊಂದಿಷ್ಟು ಸಲಹೆ. ದಯವಿಟ್ಟು ನಿನ್ನಂತೆಯೆ ಮಹತ್ವಾಕಾಂಕ್ಷೆಯನ್ನು ಬೆಂಬತ್ತಿ ಹೋಗಿ ಅನುಭವ ಪಾಲದೆ ಕೈ ಸುಟ್ಟುಕೊಂಡವರನ್ನು ಕಂಡು ಅವರ ಸಲಹೆಯನ್ನು ಪಡೆದುಕೊಂಡು ಬರಬೇಕಲ್ಲ! ಅದನ್ನು ಮಾಡಿಕೊಂಡು ಬಾ. ನಿನಗೆ ಸರ್ವಮಂಗಲ ಬಯಸುತ್ತೇನೆ.

ಭರಭರಾಟೆಯಿಂದ ಬೆಳೆವ ಎಳೆಯ ಬಳ್ಳಿಗೆ ಕೀಡೆಗಳು ಬಹು ಶೀಘ್ರವಾಗಿ ಬಂದು ಗಂಟು ಬೀಳುತ್ತವೆ. ಹುಳು ಕೊರೆದ ಲತೆಯು

ಮೊಗ್ಗೆ ಬಿಡುವುದರಲ್ಲಿಯೆ ಕರಗಿ ಹೋಗುತ್ತದೆ. ಬಳ್ಳಿಯೊಂದರ ಮೇಲೆ ಒಂದು ಚಿಟ್ಟೆಯೆ ಮಾತ್ರ ಬಂದು ಕುಳಿತಿತೆನ್ನಬೇಡ. ಅದು ಹಿಂದೆ ಬರಲಿರುವ ಚಿಟ್ಟೆ ಮಳೆಯು ಕಳುಹಿಸಿದ ಓಲೆಕಾರನೆಂದರಿತುಕೊ. ಯೌವನ ಲತೆಯನ್ನು ಹಾಳುಮಾಡಲು ಹೆಸರಿಟ್ಟು ಹೇಳದಷ್ಟು ಕ್ರಿಮಿ ಕೀಟಕಗಳು ಕಾಯ್ದಿರುತ್ತವೆ. ಬಲ್ಲಿದರು ಅವುಗಳಿಂದ ಹೇಗೆ ಪಾರಾಗಿ ತಮ್ಮ ಬಾಳಿನ ಉದ್ಯಾನವನ್ನು ಸಿಂಗಾರಗೊಳಿಸಿದರೆನ್ನುವುದನ್ನು ಅವರನ್ನು ಓಲೈಸಿ, ಭಕ್ತಿಯನ್ನರ್ಪಿಸಿ ತಿಳಿದುಕೊಳ್ಳಬೇಕು. ದುಷ್ಟ ಚಟಗಳನ್ನು ಹತ್ತಿರ ಬರಗೊಡದಂತೆ, ಕುಹಕಿಗಳ ಆಟವನ್ನು ನಡೆಯಗೊಡದಂತೆ ನೀನು ವೀರಯೋಧನಾಗಿ ನಿಂತು ನಿನ್ನ ಪಾಲಿಗೆ ಬಂದ ಯೌವನ ಸಂಪತ್ತನ್ನು ರಕ್ಷಿಸಬೇಕು. ಅಂತಹ ಯುವಕನ ದಿನಮಾನಗಳನ್ನೇ ನಾನು ಸ್ವರ್ಗೀಯ ಸುಖವನ್ನನುಭವಿಸುವ ದಿನಗಳೆಂದು ಕರೆಯುತ್ತೇನೆ.

ದುಃಖವನ್ನು ನೆನಸಿಕೊಳ್ಳುವದರಲ್ಲಿಯೆ ಸುಖವಿದೆ. ನನಗಂತೂ ಜೀವನ ಕಣ್ಣೀರಿನ ಕೊಳ. ಅಲ್ಲಿ ಮೂಡಿದ ಕಮಲಗಳೆಲ್ಲ ನನ್ನ ಮುದ್ದು ಶಿಶುಗಳು. ಕಠೋರವೂ, ಕ್ರೂರವೂ ದುಃಖದಾಯಕವೂ ಆದ ಯೌವನದ ದಿನಮಾನಗಳನ್ನು ಮುದುಕನಾದಾಗ ನನಗೆ ಸವಿಯಲು ಇಷ್ಟ. ಮುಪ್ಪು ಬರಬೇಕೆಂದು ನನಗೆ ಹಂಬಲವೇ ಇಲ್ಲ. ದುರ್ದೈವದಿಂದ ಮುಪ್ಪು ನನಗೆ ಬಂದಿತೆಂದರೆ ಯೌವನದ ದುರ್ದಿನಗಳನ್ನು ನನ್ನ ಬಾಳಿನ ರಸನಿಮಿಷಗಳೆಂದೇ ಭಾವಿಸಿ ಅನುಭವಿಸುವೂ ಮೆಲುಕಾಡಿಸುತ್ತೇನೆ.

ತಾಳ್ಮೆ

ಕತ್ತೆಯಂತಹ ತಾಳ್ಮೆ ಇರಬೇಕು. ಕಲ್ಲಿನಂತಹ ತಾಯಿ ಇರಬೇಕು. ಆಗ ಬಾಳು ಬಂಗಾರವಾಗುತ್ತದೆ. ಮನೆಯ ಹೊರಗಡೆಯಲ್ಲಿ ಹೋದಾಗ ತಾಳ್ಮೆಯು ನಮ್ಮ ಹಿತಗಳನ್ನು ಸುಲಕ್ಷಿಸಿ ನಮ್ಮ ದಾರಿಯನ್ನು ತಿದ್ದುತ್ತದೆ. ಮನೆಯ ಒಳಗಿದ್ದಾಗ ತಾಯಿಯ ಅಪ್ಪಿಕೆಯ ತೋಳ ತೊಟ್ಟಿಲಲ್ಲಿ ನಾವು ಹಾಯಾಗಿರುತ್ತೇವೆ. ಆದ ಕಾರಣ ಇವೆರಡನ್ನು ಪಡೆದು ಬಂದವನನ್ನು ಪುಣ್ಯವಂತನೆಂದು ನಾನು ಹೆಸರಿಡುತ್ತೇನೆ.

ತಾಳ್ಮೆಯು ಪರೀಕ್ಷೆಯ ಅಗ್ನಿಕುಂಡ. ಆ ಅಗ್ನಿಕುಂಡದಲ್ಲಿ ಹಾಯ್ದು ಬಂದವನೇ ಚೊಕ್ಕ ಚಿನ್ನ. ಅಂತಹ ಚಿನ್ನಕ್ಕೆ ಚಿನಿವಾರನ ಒರೆಗಲ್ಲಿನ ಆವಶ್ಯಕತೆಯೇ ಇಲ್ಲ. ಸೂರ್ಯನ ಕಾಂತಿಯನ್ನು ನೋಡುವುದಕ್ಕೆ ಕನ್ನಡಕದ ಅಗತ್ಯವೆಲ್ಲಿದೆ? ಕಮ್ಮಾರನು ಕಬ್ಬಿಣವನ್ನು ಕಾಯಿಸುವಂತೆ ತಾಳ್ಮೆಯು ತನ್ನ ಕುಲುಮೆಯಲ್ಲಿ ನಿನ್ನನ್ನು ಬೇಯಿಸಿ ನೋಡುತ್ತದೆ. ನಿನ್ನ ಮನಸ್ಸಿನ ದುಡುಕುಗಳನ್ನು, ಉದ್ವಿಗ್ನತೆಗಳನ್ನು, ಆಸೆ ಆಮಿಷಗಳನ್ನೂ ಅದು ಒಂದೊಂದರಂತೆ ಪರೀಕ್ಷಿಸಿ ನೋಡುತ್ತದೆ. ತಾಳ್ಮೆಯಿಲ್ಲದ ನಿನ್ನ ಬಯಕೆಗಳೆಲ್ಲ ಬರೀ ಅದಿರು. ಅವು ಆ ಅಗ್ನಿಕುಂಡದ ದಳ್ಳುರಿಗೆ ಸಿಲುಕಿ ಸುಟ್ಟು ಸುಡುಬುರಲಿಯಾಗಿ ಹೋಗುತ್ತವೆ. ಆಗ ನಿನ್ನ ವ್ಯಕ್ತಿತ್ವವೆಲ್ಲವೂ ಟೊಳ್ಳು ಕಾಳಿಗೆ ಸಮನಾಗಿ ಜನಪದರ ಕಿಮ್ಮತ್ತಿಗೂ ಬಾರದುದಾಗುತ್ತದೆ.

ವೈರಿಗಳು ಯಾವಾಗಲೂ ನಿನ್ನ ತಾಳ್ಮೆಯೊಡನೆಯೇ ಹೋರಾಡುತ್ತಾರೆ. ನಿನ್ನ ಮನಸ್ಸನ್ನು ನೋಯಿಸಿ ಸಿಟ್ಟು ಬರುವಂತಹ ಕಾರ್ಯಗಳನ್ನು ಮುಂದೆ ಮಾಡಿಕೊಂಡು ಬಂದು ಜಗಳಕ್ಕೆ ಪೀಠಿಕೆ ಹಾಕುತ್ತಾರೆ. ನಿನ್ನ ಸಹನ ಶೀಲತೆಯನ್ನು ದುರುಪಯೋಗಕ್ಕೀಡು ಮಾಡಿ ನಿನ್ನ ಮೇಲೆ ಹರಿಹಾಯಲು ಕಲುಷ ಸ್ವಭಾವದವರು ಯಾವಾಗಲೂ ಯತ್ನಿಸುತ್ತಾರೆ. ಅಂತ ಸಮಯದಲ್ಲಿ ತಾಳ್ಮೆಯೇ ನಿನ್ನ ರಕ್ಷಾ ಕವಚವಾಗಬೇಕು. ಅದರ ಇದಿರು ನಿಂತು ಹೋರಾಡುವ ಸಾಂಗ್ರಾಮಿಕ ಶಕ್ತಿ ಯಾರಿಗೆ ಬಂದೀತು! ತಾಳ್ಮೆಯ ತೇಜಸ್ಸಿನ ಮುಂದೆ ಕಾಪಟ್ಯವೂ ಔದ್ಧತ್ಯವೂ ತಲೆ ತಗ್ಗಿಸಿ

ಕೊಂಡು ನಿಂತು 'ಜೀ' ಎನ್ನುವನು. ಎಂತಲೇ ತಾಳ್ಮೆಯುಳ್ಳವನಿಗೆ ಯಾವಾಗಲೂ ಸೋಲೆಂಬುದೆ ಇಲ್ಲ.

ಇಳೆಯ ಮೇಲೆ ಬಾಳು ಹೊರೆಯುವ ಪ್ರಾಣಿಯ ಜೀವನವು ಉದ್ದಕ್ಕೂ ತಾಳ್ಮೆಯ ಪರೀಕ್ಷಾಕಾಲವಾಗಿರುವುದು. ತಾಳ್ಮೆಯನ್ನು ತನ್ನೊಡನೆ ಕರೆದುಕೊಂಡು ಹೋಗದವನ ಜೀವನವು ಅಸ್ಥಿರ ಹಾಯಿಯಿಲ್ಲದ ಹಡಗ ದಂಡೆಗೆ ಮುಟ್ಟುವುದೆಷ್ಟು ಅನಿಶ್ಚಿತವೋ ತಾಳ್ಮೆಯಿಲ್ಲದವನ ಬದುಕು ಅಷ್ಟೇ ಅನಿಶ್ಚಿತ. ಅವನು ನೂರೊಂದು ಹವ್ಯಾಸಕ್ಕೆ ಸಿಲುಕಿ ಆ ಬಂಡೆಗಲ್ಲಿಗೆ ಈ ಬಂಡಿಗಲ್ಲಿಗೆ ಒಡೆಯುತ್ತ, ದಾರಿ ತಪ್ಪಿ ಎಲ್ಲಿಯೋ ಒಂದು ಚಕ್ರದ ಸುಳಿಗೆ ಸಿಲುಕಿ ನಾಶವಾಗಿ ಹೋಗುವನು. ಅಪಮಾನ, ದುಃಖ, ಹಾನಿಗಳು ಬಂದೊದಗಿ ನಿನ್ನ ತಾಳ್ಮೆಯ ಬುನಾದಿಯನ್ನೇ ಬುಡಮೇಲು ಮಾಡಿ ಮನದ ಮಂದಿರವನ್ನು ಹಾಳುಗೆಯ್ಯಲು ಕ್ಷಣಕ್ಷಣಕ್ಕೂ ಹೊಂಚು ಹಾಕುತ್ತಿರುತ್ತವೆ. ಬಾಳಿನ ಹಂತ ಮೇಲಕ್ಕೇರಿದಂತೆ, ಆತ್ಮದ ವಿಕಾಸ ಹೆಚ್ಚು ಹೆಚ್ಚಾದಂತೆ ತಾಳ್ಮೆಯ ಪರೀಕ್ಷೆ ಇನ್ನೂ ಘನವಾಗುತ್ತದೆ. ಋಷಿಯ ಜೀವನವಂತೂ ಕಠೋರವಾದ ಈ ತಾಳ್ಮೆಯ ಪಥದಲ್ಲಿಯೇ ಸಾಗಬೇಕಾದುದು. ಅಲ್ಲಿ ಅವನು ಒಮ್ಮೆ ತಪ್ಪು ಹೆಜ್ಜೆಯಿಟ್ಟನೆಂದರೆ ಪುನಃ ಏಳ್ಗೆಯೆ ಇಲ್ಲ.

ತಾಳ್ಮೆಯುಳ್ಳವನನ್ನು ಯಾವಾಗಲೂ ಅನಿಷ್ಟವೂ ಹಾನಿಯೂ ಬಂದು ಕಾಡುತ್ತವೆ. ಅವನ ಸಭ್ಯತೆಯನ್ನು ಎಲ್ಲರೂ ದುರುಪಯೋಗ ಮಾಡಿಕೊಳ್ಳುತ್ತಾರೆ. ಆದರೆ ಅದೆಲ್ಲ ಕ್ಷಣಿಕವಾದುದು. ಮೇಘರಾಜನಿಗೆ ಒಡತನವೂ, ದಾಸಿಗ ದಾರಿದ್ರ್ಯವೂ ಎಂಬುದಿಲ್ಲ. ಪುಷ್ಪಗಳನ್ನು ವಸಂತಮಾಲಿನಿಯು ಬಿಡಿಸಿಕೊಂಡು ಹೋದಳೆಂದು ಬಳ್ಳಿಮಾಡ ಬಾಡಿ ಬೀಳಲಾರದು ಹಣ್ಣುಕಾಯಿಗಳನ್ನೆತ್ತಿ ಕೊಂಡರೆಂದು, ಚಿಗುರುಗಳನ್ನು ತರಿದರೆಂದು ಇಮ್ಮಾವು ಬಗ್ಗಲಾರದು. ತಾಳ್ಮೆಯ ತಾಯಿಬೇರಿನಲ್ಲಿ ಸಿರಿಸಂಪತ್ತು ಹುದುಗಿಕೊಂಡಿದೆಯೆಂಬುದನ್ನರಿತವನು ಹೆಜ್ಜೆ ಹೆಜ್ಜೆಗೆ ಬಂದ ಕಷ್ಟ ನಿಷ್ಠುರತೆಗಳನ್ನು ನಗು ನಗುತ್ತ ಸಹಿಸಿಕೊಂಡು ಪುಟವಿಟ್ಟ ಅಪರಂಜಿಯಂತೆ ತೇಜೋಮಯನಾಗಿ ಬೆಳಗಬಲ್ಲನು. ತಾಳ್ಮೆಯ ಊರುಗೋಲು ನಚ್ಚಿ ನಡೆದವನ ನೋಟಕ್ಕೆ 'ನೆಲದ

ಮರೆಯ ಸಿಥಾನ' 'ಭಾವದ ಮರೆಯ ಬ್ರಹ್ಮ' ಕಾಣಿಸುವುದು. ಒಳ್ಳೆದರ ಬಾಳು ತಾಳ್ಮೆಯ ಆರೈಕೆಯಲ್ಲಿಯೆ ಅರಳುವುದು.

ಸಹನ ಶೀಲನ ದಾರಿ ದೂರ. ಅವನನ್ನು ಪರೀಕ್ಷೆಗಳು ಪಣೆಗಿ. ಕೊಡುತ್ತವೆ. ನೆಳಲು ನೀರುಗಳೂ ಅವನ ಪಾಲಿಗೆ ಇಲ್ಲವಾಗುವ್ರ ದುಂಟು. ಜೀವನ ಯಾತ್ರೆಯೇ ಅಷ್ಟು ಘೋರವಾದುದು. ಅದನ್ನೆಲ್ಲವನ್ನು ಜಯಿಸಿ ಮುಂದಕ್ಕೆ ನಡೆವವನಿಗೆ ಸರ್ವಮಂಗಲವುಂಟಾಗುವದು. ಶೀಘ್ರ ಕೋಪಿಯಾದವನು ಅಸಂತೃಪ್ತಿಯನ್ನು ಸಹಿಸುವುದೇ ಇಲ್ಲ. ಅದರಿಂದಾಗಿ ಅವನು ತನಗಿಂತಲೂ ಮಿಗಿಲಾದ ಮುಂಗೋಪಿಗಳಿಂದ ಹಲ್ಲು ಮುರಿಸಿಕೊಂಡು ವಿಷದ ಚೀಲದಿಂದ ವಿಂಗಡಿಸಿದ ಹಾವಿ ನಂತಾಗುತ್ತಾನೆ. ಅದೇ ತಾಳ್ಮೆಯುಳ್ಳವನನ್ನು ಅವರು ಮುಟ್ಟಲು ಬಂದರೆ ಹೇಳಹೆಸರಿಲ್ಲದಂತಾದಾರು. ಎಂತಲೇ ಡ್ರಾಯಿಡನ್‌ನೆಂಬ ಪ್ರಖ್ಯಾತ ಆಂಗ್ಲ ಲೇಖಕನು ಹೇಳಿಥ್ಹಾನೆ: ಹುಷಾರಿ! ಸಹನ ಶೀಲನ ತಾಳ್ಮೆಯನ್ನು ಎಂದೆಂದಿಗೂ ಕೆಣಕಬೇಡ!

'ತಾಳಿದವನು ಬಾಳಿಯಾನು' ಎಂಬ ಗಾದೆಯ ಮಾತೇ ಇರುವುದು. ಆ ತಾಳ್ಮೆಯ ಸಸಿಯನ್ನು ಮೊದಲಿನಿಂದಲೂ ಎಚ್ಚರದಿಂದ ಬೆಳಸಬೇಕು. ತಾಯಿಯೇ ನಮ್ಮ ಬಾಳಿನ ಉದ್ಯಾನದಲ್ಲಿ ಮೊದಲು ಆ ಸಸಿಯನ್ನು ಊರಿ ನೀರೆರೆದು ಪೋಷಿಸುವ ತೋಂಟಗಿತಿ. ಬಾಲ್ಯದಲ್ಲಿಯೆ ಬಾಗದ ಸಸಿ ಮರವಾದ ಮೇಲೆ ಎಂದಿಗೂ ಬಾಗಲಾರದು. ತಾಯಿ ಮಗನಿಗೆ ಅಂತಹ ಶಿಕ್ಷೆಯನ್ನು ಕೊಡಬೇಕು. ಹಸುಳೆಯನ್ನು ಒಳ್ಳೆಯವರ ಸಹವಾಸದಲ್ಲಿಯೆ ಅರಳಿಸಬೇಕು. ಅವನ ಸಹವಾಸ, ಚಟ, ಓದು ಮೊದಲಾದವು ಹಸನವಾಗಿರುವಂತೆ ನೋಡಿಕೊಳ್ಳಬೇಕು. ಅವನ ದೈನಂದಿನ ಕಾರ್ಯ ಮೃದು ಮಧುರವಾಗಿರುವಂತೆ ಪೂರ್ಣ ಜಾಗೃತಿಯನ್ನು ತಾಯಿಯಾದವಳು ಹೊರಬೇಕು. ಒಲುಮೆ, ಭಕ್ತಿ, ಶ್ರದ್ಧೆ ವಿಶ್ವಾಸಗಳು ಮಗುವಿನ ಬಾಳಿನಲ್ಲಿ ಬೆರೆತು ಬರಬೇಕು. ತಾಳ್ಮೆಯ ಚಿತ್ರನ್ನು ಫಲದ್ರೂಪವಾಗಿರಿಸುವದಕ್ಕೆ ಎಳಮೆಯೊಂದೇ ಫಲವತ್ತಾದ ಕ್ಷೇತ್ರ. ಅಲ್ಲಿ ಕರಿಕೆ ನಟ್ಟುಗಳಿರುವುದಿಲ್ಲ. ನಿರ್ಮಲ ಗಂಗೆ ಸದಾವ ಕಾಲ ಓತಪ್ರೋತವಾಗಿ ಹರಿದು ತಿಳಿಮಣ್ಣನು ಅಲ್ಲಿ ಹರಡಿರುವಳು.

ಆದುದರಿಂದ ಬಾಲ್ಯದ ಬನಸಿರಿಯನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ರಕ್ಷಿಸಬೇಕು.

ತಾಳ್ಮೆಯನ್ನು ನೋಡಿ ರೋಷವು ಅಪಹಾಸಗೆಯ್ಯುತ್ತದೆ. ಚಾಂಚಲ್ಯವು ಕೈ ಚಪ್ಪಾಳೆ ಹೊಡೆದು ನಗುತ್ತದೆ. ದುಃಖವು ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಳ್ಳುತ್ತದೆ. ಆದರೆ ಅದೆಲ್ಲ ದಿನಮಣಿಯನ್ನು ನೋಡಿ ಮಂಜಿನ ಮಾಲಿನಕ್ಕಂತೆಯೆ ಹೊರತು ಇನ್ನೇನೂ ಅಲ್ಲ.

ಧೈರ್ಯ ಸಾಹಸಾದಿಗಳು ಬೆಂಬಲಿಸಿದ್ದ ತಾಳ್ಮೆಗೇ ಮಾತ್ರ ಘನತೆಯುಂಟು. ಕೈಲಾಗದ ಹೇಡಿ ಸಹನಶೀಲನಾಗುವುದರಲ್ಲಿ ಅರ್ಥವೇಇಲ್ಲ. ಅಂತಹ ತಾಳ್ಮೆಯನ್ನು ನಾನು ಎಂದಿಗೂ ಸ್ವಾಗತಿಸಲಾರೆನು. ಅಭಿಮಾನಧನನಾದವನ ತಾಳ್ಮೆಗೆ ತೇಜಸ್ಸುಂಟಾಗುವುದು. ಅವನು ನೋಡಿ ನೋಡಿ ಬಿಟ್ಟ ಗುರಿ ಎದೆಯನ್ನೇ ಸೀಳಿ ಹಾಕುವುದು.

ಮನುಷ್ಯನ ಜೀವನವೆ ಅಪರಿಪೂರ್ಣ. ಅಲ್ಲಿ ದುಡುಕು ಸಿಟ್ಟುಗಳಿಗೂ ತುಸು ಇಂಬಿದೆ. ಚಂದ್ರಮನೇ ಕಲಂಕರಹಿತನಾಗಿಲ್ಲವೆಂದಮೇಲೆ ನಿನಗೆ ದುಃಖ ಬೇಡ. ತಾಳ್ಮೆಯ ಪ್ರಶ್ನೆ ಬಂದಾಗ ದೇವರ ಬೆನ್ನಿಗೆ ಬೀಳು, ಋಷಿಯ ದಾರಿಯನ್ನು ತುಳಿ, ಮನಸ್ಸಿನ ದುಶ್ಚಟ ಹವ್ಯಾಸಗಳನು ಹತ್ತಿಕ್ಕು, ಚಪಲ ಇಂದ್ರಿಯಗಳನ್ನು ನಿಗ್ರಹಿಸು. ಆಗ ತಾಳ್ಮೆಯೆ ನಿನ್ನನ್ನು ಹಿಂಬಾಲಿಸುವುದು.

ಕೀರ್ತಿ

ಕೀರ್ತಿ ಹಾಲಿನಂತೆ ಬೆಳ್ಳಗಿರುತ್ತದೆಂದು ಕವಿಯು ಬಣ್ಣಿಸಿದ್ದಾನೆ. ಬೆಳ್ಳಗಿರುವುದೆಲ್ಲ ಹಾಲಲ್ಲ. ಸರಾಯಿಯೂ, ಲಿಕ್ಕರೂ ಹಾಲೂ ಬೆಳ್ಳಗಿರುತ್ತವೆ. ಅವುಗಳ ಸೇವನೆಯಿಂದ ಚಿತ್ತ ಭ್ರಮೆಯೂ, ದೃಷ್ಟಿ ಮಾಂದ್ಯವೂ ಉಂಟಾಗುವದು. ಅದುದರಿಂದ ಕೀರ್ತಿವಂತನು ಹುಚ್ಚನೂ ಕುರುಡನೂ ಆಗಿರುತ್ತಾನೆ. ಪ್ರಿಯ ಓದುಗ, ಕೀರ್ತಿಯ ಹಂಬಲದಿಂದ ನೀನು ಹಾಳಾಗದಿರು.

ಕೀರ್ತಿ ಹುಚ್ಚು ನಾಯಿ. ಅದಕ್ಕೆ ಯಾವಾಗಲೂ ತನ್ನದೇ ಹಂಬಲ. ಹುಡುಗರು ಕಲ್ಲಿನಿಂದ ಹೊಡೆದೋಡಿಸಿದರೂ ಮತ್ತೂ ಮನೆಯ ಬಾಗಿಲ ಹತ್ತಿರವೇ ಬಂದು ನಿಲ್ಲುತ್ತದೆ. ಹೊಟ್ಟೆಗೆ ಅನ್ನ ಹಾಕಿದವರನ್ನೇ ಅದು ಕಚ್ಚುತ್ತದೆ. ಅಂತ ನಾಯಿಯನ್ನು ಮನೆಯ ಕಾವಲಿಗಾಗಿ ಕಟ್ಟಿ ಕೊಂಡವನು ತನ್ನ ಅಸ್ತಿತ್ವವನ್ನು ಹೊಡೆದೋಡಿಸಲು ತಾನೇ ಕಾರಣನಾಗುತ್ತಾನೆ. ಪಾಪ! ಕೀರ್ತಿಗಾಗಿ ದಿವಾರಾತ್ರಿ ಒಂದೇ ಸಮನೆ ದುಡಿಯುತ್ತಾನೆ. ಜನರ ನಿಂದೆಗಳನ್ನು ಗಮನಕ್ಕೆ ತಾರದೆ ಸ್ಥಿತಪ್ರಜ್ಞನಂತೆ ಹೋರಾಡುತ್ತಾನೆ. ದಾರಿಯಲ್ಲಿ ಬಂದ ಎಡರು ತೊಡರುಗಳನ್ನು, ದುಃಖ ದುಗುಡಗಳನ್ನು ಲೆಕ್ಕಿಸದೆ ಕಣ್ಣು ಮುಂದಿನ ಹೆಚ್ಚಳವನ್ನೇ ನಂಬಿ ಕಾರ್ಯ ಸಾಗಿಸುತ್ತಾನೆ. ಹೀಗೆ ಹೊರಗಡೆಯಲ್ಲಿ ಕೀರ್ತಿಯ ಸಂಪಾದನೆಗಾಗಿ ಶ್ರಮಿಸಿ ವಿಶ್ರಾಂತಿಗೆಂದು ಮನೆಯ ಕಡೆಗೆ ತಿರುಗಿ ಬರುವ ಹೊತ್ತಿನಲ್ಲಿ ತಾನು ನೆಚ್ಚಿದ ಹುಚ್ಚು ನಾಯಿಯೇ ಹಿಂದಿನಿಂದ ಜಪ್ಪಿಸಿ ಬಂದು ಬೆಂಬದವನ್ನೇ ಹಿಡಿದು ಕೆಡವುತ್ತದೆ. ಹುಚ್ಚು ನಾಯಿಯ ಕಚ್ಚಿಗೆ ಔಷಧಿಯೇ ಇಲ್ಲ. ಅವನು ಬಿಟ್ಟ ನೆಲ ಹಿಡಿದೇ ಕೊನೆಯವರೆಗೂ ನರಳ ಬೇಕಾಗುವುದು.

ಕೀರ್ತ್ಯಂಗನೆಯ ಇನ್ನೊಂದು ಹೆಸರು ಚಂಚಲೆ. ಹೆಣ್ಣನ್ನು ಚಂಚಲೆಯೆಂದು ಕರೆದವನು ಅವಳ ಕುಡಿನೋಟಕ್ಕೆ ಒಳಗಾಗಿರಬೇಕು. ಕೀರ್ತಿಯ ಪ್ರಸಾದಕ್ಕೆ ಪಾತ್ರನಾಗಲೆಳಸುವವನು ಗಾಳಕ್ಕೆ ಸಿಕ್ಕ ಮೀನು.

ಅವಜ್ಞೆ, ಆದರಗಳ ಇಕ್ಕಟ್ಟಿನಲ್ಲಿ ಸಿಲುಕಿ ತೊಳಲಾಡುವನು. ಹೆಣ್ಣು ಮತ್ತು ಕೀರ್ತಿ ಇಬ್ಬರೂ ಸವತಿಯರು. ಸವತಿಯರನ್ನು ಪಡೆದವನ ಬಾಳಿನಲ್ಲಿ ನೆಮ್ಮದಿಯೇ ಇರುವುದಿಲ್ಲ. ಅವನ ಅಂತಃಪುರದಲ್ಲಿ ಕಾವಲುಗಾರನೇ ಅಶಾಂತಿ ದೂತ.

ಈ ನೆಲದ ಮೇಲೆ ಬೇರು ಬಿಟ್ಟ ಸತ್ಕಾರ್ಯದ ಬಳ್ಳಿ ಸ್ವರ್ಗದಲ್ಲಿಯೇ ಕೀರ್ತಿಯ ಪುಷ್ಪವನ್ನು ಬಿಡುತ್ತದೆ. ಮರ್ತ್ಯ ಲೋಕದ ಮೇಲೆ ಮಘಮಘಿಸುವ ಹುವ್ವುಗಳಿಗೆಲ್ಲ ಸಂಧ್ಯಾ ಕಾಲವೆ ಅಂತಿಮ ಕಾಲ. ಇಲ್ಲಿ ಅರಳುವ ಕೀರ್ತಿಕೇತಕಿಯ ಮರೆಯಲ್ಲಿ ವಿಷದ ಹಾವುಗಳುಂಟು. ಹುವ್ವಿನ ಪರಿಮಳ ಬಯಸಿ ಹತ್ತಿರ ಹೋದವನು ಹಾವಿನ ದಾಳಿಗೆ ಗುರಿಯಾಗ ಬೇಕಾಗುವುದು. ಸತ್ಕೃತಿಗೆ ದುರ್ಗತಿಯ ಸಂಗ ಯಾವಾಗಲೂ ತಪ್ಪಿದ್ದಲ್ಲ. ಕೀರ್ತಿಯು ಸುಜನರನ್ನೂ, ದುರ್ಜನರನ್ನೂ ಏಕಕಾಲಿಕವಾಗಿಯೇ ಆಶ್ರಯಿಸಿ ತನ್ನ ಚಾಂಚಲ್ಯದ ಮಿಂಚನ್ನು ಬೀರಿ ಇಬ್ಬರ ಕಣ್ಣಿನಲ್ಲಿಯೂ ಕತ್ತಲೆಯನ್ನುಂಟು ಮಾಡುತ್ತದೆ. ಪರಿಮಳದ ಅಮಲಿಗೆ ಸಿಲುಕಿ ಕತ್ತಲಲ್ಲಿ ತೊಳಲುತ್ತ ಅನ್ಯಾಯಕ್ಕೆ ತುತ್ತಾಗದಂತೆ ಎಚ್ಚರಿರುವುದು ನಿನ್ನನ್ನೇ ಕೂಡಿದೆ.

ಲೋಕದ ನಡತೆಗನುಸಾರವಾಗಿ ಕೀರ್ತಿಯು ತೋಳನೆರವಿದ್ದ ವಂಚಕನನ್ನೇ ಅನುಸರಿಸುತ್ತದೆ. ಕವಿಗಳಿಗೂ, ದಂಡನಾಯಕರಿಗೂ ಈ ಮಾತು ಅನ್ವಯಿಸುತ್ತದೆ. ಕೀರ್ತಿಯನ್ನು ಸಂಪಾದಿಸಿಯೇ ತೀರುವೆನೆಂಬ ಹಟತೊಟ್ಟ ಲೇಖಕನು ತೋಳನ್ನು ಏರಿಸಿ, ಪಂಚೆಯನ್ನು ಬಿಗಿದು ದಂಡನಾಯಕನಂತೆ ರಣರಂಗಕ್ಕೇ ಇಳಿಯಬೇಕಾಗುವುದು. ಭಟ್ಟಂಗಿಗಳ ಹಿಮ್ಮೇಳನ ಕಟ್ಟಿಕೊಂಡು, ಚತುರಂಗ ಬಲವನ್ನು ನಿಯತಸ್ಥಾನದಲ್ಲಿರಿಸಿಕೊಂಡು ಮತ್ತಗಜದ ಮೇಲೆ ಕೀರ್ತಿಪಟದಿಂದ ಅಲಂಕೃತವಾದ ಅಂಬಾರಿಯ ಮೇಲೆ ಕುಳಿತು ನ್ಯಾಯಾನ್ಯಾಯಗಳನ್ನು ಲಕ್ಷಿಸದೆ ಬಾಣಗಳನ್ನು ಒಂದೇ ಸವನೆ ಎಸೆಯಬೇಕಾಗುವುದು. ಮೋಸ ವಂಚನೆಗಳಿಂದಲೆ ವೈರಿ ಹತನಾಗುವನೆಂಬುದನ್ನು ಜಯೋದ್ಧಾಮನು ಬಲ್ಲನು. 'ಅತ್ವತ್ಥಾಮೋಹತಃ' ಎಂಬ ಮುಷ್ಟ ಮಂತ್ರವೇ ಅವನ ಪಲ್ಲವಿ. ಆಡಂಬರ, ಅಬ್ಬರ ಪ್ರಚಾರಗಳ ಬಲದಿಂದಲೆ ಕೀರ್ತಿಯನ್ನು ಅವನು

ವಶಪಡಿಸಿಕೊಂಡು ಮೆರೆಯುವನು. ಅವನ ನೀರಗುಳ್ಳೆ ಎಷ್ಟು ಹೊತ್ತಿನವರೆಗೆ ಕಾಲ ಪ್ರವಾಹದ ಮೇಲೆ ಓಡೀತು?

ನೆಳಲು ಬೆಳಕಿನಂತೆಯೆ ಕೀರ್ತಿಯ ಗತಿ. ಅದನ್ನು ನಂಬಿದ ಪಯಣಿಗನಿಗೆ ಗತಿಯೆ ಇಲ್ಲ. ಆಗಿನ ಬೆಳಕು ಈಗಿಲ್ಲ. ಈಗಿದ್ದ ನೆಳಲು ಇನ್ನಷ್ಟು ಹೊತ್ತಿಗಿರುವುದಿಲ್ಲ. 'ಲೋಕಕ್ಕೆ ಉಂಟಾದ ಕತ್ತಲು ಜ್ಞಾನಿಗೆ ಬೆಳಕು. ಅವನ ಪಾಲಿಗಿದ್ದ ಬೆಳಕು ಪ್ರಪಂಚದ ಕಣ್ಣಿಗೆ ಕತ್ತಲು' ಎಂದು ಗೀತಾಕಾರನು ಹೇಳಿರುವನು. ಕೀರ್ತಿಯೆ ಚಿರವಾದ ಬೆಳಕು, ಇನ್ನು ಕತ್ತಲಿಲ್ಲವೆಂದು ಹೇಳುವವನು ಗೂಗೆಯೆ ಸರಿ.

ಪ್ರಪಂಚದ ಆದಿಯಿಂದಲೂ ಕೀರ್ತಿ ತನ್ನ ಕಣ್ಣು ಮುಚ್ಚಾಟವನ್ನು ನಡಸಿಯೆ ಇದೆ. ಕವಿಗಳನ್ನು ವಂಚಿಸಿ ಕೃತಿಗಳನ್ನು ಕೊಳ್ಳೆಗೈಯುತ್ತಲೂ, ಋಷಿಗಳನ್ನು ಚಂಚಲಗೊಳಿಸಿ ತಪಸ್ಸಿನ ಪ್ರಭಾವವನ್ನು ಹಿಂಗಿಸುತ್ತಲೂ, ಸೇನಾನಿಗಳನ್ನು ಮರುಳು ಮಾಡಿ ಸಾಮ್ರಾಜ್ಯಗಳನ್ನು ಮಣ್ಣುಗೂಡಿಸುತ್ತಲೂ ಕೀರ್ತಿಯು ತನ್ನ ಕುಟಿಲ ನೀತಿಯನ್ನು ಮುಂದುವರಿಸುತ್ತಲೆ ಇದೆ. ಕೀರ್ತ್ಯಂಗನೆಯ ಕೈವಾಡದಲ್ಲಿ ಕಾರಸ್ಥಾನ, ನೋಟದಲ್ಲಿ ಚಾಂಚಲ್ಯ, ಹೃದಯದಲ್ಲಿ ಹಾಲಾಹಲ, ತುಟಿಯಲ್ಲಿ ಜೇನು ಉಂಟು. ತಾಯ್ತನದ ವೇಷ ತಳೆದು ಬಂದ ಕೀರ್ತಿ ಪೂತನಿಯೆ ಅಹುದು.

ತತ್ತ್ವೋತ್ತಮನಾದ ಸಾಕ್ರೆಟೀಸನು 'ಧೈರ್ಯಶಾಲಿಯ ಕೃತಿಯೇ ಪುಷ್ಪ. ಸೂಸುವ ಪರಿಮಳವೇ ಕೀರ್ತಿ' ಎಂದು ಹೇಳಿ ನಮ್ಮ ಮಾರ್ಗವನ್ನು ಸುಗಮ ಮಾಡಿದ್ದಾನೆ. ಧೀರನು ಒಮ್ಮೆಲ್ಲ ಒಮ್ಮೆ ಸೋಲಲೇ ಬೇಕು. ಸೋತವನೆ ಗೆಲವಿನ ಶಿಖರವನ್ನು ಮಾತ್ರ ಏರಬಲ್ಲನು. ಕಷ್ಟನಷ್ಟಗಳನ್ನನುಭವಿಸಿ ಕೊನೆಗೊಮ್ಮೆ ಘನತೆಯ ಪಟ್ಟವನ್ನೇರಿದವನ ಮನಸ್ಸು ಯಾವುದಕ್ಕೂ ಹೊಯ್ದಾಡುವುದಿಲ್ಲ. ನೀರು ಬೆಂಕಿಗಳೊಳಗಿಂದ ಹಾಯ್ದು ಬಂದ ಚಿನ್ನದ ಗಟ್ಟಿ ಎಂದಿಗೂ ಕಾಂತಿಹೀನವಾಗದು. ಕೀರ್ತಿಯ ಸೆರಗನ್ನು ಹಿಡಿಯಬಯಸುವವನು ಮೊದಲು ಸಾವು ನೋವುಗಳ ಮಧ್ಯದಿಂದ ಪಾರಾಗಿ ಬರಲಿ.

ನನಗೆ ಕೀರ್ತಿಯಲ್ಲಿ ನಂಬುಗೆಯೇ ಇಲ್ಲ. ಸಾವಿನ ಅಂಚಿನಲ್ಲಿ ನಿಂತು ಮಿನು ಮಿನು ಬೆಳಗುವ ಅದರ ಬತ್ತಿಯನ್ನು ಕಾಲೊಳಿಸುತ್ತೇನೆ ಆಗ

ಕಂಡರೆ ಕಾಣಲಿ. ಇಲ್ಲದಿದ್ದರೆ ಬಿಡಲಿ. ಈಗಿರುವ ಕಾಲವೆಲ್ಲ ಧನಾಂಧಕಾರದಿಂದ ಕವಿದು ಹೋಗಿದೆ. ತಪ್ಪಿಗಾಗಿ ಪ್ರಾಯಶ್ಚಿತ್ತವನ್ನು ಚಣಚಣಕ್ಕೂ ಬೇಡಿ, ಆ ನಂತರವೇ ಪುನಃ ಅಪರಾಧಗಳನ್ನು ಮಾಡಿ ಜೀವ ನೊಂದು ಬೆಂದಿದೆ. ಬದುಕಿನಲ್ಲಿ ಕೀರ್ತಿಯು ಹಾವಳಿಯಿಂದ ಹಾಸಿಯಾಗುವುದನ್ನು ಮನಗಂಡಿದ್ದೇನೆ. ಸಾವಿನಲ್ಲಿ ಅದರ ಗೆಲವಿರುವುದನ್ನು ಋಷಿಗಳ ಜೀವನದಿಂದರಿತುಕೊಂಡು ಬಿಡುಗಡೆಯ ದಿನವನ್ನು ಕೋರುತ್ತಿದ್ದೇನೆ. ನನ್ನ ಮಾತಿನಲ್ಲಿ ವಿಶ್ವಾಸವಿದ್ದರೆ ನೀನೂ ಹಾಗೆಯೇ ಮಾಡು.

ಮಿಥ್ಯಾಚಾರ

ಕಳ್ಳನನ್ನು ನಂಬಬಹುದು, ಮಿಥ್ಯಾಚಾರಿಯನ್ನು ನಂಬಲಾಸಲ್ಲ. ಮಿಥ್ಯಾಚಾರಿಯ ಮನದ ಹಿಂದುಗಡೆಯಲ್ಲಿ ದೆವ್ವನ ಕೈವಾಡವಿರುತ್ತದೆ. ಯಾವಾಗಲೂ ಪರರ ವಿನಾಶವನ್ನು ಬಗೆಯುವುದೇ ಅವನ ಸ್ವಭಾವ. ಹೊತ್ತಿಗೆ ತಕ್ಕ ಬಣ್ಣ ಬದಲಿಸುವುದೇ ಮಿಥ್ಯಾಚಾರಿಯ ಚಾಳಿ. ನೋಟಕ್ಕೆ ಅವನು ಸದಾಚಾರಿ, ಆಡಿಕೆಯಲ್ಲಿ ಸತ್ಯವಂತ, ಇರವಿನಲ್ಲಿ ಸನ್ಯಾಸಿ. ಆದರೆ ಅದೆಲ್ಲ ಬಕಧ್ಯಾನ, ಮೊಸಳೆಯ ಕಣ್ಣೀರು, ಹುಲಿಯ ಸನ್ಯಾಸ. ತತ್ವ ಅವನ ಪಾಲಿಗೆ ಬದನೆಯಕಾಯಿಯ ಪುರಾಣ. ಶಾಸ್ತ್ರದ ಗಂಟು ಅವನಿಗೆ ತಿಲಕಾಷ್ಠಮಹಿಷಬಂಧನ. ಮಿಥ್ಯಾಚಾರಿಯ ಗೋರಿಯ ಬಳಿಗೂ ನೀನು ಸುಳಿಯಬೇಡ. ಅದರ ಹತ್ತಿರ ನೀನು ಹೋಗುವಾಗ ಯಾರಾದರೂ ಆಕಸ್ಮಾತ್ತಾಗಿ ಅವನು ಜೀವಿಸಿದ್ದಾಗ ಪಟ್ಟ ಸುಖದ ಕತೆಯನ್ನು ಹೇಳಿ ನಿನ್ನ ಮನಸ್ಸನ್ನು ಕಲುಷಗೊಳಿಸಿಯಾರು.

ಮಿಥ್ಯಾಚಾರಕ್ಕೆ ಈ ವ್ಯಾವಹಾರಿಕ ಲೋಕದ ಜನರ ಬೆಂಬಲ ಸದಾಕಾಲವೂ ಇರುತ್ತದೆ. ಜಾತಿ ಮತ ಪಂಥಗಳ ಮೇಲ್ವಿಚಾರಣೆ ಮಾಡುವ ಮಠಾಧೀಶರೇ ಮಿಥ್ಯಾಚಾರದ ತವರು ಮನೆ. ಅವರ ಬಾಯಿಯಲ್ಲಿ ವಚನೋಪನಿಷತ್ತು, ಕೈಯಲ್ಲಿ ಕಮಂಡಲು ರುದ್ರಾಕ್ಷಿ, ನಾಲಗೆಯಲ್ಲಿ ಅಮೃತ- ಇದು ಅವರ ಧರ್ಮದ ಬುರುಕೆ. ಆದರೆ ಅವರ ಹೃದಯದಲ್ಲಿ ಕಾಲಕೂಟವುಂಟು, ಮೈ ತುಂಬ ಸುಂಕುರೋಗವುಂಟು. ಸಮಾಜಕ್ಕೆ ಸಮಾಜವನ್ನೇ ನುಂಗಿ ನೊಣೆಯುವ ಕಾಲಕೂಟದ ಉಗ್ರಾಣ ಅವರ ಮಠ. ಉಪದೇಶದ ಮಾತಿಗೆ ಎಂದಿಗೂ ನೀನು ಕಿವಿಗೊಡಬೇಡ. ಏಕೆಂದರೆ ಉಪದೇಶದ ಹಿನ್ನೆಲೆಯಲ್ಲಿ ಮಿಥ್ಯಾಚಾರವೆಂಬ ಅಲಗಿನ ಮೊನೆಯಿದೆ. ಅದನ್ನು ತುಸು ಮುಟ್ಟಿದರೆ ತೀರಿತು, ನಿನ್ನ ದೇಹವೆಲ್ಲ ವಿಷಪೂರಿತವಾಗುವುದು.

ಸವಿ ಮಾತನಾಡುವವರೂ, ಮಾತು ಮಾತಿಗೂ 'ಹೂಂ' ಗೊಡುವವರೂ ಕೃತಘ್ನರಿರುತ್ತಾರೆ. ಮುಂಜಾವಿನಿಂದ ಸಂಜೆಯವರೆಗೂ

ನಿನ್ನೊಡನೆ ಕೂಟ ಕುಣಿತಗಳಲ್ಲಿ, ಊಟ ಉಪಚಾರಗಳಲ್ಲಿ ಅವರು ಸಮರಸವಾಗಿರುತ್ತಾರೆ. ಅದೇ ರಸಲೋಲುಪತೆಯನ್ನು ಪಡೆದು ಮನೆಗೆ ತಿರುಗುವ ಮುನ್ನ ನಿನ್ನನ್ನು ನಿನಗೆ ತಿಳಿಯಗೊಡದಂತೆಯೇ ಇರಿದು ಹೋಗುತ್ತಾರೆ. ಆಗ ನಾವು ಒಮ್ಮೆಲೆ ಬಂದು ಅಪರಿಸುವುದಿಲ್ಲ. ಇಂಚು ಇಂಚಿನಂತೆ ನೀನು ಸಾಯುವ ಹಾಗೆ ಅವರು ಜಾಗರೂಕತೆ ವಹಿಸುತ್ತಾರೆ. ಒಮ್ಮೆಲೆ ಸತ್ತರೆ ತಮ್ಮ ಬಣ್ಣ ಬಯಲಿಗೆ ಬಂದೀತೆಂಬುದರ ಎಚ್ಚರ ಅವರಿಗೆ ಪೂರ್ತಿಯಾಗಿರುತ್ತದೆ ಮಿಥ್ಯಾಚಾರದ ಬಟ್ಟಲಲ್ಲಿ ಪಾಪೌಷಧಿಯನ್ನು ಹಾಕಿ ಕ್ರಮಬದ್ಧವಾಗಿ ಕೊಡುವುದರಲ್ಲಿ ಅವರು ಅತಿ ಜಾಣರು. ನಗುತ್ತಲೆ ಅವರು ಕಾರ್ಯ ನಡಸುತ್ತಾರೆ. ಕಾರ್ಯ ಕೊನೆಗೊಂಡ ಬಳಿಕ ಎಲ್ಲರಿಗಿಂತಲೂ ಮುಂದಾಗಿ ಬಂದು ನಡೆದು ಹೋದ ದುಃಖಕ್ಕೆ ಮರುಗುತ್ತಾರೆ. ಓ, ಇಳೆಯ ಮೇಲೆ ಮಿಥ್ಯಾಚಾರಿಯನ್ನು ಕಳುಹಿಸಿ ಶಿವನು ತನ್ನ ಪಾವನ ಸೃಷ್ಟಿಯನ್ನೆ ಅಪವಿತ್ರಗೊಳಿಸಿದನಲ್ಲ! ಎಂತಹ ಕೇಡು!

ಸೂಳೆಗೆ ತನ್ನ ಉದ್ಯಮದಲ್ಲಿಯೇ ಸುಖವುಂಟು. ಗರತಿಯರನ್ನು ಕಂಡರೆ ಅವಳಿಗೆ ಆಗುವುದೆ ಇಲ್ಲ. ಮಿಥ್ಯಾಚಾರಿಗೆ ಮಿಥ್ಯಾಚರ್ಯೆಯಲ್ಲಿಯೆ ಸೊಗವುಂಟು. ಸತ್ಯವಂತರನ್ನು, ಸರಳ ಜೀವಿಗಳನ್ನು ನೋಡಿದರೆ ಅವನಿಗೆ ಕಡು ದುಃಖವಾಗುತ್ತದೆ. ಬಣ್ಣದ ಕನ್ನಡಕ ಹಾಕಿದವನಿಗೆ ಜಗತ್ತೇ ರಂಗುರಂಗಾಗಿ ತೋರುವಲ್ಲಿ ಹೊಸತೇನಿಲ್ಲ. ಮಿಥ್ಯಾಚಾರಕ್ಕೆ ತನ್ನದೇ ಆದ ಬೆಳಕುಂಟು, ಬಯಲುಂಟು. ಅಲ್ಲಿ ಸಂಚರಿಸುವ ಹೀನ ಮಾನವನಿಗೆ ಅವನ ಮಾನಕ್ಕೆ ತಕ್ಕಂತೆ ಶ್ರೇಯವುಂಟು. ಅದೇ ಅವನಿಗೆ ನರಮಾನ. ಕಾಗೆಯನ್ನು ನೋಡಿ ಕಲಹಂಸ ನಕ್ಕರೆ ಕಲಹಂಸನನ್ನು ನೋಡಿ ಕಾಗೆ ನಗುವುದು ಸ್ವಾಭಾವಿಕವೇ ಆಗಿದೆ. ಮಿಥ್ಯಾಚಾರಕ್ಕೆ ಯಾವಾಗಲೂ ಇಂತಹ ಕುತರ್ಕ ಶಾಸ್ತ್ರದಲ್ಲಿ ಸಮ್ಮತಿಯಿರುವುದರಿಂದಲೆ ಅದಕ್ಕೆ ಅನುಯಾಯಿಗಳು ಹೆಚ್ಚು.

ಪ್ರಥಮ ಮಿಥ್ಯಾಚಾರಿಯೇ ಮಾನವನು. ಅವನ ಇತಿಹಾಸವೆ ಇದನ್ನು ಸಾರಿ ಹೇಳುತ್ತದೆ. ಹೆಣ್ಣನ್ನು ಚಂಚಲೆಯೆಂದು ಕರೆದ ಗಂಡಸು ಏನು ಸನು? ಲಾಭ, ಕೀರ್ತಿ, ಸುಖ, ಪುಣ್ಯ ಮುಂತಾದ ಶ್ರೇಯಸ್ಸಿಗೆ

ಸಾತೊರೆದ ಮಾನವತೆಯು ತನ್ನ ಹಿಂದೆ ಮಿಥ್ಯಾಚಾರದ ಇತಿಹಾಸವನ್ನು ನಿರ್ಮಿಸಿದೆ. ಯುದ್ಧದ ಘಾಳಾದಾಳಿ, ರಾಜಕೀಯದ ದಂಡಾದಂಡಿ ಇಂತಿವೆಲ್ಲ ಆಸೆ ಅಭಿಷ್ಟಗಳು ಮಾನವನಲ್ಲಿ ಮನೆಮಾಡಿಕೊಂಡಿರುವ ವರೆಗೆ ಮಿಥ್ಯಾಚಾರ ಅಳಿಯಲಾರದು. ಅವನು ಎಷ್ಟೇ ತತ್ತ್ವೋಪದೇಶ ಮಾಡಲಿ, ಎಷ್ಟೇ ನ್ಯಾಯನಿಷ್ಠನಿರಲಿ, ಅವೆಲ್ಲವುಗಳ ಬೆಂಬಲಕ್ಕಾಗಿ ಪಿಶಾಚಿಯ ಮನೋವೃತ್ತಿ ಇದ್ದೇ ಇರುವುದು. ಹೊಸ ವೇಷ ತಳೆದು ಬಂದ ರಕ್ಕಸಿಯನ್ನು ಹಿಂಬಾಲಿಸಲಾದೀತೆ!

ಎಂತಹ ಅಪರಾಧ ಮಾಡಿದವನು ಪ್ರಾಯಶ್ಚಿತ್ತ ಬೇಡಿದರೆ ಅವನನ್ನು ಕ್ಷಮಿಸಲು ಹಲವು ಕಾರಣಗಳುಂಟು. ಆದರೆ ಮಿಥ್ಯಾಚಾರಿಯನ್ನು ಮನ್ನಿಸಲು ಯಾವ ನ್ಯಾಯ ಸಮಿತಿಗೂ ಅಧಿಕಾರವಿಲ್ಲ. ಏಕೆಂದರೆ ಬುದ್ಧಿಪೂರ್ವಕವಾಗಿಯೆ ಅವನು ಪಾಪಕ್ಕೆ ಕೈ ಹಾಕುತ್ತಾನೆ. ಅವನಿಗೆ ಪಶ್ಚಾತ್ತಾಪದ ಹಂಗೇ ಇರುವುದಿಲ್ಲ. ಅಂತಹನಿಗೆ ಮನ್ನಣೆ ತೋರುವುದೂ, ಗಾಯಮಾಡಿದ ಘಟಸರ್ಪವನ್ನು ಕೊಲ್ಲದೆ ಬಿಡುವುದೂ ತಪ್ಪಾದೀತು. ಮಿಥ್ಯಾಚಾರದ ಸಸಿಗೆ ಹಾಲೆರೆದರೂ ಅದು ಬಿಡುವುದು ವಿಷದ ಫಲವನ್ನೆ. ಅದರ ಬೀಜವನ್ನು ನೀನು ಎಲ್ಲಿಯಾದರೂ ಕಂಡರೆ ಮೊದಲು ಅದನ್ನು ಸುಟ್ಟುಹಾಕಿ ನಂತರ ಮಾತನಾಡು.

ಹಣ

ಹಣವು ಮನುಷ್ಯನ ಬೆಲೆಯನ್ನು ನಿರ್ಧರಿಸುವ ಅಳತೆಗೋಲು. ಹಣವನ್ನು ಕೊಟ್ಟು ನೋವಿದವನಿಗೂ, ಬೇಡಿ ನಿಂತವನಿಗೂ ಈ ಮಾತಿನ ಅರ್ಥ ಸಹಜವಾಗಿ ಹೊಳೆಯುವುದು. ಸಾಲಗಾರನ ಬಾಳು ಕೀಡೆ ಹತ್ತಿದ ಸಸಿನದಂತಿರುವುದು. ಸಾಲಕೊಟ್ಟವನ ಮನಸ್ಸು ಹಾವಿನ ಹೇಳಿಗೆಯಂತಿರುವುದು. ನಾಕ ನರಕಗಳಿಗಿರುವ ಸ್ಥಿತ್ಯಂತರವನ್ನು ಹಣವೇ ಸೃಜಿಸಿತು. ಸ್ವರ್ಗದಲ್ಲಿ ಹಣದ ಕೈವಾಡವಿಲ್ಲ. ಆದುದರಿಂದಲೇ ನಾಕಿಗಳ ಬದುಕನ್ನು ನೆನೆದು ಮರ್ತ್ಯಜನರು ಮರುಗುವಂತಾಯಿತು. ಮಾನವ ಲೋಕದಲ್ಲಿಯೂ ನೆಲಸಿ ನಿಂತ ಅವರ್ಣನೀಯ ಸೊಗವನ್ನು ಕುಬೇರನ ದೂತರು ಬಂದು ಕೊಂಡೊಯ್ದರೋ ಏನೋ! ಅವನ ದಲ್ಲಾಳಿಗಳ ಕೈವಾಡವೇ ಎಂದು ತೋರುತ್ತದೆ. ಮನುಜ ಲೋಕದ ಸಂತಸವು ಕಾಣದಾಗತೊಡಗಿದೆ. ಇರುವಷ್ಟು ಸುಖ ಸಂತೋಷವೆಲ್ಲ ಗಿಡಗಂಟಿಗಳ ಮರೆಯಲ್ಲಿ, ಪಕ್ಷಿಗಳ ಕಂಠದಲ್ಲಿ ಅಡಗಿಕೊಂಡು ಕುಳಿತಿದೆ.

ಹಣದ ನದಿಯು ಪಾಪ ಕೂಪದಲ್ಲುದ್ಭವಿಸಿ ಕೊಲೆ ಸುಲಿಗೆಗಳ ತಿಳಿಮಣ್ಣನ್ನು ಬಯಲು ಬಂಜರು ಭೂಮಿಯಲ್ಲಿ ಹರಹುತ್ತ ನಾಡನ್ನೆಲ್ಲ ಸುತ್ತಿ ಸುಳಿದು ದೋಷಾಕರನೆಂದೆನ್ನಿಸಿಕೊಂಡ ಸಮುದ್ರವನ್ನು ಸೇರುವುದು. ಇಂತಹ ನದಿಯ ನೀರಿನಲ್ಲಿ ಮಿಂದವನಿಗೆ ಪಾಪದ ಸುಂಕು ರೋಗ ಆನುವಂಶಿಕವಾಗಿ ಗಂಟು ಬೀಳುವುದು. ಅದಕ್ಕೆ ವೈದ್ಯನ ಔಷಧಿಯೂ ಇಲ್ಲ. ತೀರ್ಥಯಾತ್ರೆಗಳ ಪರಿಹಾರವೂ ಇಲ್ಲ. ಹಣ ಸಾಕಿದವನು ಹಣದ ಕೈಯಲ್ಲಿಯೇ ಮರಣ ಹೊಂದುವನು.

ದುಃಖ ದುಗುಡಗಳು, ಕೊಲೆ ಸುಲಿಗೆಗಳು ಉಂಟಾಗುವಲ್ಲಿ ಹಣದ ಅವ್ಯಾಜವಾದ ಸಂಬಂಧವು ಇರುತ್ತದೆ. ಹಣವು ತಾಯಿ ಮಕ್ಕಳನ್ನು, ಗುರು ಶಿಷ್ಯರನ್ನು, ಸುತ ಸೋದರರನ್ನು ಕೈಯಾರೆ ಕೊಲ್ಲಿಸುತ್ತದೆ. ರಾಜನ ತಲೆಯ ಮೇಲೆ ಯಾವಾಗಲೂ ನೇತಾಡುತ್ತಿರುವ ಖಡ್ಗವನ್ನು ಹಣವು ತನ್ನ ಕೈಯಿಂದಲೇ ಕಟ್ಟಿರುವುದೆಂಬವನ್ನು

ಅರ್ಥಸಚಿವೋತ್ತಮನು ಬಲ್ಲನು. ದೇಶ ದೇಶಗಳು ಯುದ್ಧ ಹೂಡಿ ಕೋಟಿ ಹಣಕ್ಕಾಗಿ ಕೋಟ್ಯಂತರ ಜನರನ್ನು ಬಲಿಗೊಡುವುದನ್ನು, ತನ್ನ ಕಡೆಗಣ್ಣ ನೋಟದಿಂದ ನೋಡಿ ಲಕ್ಷ್ಮಿ ಅಪಹಾಸಗೆಯ್ಯುವಳು. ಹಣದ ಆಸೆ ಇದ್ದವನಿಗೆ ದುರ್ಮರಣ ಎಂದಿಗೂ ತಪ್ಪಿದ್ದಲ್ಲ. ಹಣದ ಸ್ವಾಯತ್ತತೆ ಬಯಸುವ ಜನಾಂಗಕ್ಕೆ ಯುದ್ಧ ಎಂದಿಗೂ ಕಟ್ಟಿಟ್ಟದ್ದೇ. ನಿನ್ನೆ ಆರಿದ ಮಹಾಯುದ್ಧದ ಬೇಗೆಯನ್ನು ಹಣವು ಅನಿಲಾನಲ ಸಂಯೋಗವನ್ನು ನಾಳೆಯೆ ಕೊಂಡುತಂದು ವಿಶ್ವಮೇಧವನ್ನೆ ವಿರಚಿಸುವುದು. ಹಣ ಪ್ರಪಂಚದ ಕರಾಳ ಸಮಸ್ಯೆಗಳು ಭಸ್ಮೀಭೂತವಾಗದ ಮುನ್ನ ವಿಶ್ವಕ್ಕೆ ಶಾಂತಿಯಿಲ್ಲ, ದಾಸ್ಯಕ್ಕೆ ಬಿಡುಗಡೆಯಿಲ್ಲ, ನರನಿಗೆ ದೇವತ್ವವಿಲ್ಲ.

ಕಾಂಚನ ಮೃಗವನ್ನು ಬೆಂಬತ್ತಿದವನು ಮೃಗಜಲವನ್ನು ಹಿಂಬಾಲಿಸಿದ ಎರಳೆಯಂತೆ ಕಷ್ಟಪಡುತ್ತಾನೆ. ಅವನಿಗೆ ಜಗತ್ತಿನ ಪರಿವೆಯೆ ಇರುವುದಿಲ್ಲ. ತನ್ನ ದಾಹ ತಣಿಯುವವರೆಗೆ ಯಾರ ಹಿತ ವಚನವೂ ಕಿವಿಯನ್ನು ಸೇರುವುದಿಲ್ಲ. ಸಾವಿರಕ್ಕೆ ಒಂದು ಕಡಮೆ, ಲಕ್ಷಕ್ಕೆ ಹತ್ತು ಕಡಮೆ, ಕೋಟಿಗೆ ಇಪ್ಪತ್ತು ಕಡಮೆ, 'ಇಗೋ ಬಂತು' 'ಇಗೋ ಮುಟ್ಟಿದೆ' 'ಇಗೋ ಗುರಿ ಎಸೆದೆ' ಎನ್ನುತ್ತ ದುರಾಕಾಂಕ್ಷೆಯ ಕುದುರೆಯನ್ನೇರಿ ಅವನು ತಿರುಗದ ದಾರಿಯನ್ನೇ ಕೂಡುವನು. ಅವನ ದುರಾಗ್ರಹಕ್ಕೆ ಮರುಗಿದ ಶಿವನು 'ಮುಟ್ಟಿದ್ದೆಲ್ಲ ಚಿನ್ನವಾಗಲಿ' ಎಂಬ ವರವನ್ನಿತ್ತರೆ ಶಿವನನ್ನೇ ಮುಟ್ಟಿ 'ನೀನೂ ಚಿನ್ನವಾಗು' ಎಂದೆನ್ನುವನು. 'ದೇವರು ಹಣದ ಬಗೆಗೆ ಏನು ಅಭಿಪ್ರಾಯ ಕೊಡುತ್ತಾನೆ ಎನ್ನುವುದನ್ನು ನೀನು ತಿಳಿದುಕೊಳ್ಳಬೇಕಿದ್ದರೆ ಅದನ್ನು ಅವನು ಯಾರಿಗೆ ಕೊಟ್ಟಿರುವನೋ ಅಂತಹರನ್ನು ನೀನು ನೋಡು, ತಿಳಿಯುತ್ತದೆ' ಎಂಬ ಅಭಿಪ್ರಾಯವೊಂದು ಆಂಗ್ಲದಲ್ಲಿ ಬಳಕೆಯಲ್ಲಿದೆ.

ಹಣವಿದ್ದವನಲ್ಲಿ ಗುಣವಿರುವುದಿಲ್ಲ. ಸಿರಿಯು ನಿಂದಲ್ಲಿ ಸರಸ್ವತಿಯ ವಾಸವಿಲ್ಲ. ಇದು ವಿಶ್ವದ ನಿಯಮವೇ ಎಂದು ನೀನು ಅರಿತುಕೋ. ಹಣವಿದ್ದವನಿಗೆ ಸಲ್ಲುವ ಸ್ತುತಿ ಸ್ಥಾನ ಮಾನಗಳನ್ನು ಕಂಡು ನೀನು ಕುಗ್ಗಬೇಡ, ಆದರ ಕನಿಕರ ಪಡು. ಗುಣ ಹೀನನಾದ ಶ್ರೀಮಂತನಿಗೆ ಸಿಕ್ಕ ಆದರಾಲಂಕಾರಗಳು ಹೆಣಕ್ಕೆ ಸಿಂಗಾರ

ಮಾಡಿದಂತೆಯೇ ಸರಿ. ದರಿದ್ರನಾದ ಸರಸ್ವತೀಪುತ್ರನಿಗೆ ಹೊಟ್ಟೆಗೆ ಗತಿಯಿಲ್ಲದಿದ್ದರೂ ಸರಿ. ಅವನ ಆತ್ಮಶ್ರೀಯು ಮುಂದೆ ಮೂರು ಲೋಕದ ಐಸಿರಿ ದೊಂಬರ ಲಾಗ ಹಾಕುತ್ತ ಬಂದು 'ಜೀ' ಎನ್ನುವುದು. ಹಣದ ಹಿಡಿತಕ್ಕೆ ಸಿಗದ ವಸ್ತುವೆಂದರೆ ಆತ್ಮಶ್ರೀ ಒಂದೇ ಒಂದು. 'ರಾಮನಿಲ್ಲದ ಅಯೋಧ್ಯೆಯೂ ಆತ್ಮಶ್ರೀಯಿಲ್ಲದ ಮನುಷ್ಯನೂ ಸಮ' ಎಂದು ಕವಿ ಹೇಳಿದ ಮಾತು ತುಂಬ ಸತ್ಯ.

ಹಣದಿಂದಲೇ 'ವಾದ'ಗಳು ಹುಟ್ಟುವವು. ಸಮತಾವಾದವಂತೆ. ಸಾಮ್ರಾಜ್ಯಶಾಹೀ ವಾದವಂತೆ, ಪ್ರಜಾಸತ್ತಾತ್ಮಕವಾದವಂತೆ! ರಾಜಕೀಯ ದಲ್ಲಷ್ಟೇ ಹಣದ ಕೈವಾಡವಿರದೆ ಧರ್ಮದಲ್ಲೂ ಅದರ ಕಪಿಮುಷ್ಟಿ ಯುಂಟು. ಗೀತಾವಾದ, ಬೈಬಲ್ಲಿನವಾದ, ಕುರಾನವಾದ ಇಂತ ನೂರೊಂದು ವಾದಗಳು 'ಲೋಕಸಂಗ್ರಹ'ಕ್ಕಾಗಿ ಹುಟ್ಟದೆ ಹಣದ ಸಂಗ್ರಹಕ್ಕಾಗಿಯೇ ಹುಟ್ಟಿದುವೆಂಬುವನ್ನು ನೀನು ಅರಿತುಕೋ. ಚಾತುರ್ವರ್ಣ್ಯದ ಸೃಷ್ಟಿ ತಾಮ್ರದ ದುಡ್ಡಿನ ದಾಕ್ಷಿಣ್ಯಕ್ಕೆ ಸಿಕ್ಕು ಸೆರೆಯಾಳಾಗಿರುವುದೆಂಬುದು ನಿನ್ನ ಗಮನದಲ್ಲಿರಲಿ. ದಕ್ಷಿಣೆಯ ಪ್ರಶ್ನೆ ಬಂದಾಗ ಎಲ್ಲರೂ ವಿಪ್ರರು. ದೇಶದ ಒಡೆತನದ ಮಾತು ಬಂದಾಗ ಎಲ್ಲರೂ ಕ್ಷತ್ರಿಯರು. ಲಾಭದ ಪ್ರಶ್ನೆ ಬಂದಾಗ ಎಲ್ಲರೂ ಬಣಜಿಗರು ಇವು ಮೂರೂ ಸಿಗದೆ ಹೋದವನೇ ಶೂದ್ರ. ಹಣವಿಲ್ಲದ ಶೂದ್ರನಿಗೆ ಧರ್ಮವಿಲ್ಲ, ದೇವರಿಲ್ಲ, ಮುಕ್ತಿಯಿಲ್ಲವೆಂದು ಪ್ರತಿಪಾದಿಸಿದ ಋಷಿಯು ತನ್ನ ಸುತ್ತಣ ಬಾಳನ್ನು ಕಾಂಚನದ ಕನ್ನಡಕಗಳಿಂದಲೇ ನೋಡಿದನು. ಹಣದ ಗರ ಹಿಡಿದವರ ದೃಷ್ಟಿ ಯಾವಾಗಲೂ ಕುರುಡು, ಬುದ್ಧಿ ಮಂದ. ನನಗೆ ಹಣವಿದ್ದವರನ್ನು ಕಂಡರೆ ಆಗುವುದೆ ಇಲ್ಲ.

ನಾಯಿಯಂತೆ ಹಿಂಬಾಲಿಸಿ ಬಂದ ಲಕ್ಷ್ಮಿಯನ್ನು ಯಾವಾಗಲೂ ಹೊಸ್ತಿಲ ಬಳಿಯ ಗೂಡಿನ ಹತ್ತಿರವೆ ನಿಲ್ಲಿಸಬೇಕು. ಒಳಗೆ ಕಾಲಿಟ್ಟಳೇ ಸಹಧರ್ಮಿಣಿಯ ಚಾರಿತ್ರ್ಯಕ್ಕೆ ಕಲಂಕ ತಂದೊಡ್ಡುವ ಕಾರ್ಯದಲ್ಲಿಯೇ ಅವಳು ತೊಡಗುವಳು. ಸಿರಿಯ ನೋಟದಲ್ಲಿ ಚಾಂಚಲ್ಯವೂ, ನಡತೆಯಲ್ಲಿ ವಕ್ರತೆಯೂ ಉಂಟು. ದುರ್ನಡತೆ ಯುವರನ್ನು ಕಂಡು ದೂರ ಹಾಯುವುದೇ ಸಜ್ಜನರ ಲಕ್ಷಣವು. 'ಋತವೊಂದೆ ಗೆಲ್ಲುವುದು, ಅನೃತವಲ್ತು; ಅಮೃತಮೆನೆ ವಿದ್ಯೆಯೆ;

ಆಪಿನ್ನೈಯಲ್ಲು’ ಎಂದು ಶುಕ್ರಗೀತ ಹಾಡಿದ ಕವಿಯ ಮಾತನ್ನು ನಡೆಸಿ ತೋರಿದ ಉದಾಹರಣೆಯನ್ನು ಚಾರುದತ್ತನಲ್ಲಿ ನೀನು ಕಾಣುವಿ. ಗುಣವನ್ನು ಮೆಚ್ಚಿ ಬಂದವಳು ವಸಂತ ಸೇನೆ. ಬಂಗಾರದ ಬಂಡಿಯನ್ನು ಹಿಂದಕ್ಕಟ್ಟಿ ಧೀರೋದಾತ್ತನೆನ್ನಿಸಿಕೊಂಡವನು ಚಾರುದತ್ತ. ಪೇಟೆಯಲ್ಲಿ ಸಿಗುವ ಸುಖಕ್ಕೆ ನೀನು ಮನಸ್ಸು ಮಾಡಿದ್ದರೆ ಹಣವನ್ನು ಸಂಪಾದಿಸು. ಸಚ್ಚಿದಾನಂದ ಸಂಪತ್ತು ಬೇಕಿದ್ದರೆ ನಿಷ್ಕಾಮ ಕರ್ಮಿಯಾಗಿ ಹುಲ್ಲು ಗುಡಿಸಲಲ್ಲಿ ಜೀವಿಸಿರು. ನಿನಗೆ ಯಾವುದು ಇಷ್ಟ?

‘ಸಿರಿಯೆಂಬುದು ಸಂತೆಯ ಮಂದಿ ಕಂಡಯ್ಯ’ ಎಂದು ಅನುಭಾವಿಗಳು ಎಚ್ಚರಿಕೆ ಹೇಳಿದ್ದಾರೆ. ‘ತಾಮ್ರದ ದುಡ್ಡು ತಾಯಿ ಮಕ್ಕಳನ್ನು ಕೆಡಿಸಿತು’ ಎಂಬ ಗಾದೆಯ ಮಾತಿದೆ. ‘ಸಿರಿಯೆಂಬುದು ಮಟ ಮಟ ಮಧ್ಯಾಹ್ನ’ ಎಂದು ಜಾನಪದ ಕವಯಿತ್ರಿ ಹೇಳಿದ ಮಾತು. ಆದುದರಿಂದ ಪ್ರಿಯ ಪ್ರಾಪಂಚಿಕ, ನಿನ್ನ ಹಿತ ಕೋರಿ ಒಂದು ಮಾತು ಹೇಳುತ್ತೇನೆ. ಹಣದ ಬಿಸಿಲುಹಣ್ಣು ನೆಚ್ಚಿ ಬಾಳನ್ನು ಬೇಯಿಸಿಕೊಳ್ಳಬೇಡ. ಕಾಲಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವ ಜಲಸಮುದಾಯದಲ್ಲಿ ನಿನಗೆ ಎಷ್ಟು ಬೊಗಸೆ ನೀರುಬೇಕೊ ಅಷ್ಟನ್ನೇ ಎತ್ತಿಕೊ. ಹೆಚ್ಚು ಕುಡಿದ ನೀರಿನಲ್ಲಿ ರೋಗಾಂತರವಿರುತ್ತದೆ, ಎಚ್ಚರವಪ್ಪ!

ಪ್ರೇಮ

ಪ್ರೇಮವು ಕನಸಿನ ಲೋಕದಲ್ಲಿ ಹರಿಯುವ ಸುಂದರ ಹೊಳೆ. ಅದರ ತೀರದಲ್ಲಿ ಹೂ ಹಿಡಿದ ಮಲ್ಲಿಗೆ, ಅರಳಿ ನಿಂತ ಗುಲಾಬಿ, ಪರಿಮಳ ಚಿಮ್ಮುವ ಮಾಲತಿ ಬಕುಲ ಸಂಪಿಗೆಗಳಿರುವವು. ಆ ಲೋಕದ ಬಾನಿನಂಚಿನಲ್ಲೊಂದು ಕಡೆ ನೇಸರು ಮುಳುಗುತ್ತಿದ್ದರೆ, ಇನ್ನೊಂದು ಕಡೆ ಚಂದ್ರೋದಯವಾಗುವುದು. ಅಗೊ, ಯಾವುದೊ ಜಾಲದಲ್ಲಿ ಸಿಲುಕಿ ವಿಶ್ವಕ್ಕೆ ವಿಶ್ವವೆ ತೂಗುಯ್ಯಾಲಾಡುತ್ತಿದೆ! ಮಂಜುಳ ನಿನದಗೆಯ್ಯುತ್ತ ಹೊರಟ ಆ ಸುಂದರ ಹೊಳೆಯಲ್ಲಿ ಒಂದು ಗಂಡು ಇನ್ನೊಂದು ಹೆಣ್ಣು ಪ್ರೇಮದ ತೆಪ್ಪವನ್ನೇರಿ ಹಾಯಾಗಿ ತೇಲುತ್ತ ಹೊರಟಿವೆ, ಪ್ರೇಮದ ತೋಳಿನಲ್ಲಿ ಸಿಲುಕಿದ ಗಂಡು ಹೆಣ್ಣಿನ ಕಣ್ಣಿಗೆ ಜಗತ್ತೇ ಕಾಣಲೊಲ್ಲದು. ಎಲ್ಲ ಕಡೆಗೂ ಹಾಲಜೇನು, ಸಕ್ಕರೆಯ ಸವಿ, ಸುಮದ ಸೌರಭವೇ ಇರುವುದೆಂದವರ ಎಣಿಕೆ! ಪಾಪ, ಪ್ರೇಮವು ವಂಚನೆಯ ಸಂಚಕಾರ ಎನ್ನುವುದು ಅವರಿಗೆ ತಿಳಿದಿಲ್ಲ!

ಕನಸಿನ ಲೋಕವು ಆಗಸದ ಮೇಲೆ ನಿಂತಿರುವುದು. ವಾಸ್ತವಿಕ ಪ್ರಪಂಚವು ನೆಲದ ಮೇಲಿರುವುದು. ಪ್ರೇಮದ ಹೊಳೆಯು ವ್ಯೋಮದಲ್ಲಿ ಉಗಮವಾಗಿ ಭೂವಲಯವನ್ನು ಸುತ್ತಿ ಸುಳಿದು ಬಂದಿರುವುದು. ಅದರ ದಂಡೆಯ ಮೇಲೆ ಅಲೆಯುವವನು ತನ್ನ ಅರಿವೆಯನ್ನು ಕೈಯಲ್ಲಿ ಹಿಡಿದುಕೊಂಡೇ ತಿರುಗಾಡಬೇಕಾಗುವುದು. ಅವನ ಅಂತರಂಗದಲ್ಲಿ ಕಣ್ಣಿರಬೇಕು. ಮಾತಿನಲ್ಲಿ ಹಿಡಿತವಿರಬೇಕು. ಮನಸ್ಸಿನ ಮೂಗಿನಲ್ಲಿ ಮೂಗುದಾರವನ್ನು ಪವಣಿಸಿ ಕೈಯಲ್ಲದನ್ನು ಹಿಡಿದುಕೊಂಡಿರಬೇಕು. ತೃಷೆಯಾದಾಗಷ್ಟೇ ಅವನು ಪ್ರೇಮವಾರಿಧಿಯ ನೀರ ನೀಂಟಲಿ. ನೀರು ಪಿತ್ತವೆಂದು ಹೇಳುತ್ತಾರೆ. ಪ್ರೇಮ ತಲೆಗೆ ಏರಿದರೆ ಹೃದಯಕ್ಕೆ ಹೃದಯವೆ ಕಲಕಿ ಹೋಗಿ ಕಣ್ಣು ಕತ್ತಲಿಸಿ, ಬುದ್ಧಿ ವಿನಾಶವಾಗಿ ಹೋಗುತ್ತದೆ. ಆದರ್ಶ ಪ್ರೇಮದ ಮಡಿಲಲ್ಲಿ ಮಲ್ಲಿಗೆ ಚೆಂಗುಲಾಬಿಯ ಕೆಂಪು ಇಡಗಿದ್ದರೆ ವಾಸ್ತವಿಕ ಪ್ರೇಮದೊಡಲಲ್ಲಿ ಮೊಸಳೆ ಮೀಂಗುಲಿಗಳುಂಟು. ಆದುದರಿಂದ ಪ್ರೇಮದೊಡನೆ ಹೆಚ್ಚು ಸರಸ ಸರಿಯಲ್ಲ.

ಸೂಜಿಗೆ ಮುತ್ತು ಕೊಟ್ಟು ಹಾಗೆ ಪ್ರೇಮದೊಡನೆ ಸಂಬಂಧವಿಟ್ಟು ಕೊಳ್ಳುವುದು ಶ್ರೇಯ.

ಪ್ರೇಮವು ಸರ್ವವನ್ನು ಜಯಿಸುತ್ತದೆ. ಅದಕ್ಕೆ ಇದಿರಾಗಿ ನಿಂತು ಬದುಕಿದವರು ಹೆಸರು ಹೇಳುವದಕ್ಕೂ ಕೂಡ ಸಿಗುವುದಿಲ್ಲ. ಸನ್ಯಾಸಿಗಳೂ ಸರ್ವಾಧಿಕಾರಿಗಳೂ ಪ್ರೇಮದ ಕೈಯಲ್ಲಿ ಸಿಲುಕಿ ಮಣ್ಣು ಮುಕ್ಕಿ ಹೋಗಿದ್ದಾರೆ. ಸಾಮ್ರಾಜ್ಯ ಸಾಮ್ರಾಜ್ಯಗಳೇ ಪ್ರೇಮದ ಸೆಳವಿನಲ್ಲಿ ಬಿದ್ದು ತರಗೆಲೆಯಂತೆ ತೇಲಿ ಹೋಗಿವೆ. ಪ್ರೇಮದ ಮುದ್ದಿಗಾಗಿ ಸೋತು ನಿಂತವನನ್ನು ನಾನು ಹೇಡಿಯೆಂದು ಗಣಿಸುತ್ತೇನೆ. ಲೋಕವನ್ನು ಗೆಲ್ಲಬಲ್ಲ ತನ್ನನ್ನೇ ತಾನು ಪ್ರೇಮದ ಹಿಡಿತದಿಂದ ತಪ್ಪಿಸಿಕೊಳ್ಳಲಾರನೆಂದರೆ ಅದು ಹಾಸ್ಯಾಸ್ಪದವೇ ಸರಿ.

ಕನಸಿನ ಲೋಕದ ಆ ಸುಂದರ ಹೊಳೆಯ ನೀರನ್ನು ಸ್ವಂತ ಉಪಯೋಗಕ್ಕೆಂದು ಒಡ್ಡು ಕಟ್ಟಿ ನಿಲ್ಲಿಸಬಾರದು, ಅದು ನಿರಂತರವಾಗಿ ಹರಿಯುವ ವಿಮಲ ಜಾಹ್ನವಿ. ಅದನ್ನೆಂದಿಗೂ ಸಂಗ್ರಹಿಸಲಾಗದು. ನಿತ್ಯಸ್ರೋತವಾಗಿ ಹರಿಯುತ್ತಿದ್ದ ಪ್ರೇಮದ ಹೊಳೆಗೆ ಅಡಚಣೆ ಆತಂಕಗಳು ಮೇಲಿಂದ ಮೇಲೆ ಬರುತ್ತವೆ. ಅಂತಹ ಆತಂಕವು ಹರಿವ ವಾಹಿನಿಯ ಓಟವನ್ನು ಇನ್ನಷ್ಟು ಹೆಚ್ಚಿಸುತ್ತದೆಯೆ ಹೊರತು ಕುಂದಗೊಡುವುದಿಲ್ಲ. ತಂಬಿಗೆಗಟ್ಟಲೆ ಹಾಲು ಕರೆಯುತ್ತಿದ್ದ ಹಸುವಿನ ಮೇಲೆ ಕರುಬಿ ಹಾಲ್ಗೊಡದಲ್ಲಿ ಉಪ್ಪು ಹಾಕಲು ನೆರೆಮನೆಯವರು ಸಿದ್ಧರಾಗಿಯೆ ಇರುತ್ತಾರೆ. ಪ್ರೇಮಪಥದಲ್ಲಿ ಜೊತೆಗಾರರಾಗಿ ಸಾಗಿದವರನ್ನು ನೋಡಿ ಮತ್ಸರ ಪಡುವವರು ದಾರಿದಾರಿಗೂ ಉಂಟು. ನಿನ್ನ ಪ್ರೇಮವು ಅವನ್ನೆಲ್ಲ ಎದಿರಿಸಬೇಕಾಗುವುದು. ಅವನ್ನೊಮ್ಮೆ ದಾಟಿ ಬಂದರೆ ಈ ಮೊದಲು ನೀನು ತೋರಿದ ಪ್ರೇಮ ಇನ್ನಷ್ಟು ಹೆಚ್ಚು ರಭಸದಿಂದ ಹರಿಯುವುದು. ನಿಂತು ನಿಂತು ಸಾಗುವ ಪ್ರೇಮವಾಹಿನಿಗೆ ಓಟವುಂಟು, ಅಬ್ಬರವುಂಟು, ಸಂತತ ಧಾರಾಕಾರವುಂಟು.

ಹಲವು ವೇಷಧರಿಸಿ ಪ್ರೇಮವು ನಿನ್ನ ಮುಂದೆ ಸುಳಿಯುವುದು. ಹೆಣ್ಣಿನ ಕಣ್ಣಲ್ಲಿ, ಹಕ್ಕಿಯ ಕೊರಲಲ್ಲಿ, ವೀಣೆಯ ಸ್ವರದಲ್ಲಿ, ಶಿಲಾಮೂರ್ತಿಯ ಹಸ್ತದಲ್ಲಿ, ತಾರಾಪಥದಲ್ಲಿ ಒಂದು ಕಡೆ ಹೀಗೆಂದು ಅಲ್ಲ ಇಲ್ಲೆಂದು ಹೆಸರಿಟ್ಟು ಹೇಳುವುದು ಹೇಗೆ! ಅನಂತರೂಪ ತಾಳಿ

ಬಂದ ಪ್ರೇಮಮೂರ್ತಿಯನ್ನು ಅನುಭವದಿಂದಲೆ ಅರಿತುಕೊಳ್ಳಬೇಕು. ತಾಯಿಯನ್ನು ಕೇಳಿದರೆ ಅವಳು ತನ್ನದೇ ಆದ ಅರ್ಥವನ್ನು ಹೇಳುತ್ತಾಳೆ. ಪ್ರೇಯಸಿಯನ್ನು ಕೇಳಿದರೆ ಅವಳಿಗೂ ತನ್ನದೇ ಆದ ಅರ್ಥವಿವರಣೆಯುಂಟು. ಕವಿಯನ್ನು ಪ್ರಶ್ನಿಸಿದರೆ ಅವನದೂ ಒಂದು ಭಿನ್ನಾಭಿಪ್ರಾಯವೆ. ತತ್ವದರ್ಶಿ, ವಿಜ್ಞಾನಿಗಳೆಲ್ಲರೂ ತಂತಮ್ಮ ನೋಟದಿಂದಲೇ ಪ್ರೇಮಸೂತ್ರಕ್ಕೆ ಭಾಷೆಯನ್ನು ಒರೆಯುತ್ತಾರೆ. ಪ್ರೇಮದ ಅರ್ಥವನ್ನು ಬಿಡಿಸಿ ಹೇಳಬಲ್ಲವರನ್ನು ಕೇಳಿ ಸುಖವಿಲ್ಲ. ಪ್ರೇಮದ ಪೂಜಕನೆ, ನಿನ್ನ ಮನಸ್ಸನ್ನು ನೀನು ಕೇಳಿ ನೋಡಿಕೊ! ಅಲ್ಲಿಯೆ ನಿನ್ನ ಸಮಸ್ಯೆಯ ಪರಿಹಾರವಿದೆ.

ನೀನು ತಿಳಿದುಕೊಂಡಷ್ಟು ಲಘುವಾದ ವಸ್ತುವಲ್ಲ ಪ್ರೇಮ. ನಿನ್ನನ್ನು ಮೋಸಮಾಡಿ ಕೊಳ್ಳಕ್ಕೆಳೆಯುವ ಹೀನ ವೃತ್ತಿಯೂ ಅದಕ್ಕಿಲ್ಲ. ಮಾನಸಕಷಾಯಕ್ಕೊಳಗಾದವರು ಪ್ರೇಮವು ಕುರುಡೆಂದು ಹೇಳಿದರೂ ಹೇಳಿದ್ದಾರು, ಆದರೆ ಪ್ರೇಮದಷ್ಟು ನಿರ್ಮಲ ವಸ್ತುವು ಇನ್ನೊಂದಿಲ್ಲ. ಪ್ರೇಮ ಜ್ಯೋತಿರ್ಲಿಂಗ ಚಕೋರಕ್ಕೆ ಚಂದ್ರಮನ ಚಿಂತೆಯಿದ್ದ ಹಾಗೆ, ಚಂದ್ರಮನ ಚಿಂತೆ ರೋಹಿಣಿಗೆಯಿದ್ದ ಹಾಗೆ ನಿನಗೆ ಪ್ರೇಮದ ಚಿಂತೆ ಇರಲಿ. ನಿನ್ನ ಮಾನಸ ಸರೋವರದಲ್ಲಿ ಪ್ರೇಮದ ಕಮಲ ಅರಳಿದಂದು ಅಲ್ಲಿ ಚಿತ್ರ ಭಿತ್ತಿಯ ದಿಗಂತದಲ್ಲಿ ತಿಮಿರಾಂಧಕಾರರನ್ನು ಓಡಿಸಲು ಬಂದ ರಾಕಾಶಶಾಂಕನ ಉದಯವಾಗಿದೆಯೆಂದರಿತುಕೊ. ಅಂತ ಚಂದ್ರಮನ ಬರವನ್ನು ನೀನು ಚಕೋರವಾಗಿ ಹಾರೈಸು.

'ಷೆಲ್ಲಿ'ಯೆಂಬ ಹೆಸರಿನ ಆಂಗ್ಲ ಕವಿಯ ಮಾತಿನಲ್ಲಿ ಪ್ರೇಮದ ಸಂದೇಶ ಹೇಳಬಯಸುತ್ತೇನೆ. ಝರಿ ಹಳ್ಳವನ್ನು ಕೂಡುತ್ತಿವೆ. ಹಳ್ಳಗಳು ಜಲನಿಧಿಯ ಕಡೆಗೆ ಹರಿಯುತ್ತಿವೆ. ನಂದನ ವನದ ಗಾಳಿ ಮಧುರ ಮಹೋತ್ಸವದೊಂದಿಗೆ ಸಂತತವಾಗಿ ಬೀಸುತ್ತಲೆ ಇರುವುದು. ಈ ಲೋಕದಲ್ಲಿ ಏಕಾಕಿಯಾಗಿರುವುದು ಯಾವುದೂ ಇಲ್ಲ. ಸೃಷ್ಟಿಯ ಕಟ್ಟಳೆಯ ಮೇರೆಗೆ ಒಂದರಲ್ಲೊಂದು ಬೆರೆತು ಸಾಗುತ್ತಲೆ ನಡೆದಿರುವುದು. ಎಂದ ಮೇಲೆ ನೀನೂ ಪ್ರೇಮದೊಂದಿಗೆ ಏಕೆ ಬೆರೆಯಬಾರದು!

ಕರ್ತವ್ಯ

ಕರ್ತವ್ಯದಿಂದ ಪರಾಙ್ಮುಖನಾದವನು ಜೀವನ್ಮೃತನೇ ಸರಿ. ಅವನು ದೇವರ ತೋಳ ನೆರವಿನ ಮೇಲೆ ನಿಲ್ಲಬಯಸುವ ಸೋಮಾರಿ. 'ಎಲವೋ ಸೋಮಾರಿ ಮೂರ್ಖ, ಕರ್ತವ್ಯಚ್ಯುತವಾಗದ ಇರುವೆಯನ್ನು ನೋಡು. ಅವಳ ಇರುವನ್ನು ಅಭ್ಯಸಿಸಿ ಬುದ್ಧಿವಂತನಾಗಬಾರದೆ ? ಹೀಗೆಂದು ಬೈಬಲ್ಲಿನಲ್ಲೊಂದು ಹಿತೋಪದೇಶವಿದೆ. ಬಲ್ಲಿದರ ನುಡಿಯನ್ನು ನಕ್ಕು ಹಾರಿಸುವವನು ಒಂದಿಲ್ಲ ಒಂದು ದಿನ ಮಣ್ಣು ಮುಕ್ಕಿ ಸಾಯುತ್ತಾನೆ.

ತನ್ನ ಪಾಲಿನ ಕರ್ತವ್ಯವನ್ನು ಮನ ಮುಟ್ಟಿ ಮಾಡುವವನನ್ನು ನೋಡಿ ಎಲ್ಲರೂ ಮೆಚ್ಚುತ್ತಾರೆ. ಅವನು ದಣಿದು ಬೇವಿನ ಮರದ ಕೆಳಗೆ ಮಲಗಿಕೊಂಡಾಗ ಅವನ ತಲೆದಿಂಬಿನಡಿಯಲ್ಲಿ ನೆಲದ ಮರೆಯ ನಿಧಾನ ತಾನಾಗಿಯೇ ಹರಿದು ಬಂದು ನಿಲ್ಲುವುದು. ಕರ್ತವ್ಯವು ಹರಕೆಯ ತಾಯಿ, ದುಡಿತವು ದುಡ್ಡಿನ ತಾಯಿ. ಕರ್ತವ್ಯ ಪರಿಪಾಲನೆಯಲ್ಲಿ ಸ್ವ ಪರ ಹಿತವುಂಟು. ಅದೇ ದಿನದ ದುಡಿಮೆಯಲ್ಲಿ ನಿರತನಾದವನಿಗೆ ಹೊಟ್ಟೆ ಬಟ್ಟೆಯ ಹಿತಚಿಂತನೆಯು ಮಾತ್ರ ಇರುವುದು. ಕರ್ತವ್ಯ ನಿಷ್ಠುರನಾದವನು ಸತತೋದ್ಯೋಗಿಯಾದ ಮೇಲೆ ಅವನಿಗೆ ಅದಕ್ಕಿಂತ ಮಿಗಿಲಾದ ಅಭಯವು ಬೇಡವೇ ಬೇಡ.

ಕರ್ತವ್ಯದ ಬಂಧನದಿಂದ ಯಾರೂ ಪಾರಾಗಲಾರರು. ಪಾರಾದೆನೆಂದು ತಿಳಿದುಕೊಳ್ಳುವವನು ಆತ್ಮವಂಚನೆಮಾಡಿ ಕೊಳ್ಳುತ್ತಾನೆ. ಕರ್ತವ್ಯದ ಹೋರಾಟದಲ್ಲಿ ನಿರತನಾದವನು ಲಾಭ ಹಾನಿಗಳನ್ನು, ಸೋಲು ಗೆಲವುಗಳನ್ನು ಲೆಕ್ಕಿಸಕೂಡದು. ಅವೆಲ್ಲ ವಿಧಿವಶ. ಕರಣತ್ರಯದಿಂದ ಕಾರ್ಯಗೆಯ್ಯುವನಿಗೆ ಶ್ರೇಯ ಕಟ್ಟಿಟ್ಟದ್ದೆ. ಅದರ ಶ್ರೇಯವನ್ನೇ ನಿರೀಕ್ಷಿಸಿ ಕಾರ್ಯೋನ್ಮುಖನಾಗ ಕೂಡದು. ಕಾರ್ಯಾಪೇಕ್ಷೆಯಿಂದ ದುಡಿಯುವವನಿಗೆ ದೊರೆವ ಸುಖ ಅಲ್ಪಕಾಲದ್ದು. ಅವನಿಗೆ ಇಲ್ಲಿ ದೊರೆತ ಸುಖ ಮುಂದೆಯೂ ದೊರೆಯುತ್ತದೆಂದು ಹೇಳುವುದು ಕಷ್ಟ. ಕರ್ತವ್ಯವನ್ನು ಅನಾಸಕ್ತಿಯಿಂದ ಗೆಯ್ಯುವನಿಗೆ ಸದ್ಗತಿಯು ಸ್ವಾಗತಿಸುವುದು. ಅದೇ

ಫಲಾಪೇಕ್ಷೆಯಿಂದ ಕರ್ತವ್ಯವನ್ನು ಕೈಕೊಂಡು ಮಧ್ಯದಲ್ಲಿಯೇ ಬೇಸತ್ತು ಧೈರ್ಯಗುಂದಿ ನಿಂತವನನ್ನು ಪ್ರಕೃತಿಯು ದರದರನೆ ಎಳೆದು ಕೊಂಡು ಹೋಗಿ ಅವನ ಕೈಯಿಂದ ದುಡಿಸಿಕೊಂಡು ಕೈಕೂಲಿಯನ್ನು ಕೊಡದೆ ಹಿಂದಕ್ಕಟ್ಟುವುದು. ಇಂತಹ ಮಾನ ಹಾನಿಯನ್ನು ಸ್ವಧರ್ಮ ಪರಿಪಾಲನಾ ಪ್ರೇಮಿಯು ಒಂದು ಅರೆ ನಿಮಿಷವೂ ಸಹಿಸನು.

ಗೀತಾಕಾರನದೊಂದು ಹಿತವಚನವಿದೆ. ಭಯಾವಹವಾದ ಪರಧರ್ಮವನ್ನು ಕೈಕೊಂಡು ಜೀವಿಸಿರುವುದಕ್ಕಿಂತ ಸ್ವಧರ್ಮ ಪರಿಪಾಲನೆಯಲ್ಲಿಯೇ ನಿರತನಾಗಿ ಸಾಯುವುದು ಸಹಸ್ರಪಾಲು ಒಳ್ಳೆಯದು. ಅಭಿಮಾನವೆ ಮಿಗಿಲಾದ ಸಂಪತ್ತೆಂದು ನಚ್ಚಿದವರೆಲ್ಲರೂ ಎಂದೆಂದಿಗೂ 'ಎಂದುಡನೆ ಎಂದು' ಬಾಳುವವರಲ್ಲ 'ಜೀಯ' 'ಹಸಾದ' ಗಳನ್ನು ಅವರು ತಮ್ಮ ಮನದ ಬಾಗಿಲದ ಹತ್ತಿರವೂ ಬರಗೊಡರು. ಹೊಟ್ಟೆಗಿಲ್ಲದಿದ್ದರೆ ಉಪವಾಸ ಸತ್ತಾರು. ಬತ್ತಳಿಕೆಯ ಅಂಬುಗಳು ತೀರಿದ್ದರೆ ಎದೆಯನ್ನು ತೆರೆದು ನಿಂತು ಜೀವ ಕೊಟ್ಟಾರು. ಆದರೆ ಇನ್ನೊಬ್ಬರ ಆಶ್ರಯದಲ್ಲಿ ನಿಂತು ಅವರ ಬಾಯ್ದಂಬುಲಕ್ಕೆ ಕೈಜೋಡಿಸಿ ತನ್ನ ಬಾಳಿನ ಒಂದು ಕೋಟ್ಯಂಶದಷ್ಟು ಹೊತ್ತನ್ನಾದರೂ ಕಳೆಯೆಂದು ದಂಡಿಸಿದವರ ಎದೆಯ ರಕ್ತವನ್ನೆ ನೊಗೆದು ಕುಡಿದಾರು. ಮಹಾನುಭಾವಿಗಳು ಕಾರಣಪುರುಷರೇ ಮೊದಲಾದವರು ಸ್ವಧರ್ಮವನ್ನೆ ಸದ್ಧರ್ಮವೆಂದು ಭಾವಿಸಿ ಕನಸಿನಲ್ಲಿಯೂ ಕೂಡ ಕರ್ತವ್ಯಕ್ಕೆ ಬೆನ್ನು ತೋರದೆ ತಮ್ಮ ಆಚರಣೆಯ ದಂಡದಿಂದ ಲೋಕಕ್ಕೆ ಲೋಕವನ್ನೇ ಆಳಿದರು.

ಬುದ್ಧಿಜೀವಿಯಾದ ಮನುಷ್ಯನ ಮೇಲೆ ಕರ್ತವ್ಯವು ಘನವಾದ ಹೊರೆಯನ್ನು ಹೇರಿರುವುದು. ಮಾನವಧರ್ಮಕ್ಕೆ ಮೊತ್ತಮೊದಲಿನ ಸೇವೆ ಅವನಿಂದಲೇ ಹುಟ್ಟತಕ್ಕದ್ದು. ಸತ್ಯವೆ ಅವನ ಆಚಾರ,ದಯೆಯೇ ಅವನ ಧರ್ಮವಾಗಿರಲಿ. ಮಾತೃಭೂಮಿಯು ಪ್ರತಿಯೊಬ್ಬನಿಂದಲೂ ಕರ್ತವ್ಯವನ್ನು ಅಪೇಕ್ಷಿಸುತ್ತಿದೆ. ದೇಶದ ಸಂಸ್ಕೃತಿಯ ಉನ್ನತಿಯಲ್ಲಿಯೂ, ಸ್ವಾತಂತ್ರ್ಯದ ರಕ್ಷಣೆಯಲ್ಲಿಯೂ ವ್ಯಕ್ತಿಯ ವಿಕಾಸಕ್ಕಿಂಬಿದೆ. ಅದನ್ನು ಕಾಪಾಡಿಕೊಂಡು ಬೆಳೆಸುವವರಲ್ಲಿಯೇ

ಪ್ರತಿಯೊಬ್ಬನ ಕರ್ತವ್ಯವಡಗಿದೆ. ರಾಷ್ಟ್ರವು ನಿನ್ನ ಕರ್ತವ್ಯವನ್ನು ಬಯಸಿ ನಿಂತಾಗ ಹೇಡಿಯಂತೆ ನೀನು ಮುಖ ತಿರುಹಿ ನಿಂತರೆ ನಾಳೆ ನೀನು ಸತ್ತಮೇಲೆ ಗದ್ದಲಿಗಳೂ ಬಂದು ನಿನ್ನನ್ನು ಮುಟ್ಟಲಾರವು. ನೆಲಕ್ಕೆ ಕೇಡು ಬಗೆದವನು ಮಣ್ಣಿಗೂ ಕೂಡ ಹೊರತಾಗುವನೆಂಬುದನ್ನು ಜ್ಞಾಪಕದಲ್ಲಿರಿಸಿಕೊ. ಅದಕ್ಕೇ ಈ ಅಮೃತೋಕ್ತಿ, ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ!

ಕರ್ತವ್ಯದ ಮೇಲಿನ ಹಂತೇ ಕಾಯಕ. ಶರಣರು ಕಾಯಕವೇ ಕೈಲಾಸವೆಂದು ಹೇಳಿರುವರು. ಬಾಳಿನ ಬಂಧನದಿಂದ ಬಿಡುಗಡೆ ಹೊಂದುವುದೇ ನಿನ್ನ ಪಾಲಿನ ಮಹಾಕರ್ತವ್ಯ. ಅಲ್ಲಿ ನೀನು ಮಹಾ ಯೋಧನಾಗಿ ಹೋರಾಡಬೇಕು. ಬೀಳುವವರೆಗೂ ಒಬ್ಬನೇ ನಿಂತಾದರೂ ಹೋರಬೇಕು. ವೀರನು ಸತ್ತರೂ ಸ್ವರ್ಗ, ಗೆಲಿದರೂ ಸ್ವರ್ಗ, ಓದುಗ, ಅಂತಹ ಸಂಪದವು ನಿನಗೆ ದೊರೆಯಲೆಂದು ಹಾರೈಸುತ್ತೇನೆ.

ಭವಿಷತ್ತು

ಕೊಪ್ಪರಿಗೆಯಂತೆ ಡುಬ್ಬ ಹಾಕಿರುವ ಬಾನಿನಂಚಿನಲ್ಲಿ ಭವಿಷತ್ತಿನ ಮನೆಯಿದೆ. ಆ ಮನೆಯ ಬಾಗಿಲನ್ನು ತೆರೆದು ಒಳಹೊಕ್ಕು ತನ್ನ ದೈವರೇಷೆಯನ್ನು ಅರಿತು ಕೊಳ್ಳಬೇಕೆಂಬಾಸೆಯನ್ನಿಟ್ಟುಕೊಂಡು ಹೊರಟ ಪಯಣಿಗನಿಗೆ ದಾರಿಗೆ ದಾರಿಯೇ ಗತಿ. ಅವನು ಹೋದ ಹೋದ ಹಾಗೆ ಆ ಮನೆಯು ಇನ್ನೂ ದೂರ ದೂರ ತನ್ನ ನೆಲೆಯನ್ನು ಒಂದಕ್ಕೆ ಸರಿಸಿ ಪಯಣಿಗನ ತಾಳ್ಮೆಯನ್ನು ಕೆಣಕಿ ಹೃದಯವನ್ನೇ ಕಲಕಿಸುವುದು. ಆಗ ಅವನಿಗೆ ಸ್ಥೈರ್ಯ ಸಮತೆಗಳೇ ಉಳಿಯುವುದಿಲ್ಲ. ಉರಿವ ದೀಪವನ್ನು ಮುಟ್ಟಿ ಹಂಬಲವನ್ನು ತೀರಿಸಿಕೊಳ್ಳಲೆಂದು ಹೊರಟ ಪತಂಗ ತನ್ನನ್ನೇ ತಾನು ಸುಟ್ಟುಕೊಂಡು ಕರಿಮುರಿಪೋಗುವ ಗತಿಯನ್ನೇ ಭವಿಷತ್ತಿಗೆ ಬಾಯಿ ಹಾಕಿದವನು ಅನುಭವಿಸುವನು. ಭವಿಷತ್ತಿನ ಮನೆ, ಓದುಗ, ಆದು ಸೂರ್ಯ ಚಂದ್ರಮರು ಮೂಡಿ ಮುಳುಗುವ ತಾಣದಲ್ಲಿದೆ. ಕೃಷ್ಣ ಪಕ್ಷದ ಕಾಳ ರಾತ್ರಿಯು ಅಲ್ಲಿ ಸತತವು ವಾಸಿಸುವುದು. ಅದರ ಬಗೆಗೆ ಎಂದಿಗೂ ನೀನು ವಿಚಾರ ಮಾಡಬೇಡ. ನೀನು ಇದ್ದ ಕಾಲವನ್ನು ಮಾತ್ರ ಎಚ್ಚರದಿಂದ ನೋಡಿಕೊ.

ದುಃಖಿಗೆ ಭವಿಷತ್ತೆ ಆಸರ, ಸುಖಿಗೆ ವರ್ತಮಾನವೆ ಅಮೃತ ಪಾನ, ಜ್ಞಾನಿಗೆ ಗತಕಾಲವೇ ಅರಿಮೆಯ ಸೋಪಾನ. ಜನನ ಮರಣಗಳ ಮರ್ಮವನ್ನರಿತುಕೊಂಡಾತನಿಗೆ ಕಾಲದ ಕಟ್ಟಳೆಯೇ ಇಲ್ಲ. ಅವನಿಗೆ ಆದಿ ಅನಾದಿಗಳ ಚಿಂತನೆಯೇ ಇರುವುದಿಲ್ಲ. ಆಗುವುದನ್ನು, ಆದುದನ್ನು ನೆನೆದು ಮರುಗುವುದರಲ್ಲಿ ಏನಿದೆ? ಭವಿಷತ್ತಿನ ಮಡಿಲಲ್ಲಿ ಒಳ್ಳೆಯ ಇರುವುದೆಂದೂ, ವರ್ತಮಾನದಲ್ಲಿಯೂ ಹಗಲು ರಾತ್ರಿಗಳುಂಟೆಂದೂ ನಂಬಿ ಬಾಳು ಹೊರೆಯುವವನಿಗೆ ಸುಖ ದುಃಖಗಳು ಏನನ್ನೂ ಮಾಡಲಾರವು. ಮಾತ್ರಾ ಸ್ಪರ್ಶನದಿಂದ ಶೀತೋಷ್ಣ ಸುಖ ದುಃಖಾದಿಗಳುಂಟಾಗುತ್ತವೆ. ಅವು ಹೋಗುತ್ತಲೆ, ಬರುತ್ತವೆ. ಅವುಗಳನ್ನು ತನ್ನ ಹಿಡಿತದಲ್ಲಿರಿಸಿಕೊಂಡವನಿಗೆ ಭವಿಷತ್ತು ಸಲಾಮು ಹಾಕುತ್ತದೆ.

ಮನಸ್ಸು ಗಟ್ಟಿಮಾಡಿಕೊ! ಅದಾದಂದು ಭವಿಷತ್ತಿನ ಕನಸಿನುಪ್ಪಿಗೆಯಲ್ಲಿ ಏನೇ ಇರಲಿ, ಹೌರಾಗಿ ಅಂಗೈ ಬಿಚ್ಚಿ ತನ್ನ ದೈವ ರೇಖೆಯನ್ನು ನಿನ್ನೆದುರಿನಲ್ಲಿರಿಸಿ ದಯೆ ಬೇಡುವುದು.

'ನಾನು ಭವಿಷತ್ತನ್ನು ಕುರಿತು ಚಿಂತಿಸುವುದೆ ಇಲ್ಲ ಅದು ತಾನಾಗಿಯೆ ಬೇಗ ಬರುತ್ತದೆ' ಎಂದು ಆಲ್ಬರ್ಟ್ ಐನ್‌ಸ್ಟೀನನು ಹೇಳಿರುವನು. ಬಾಳಿನಂಬರದಲ್ಲಿ ವರ್ತಮಾನ ಕಾಲದ ಬಿದಿಗೆಯ ಚಂದ್ರಮನು ರಾರಾಜಿಸುತ್ತಿರುವ ಸಮಯದಲ್ಲಿ ಭವಿಷತ್ತಿನ ನಿತ್ಯಬುಟಿನಲ್ಲಿ ಮಿನುಗುವ ಮಿಂಚುಂಬುಳಗಳನ್ನು ನೋಡಿ ಸುಖಿಸುತ್ತೇನೆಂದು ಹೊರಟವನು ದುರ್ದೈವಿಯೆ ಸರಿ. ಅವನಿಗೆ ಸಾವಿನ ಅಂಜಿಕೆ ಇರುತ್ತದೆ. ಪಾಪಿಯೊಬ್ಬನಿಗೆ ಮೃತ್ಯುವಿನ ನೋವು ಇರಬೇಕಾದದ್ದು. ಕಾಲಧರ್ಮಕ್ಕೆ ಸರಿಯಾಗಿದ್ದುಕೊಂಡು ಅಂತರಂಗದಲ್ಲಿ ನೋಟವಿಟ್ಟು ನಡೆದವನಿಗೆ ವರ್ತಮಾನ ಭವಿಷತ್ತುಗಳ ಭಯವೇ ಇಲ್ಲ.

ಹಳೆಯದೆಲ್ಲ ಹೊನ್ನು. ಇರುವುದೆಲ್ಲ ಚಿನ್ನು. ಮುಂದೆ ಬರುವುದೆಲ್ಲ ಬರಿ ಮಣ್ಣು. ಭವಿಷತ್ತಿನ ಮರದ ಸಸಿ ಕಾಲದಂಚಿನಲ್ಲಿರುವುದೆಂದು ಹಿರಿಯರ ಹೇಳಿಕೆಯುಂಟು. ಅಂತ ಸಸಿಯ ಹಣ್ಣು ನಂಬಿ ಹಿತ್ತಿಲದ ಗಿಡದ ಕಾಯಿ ಕುಯ್ದು ಹಾಕುವುದು ಅಪಾಯಕರವೆಂದು ತಿಳಿದುಕೊ.

ಜೀತದ ಭವಿಷತ್ತನ್ನು ನಿರೂಪಿಸಬಲ್ಲ ದರ್ಶನಕಾರನ ಕಣ್ಣು ಯಾವಾಗಲೂ ಅವರ ಇತಿಹಾಸದ ಕಡೆಗೇ ಇರುತ್ತದೆ. ಜನಾಂಗದ ಸಾಹಿತ್ಯ ಸಂಸ್ಕೃತಿಯ ಕೋಟೆಯ ರಚನೆಯನ್ನು ಪರೀಕ್ಷಿಸುವವನ ನೋಟ ಮೊದಲು ಅದರ ಬುನಾದಿಯತ್ತ ತಿರುಗುತ್ತದೆ. ಭದ್ರವಾದ ಗತವೈಭವದ ಮಂದಿರವನ್ನು ರಕ್ಷಿಸುತ್ತಿದ್ದ ಕಾವಲುಗಾರರನ್ನು ತಳ್ಳಿ ಒಳಗೆ ನುಗ್ಗುವುದು ದುಸ್ತರವಿದೆ. ಭವ್ಯನಾಗರಿಕತೆಯ ಬಂಡೆಗಲ್ಲನ್ನು ಒತ್ತಿಹಾಕಲಿಳಿಸುವವನು ಎದೆಯ ಮೇಲೆ ಹೇರಿಕೊಂಡು ಪುಡಿಗುಟ್ಟಿ ಹೋಗುವನು. ಆದುದರಿಂದ ನಿನ್ನೆಯ ದಿನವನ್ನು ನೀನು ಗಟ್ಟಿಯಾಗಿ ಕಟ್ಟಿಕೊಂಡಿದ್ದರೆ ನಾಳೆ ಬರಲಿರುವ ದಾಳಿಗಾರನಿಗೆ ನಿನ್ನನ್ನು ಕೆಣಕುವುದು ಬಹಳ ಕಷ್ಟದ ಕೆಲಸವಿದೆ.

ವರ್ತಮಾನದ ಹಂಗು ತೊರೆದು ನಿಂತವರಿಗೆ ಒಮ್ಮೊಮ್ಮೆ ಭವಿಷತ್ತು ತನ್ನ ಸಂಪುಟದಲ್ಲಿದ್ದ ಭವ್ಯ ಸಂಪತ್ತನ್ನು ತಾನಾಗಿಯೆ ತೆರೆದು ತೋರುವುದು. ಆದರೆ ಅದಕ್ಕೆ ಬಹಳ ಸಾಹಸಗೆಯ್ಯಬೇಕಾಗುವುದು. ಇದಿರಿನಲ್ಲಿರುವ ತುಂಬಿದ ಹೊಂಡವನ್ನು ಅಲ್ಲಗಳೆದು, ನಾಳಿನ ನೀರನ್ನೆಲ್ಲ ಕುಡಿದು ದಾಹ ಹಿಂಗಿಸಿಕೊಂಡೆನೆನ್ನುವಷ್ಟು ಸಾಹಸವಾದ ಬೇಕಾಗುವುದು. ಭವಿಷತ್ತಿನ ಭಾಗ್ಯಶ್ರೀ ಜಾಣ ಬೇಡತಿ. ತಾನು ಬರಿಯುವವನ ಎದೆಯನ್ನು ಮೊದಲು ಪರೀಕ್ಷಿಸಿ ನೋಡುತ್ತಾಳೆ. ಅವನ ಕೈಯಲ್ಲಿದ್ದ ಕಾಂಚನವನ್ನು ಧಾರಿಸಿಕೊಂಡು ಹೋಗಿ ಬೀದಿ ಬೀದಿಯಲ್ಲಿ ತಿರುಗಿಸಿ ನೋಡುತ್ತಾಳೆ. ಹೃದಯ ಶುದ್ಧಿಯುಳ್ಳ ಸಾಹಸಿಯು ಸೋತಷ್ಟೂ ಅವಳಿಗೆ ಹಿಗ್ಗು. ಅವನ ಸೋಲಿನಲ್ಲಿ ಮಾಯಾಂಗನೆ ಭಾಗ್ಯಶ್ರೀಯ ಕುಡಿಗಣ್ಣ ನೋಟವಿದೆ. ಬಯಸಿ ನಿಂತಾಗ ತಡೆದು ಬಂದ ಅವಳ ಸಂಗದಲ್ಲಿ ಚಿರಸೌಖ್ಯವಿದೆ, ಉಜ್ವಲ ಭವಿಷತ್ತಿದೆ. ಹೇಡಿಗೂ ಒಮ್ಮೊಮ್ಮೆ ಭವಿಷತ್ತು ಒಲಿಯುವುದು. ಆದರೆ ಅಂತವನು ಸ್ವೇಚ್ಛಾನುರೋಪಕ್ಕೀಡಾಗಿ ಪಕ್ಕ ಬಲಿಯದ ಹಕ್ಕಿ ಡೇಗೆಯ ಕೈಯಲ್ಲಿ ಸಿಕ್ಕಂತಾಗುವನು. ದೈವರ ಗುಟ್ಟಿಯ ಮೇಲೆ ಕಾಲ ಹಾಕುವ ಗುಬ್ಬಿ ಇಂದಿಲ್ಲ ನಾಳೆಯಾದರೂ 'ಕಾಮಿ'ಯ ಬಾಯಿಗೆ ಬಿದ್ದೇ ಬೀಳುವುದು.

ಆಸೆಯ ಅಮೃತವನ್ನು ತನ್ನೊಡಲಲ್ಲಿಟ್ಟುಕೊಂಡ ಭವಿಷತ್ತು ಮನುಷ್ಯನ ತೃಷೆಯನ್ನು ಸ್ವಾಭಾವಿಕವಾಗಿಯೆ ಹೆಚ್ಚಿಸುವುದು. ಅದನ್ನು ಸಂಘನಗೆಯ್ಯಲೆಳಸುವವನು ಬಂದುದನ್ನು ಸ್ವಾಗತಿಸುವುದಕ್ಕೆ ಸಿದ್ಧನಾಗಿರಬೇಕಾಗುವುದು. ನಾಳೆ ದಾರಿದ್ರ್ಯ ಬಂದಡರಲಿದೆ, ಮುಪ್ಪು ಬರಲಿದೆ, ಸಾವು ಬಂದೊದಗಲಿದೆ. ಜೀವನದ ಗತಿ ಒಂದೇ ಸಮನೆ ಓಡುತ್ತಲಿದೆ. ಕಾಲಗರ್ಭದಲ್ಲಡಗಿದ ಸಂಗತಿಗಳು ನೋಟಕ್ಕೆ ಬೀಳಲಾರವು. ಭವಿಷತ್ತಿನ ಹುತ್ತಿನಲ್ಲಿರುವ ಫಣಾರತ್ನಕ್ಕೆಳಸಿ ಕೈಹಾಕುವವನ ಗತಿಯನ್ನು ಹಾವಾಡಿಗನೇ ಬಲ್ಲನು. ಕಾಲ ಸರ್ಪ ಎಂದಿಗೂ ನಿನ್ನ ಪುಂಗಿಯ ನಾದಕ್ಕೆ ಮರುಳಾಗಲಾರದು.

ತಾಯ ಗರ್ಭದಲ್ಲಿ ಮೂಡಿ ನಿಂತ ಕೂಸು ಗಂಡು ಎಂದಾಗಲಿ,

ದೇವನ್ನು ಎಂದಾಗಲಿ ಖಚಿತವಾಗಿ ಹೇಳುವುದು ಕಷ್ಟವಿದ್ದಂತೆ ಭವಿಷತ್ತಿನ ಬಗೆಗೆ ಗಣಿತ ಹಾಕುವದೂ ದುಸ್ತರವಿದೆ. ಭವಿಷತ್ತನ್ನು ಅರಿಯಬಲ್ಲೆನೆಂದು ಹಂಬಲಿಸುವ ಎಲೆ ಸ್ನೇಹಿತ, ಜೀವನವು ನೀನೆಣಿಸಿದಷ್ಟು ಸುಂದರವಾಗಿಲ್ಲ. ಅದು ಬಹಳ ಕುರೂಪಿಯಾಗಿದೆ. ಭವಿಷತ್ತಿನ ಸರಾಪುಗನ್ನದ ಅದರ ಮೋಗವನ್ನು ನೋಡಬೇಕು. ಕಷ್ಟಕಾಲದಲ್ಲಿದ್ದವರ ಕಣ್ಣು ಮುಂದಾಗುತ್ತದೆ. ಅಂತಹರು ಅದನ್ನು ನೋಡಿದರೂ ಕಾಣಲರಿಯರು. ಸುಖಿಗೆ ಭವಿಷತ್ತು ಬಿಕ್ಕಾಗುವದು. ಎಂತಲೇ ಅವನು ಅದರ ಸಲಹೆಯನ್ನು ನವೆಯಲಿ. ಆದರೆ ಬುದ್ಧಿ ಸರಿಯಾಗಿದ್ದವನಿಗೆ ಭವಿಷತ್ತು ಕನಸಿನ ಗಂಟು.

ನಾನು ನನ್ನ ಹಿಂದೆ ಬಿಟ್ಟು ಬಂದ ದಿನಗಳನ್ನು ಅತ್ಯಂತ ಪ್ರೀತಿಸುತ್ತೇನೆ. ನಾಳೆ ನಾಳೆಗಳು ಹಿಂದುಕ್ಕೆ ಸರಿದಂತೆಲ್ಲ ಜೀವನದ ಸೌಂದರ್ಯ ಹೆಚ್ಚುವಂತೆ ನನಗನ್ನಿಸುತ್ತದೆ. ಭವಿಷತ್ತು ನನ್ನಿಂದ ಎರವಲಾಗಿ ಒಯ್ದು ಸಂಪತ್ತನ್ನು ತಿರುಗಿ ಮುಟ್ಟಿಸಿದಂತಾಗುತ್ತಿದೆ. ಅದು ನನಗೆ ಬಿರುದೇಯಾಗಿದೆ. ಅದರ ಕೃತಜ್ಞತೆಗಳನ್ನು ಅನುದಿನವೂ ನಾನು ವಿಶ್ವಾಸದೊಡನೆ ಸ್ವೀಕರಿಸುತ್ತಿದ್ದೇನೆ. ನನಗೂ ಭವಿಷತ್ತಿಗೂ ಇರುವ ಸಂಬಂಧವೇನೋ ನನಗೆ ಗೊತ್ತಿಲ್ಲ. ಬಹುಶಃ ಹೀಗೆಂಬುದೇ ಇರಬೇಕಲ್ಲ! ಇದ್ದರೆ ಒಳ್ಳೆಯದು.

ಅಹಂಕಾರ

ಮೈಗೆ ಹೊದಿಕೆ, ಹೊಟ್ಟೆಗೆ ಅನ್ನ ಪೂರ್ತಿಯಾಗಿ ಸಿಕ್ಕಮೇಲೆ ತಲೆಯು ಅಹಂಕಾರವನ್ನೇ ಕುರಿತು ಯೋಚಿಸುತ್ತದೆ. ಆಗ ಅದಕ್ಕೆ ಇನ್ನೊಂದರ ಸ್ಮರಣೆಯೇ ಇಲ್ಲ. ಅಹಂಕಾರವನ್ನು ಕೊಟ್ಟು ಅಹಂಕಾರವನ್ನು ಕೊಳ್ಳುವುದರಲ್ಲಿಯೇ ಅದು ನಿರತವಾಗಿರುತ್ತದೆ. ಅದು ಗಳಿಸಿದ ಐಸಿರಿಯು ಬೆಳುದಿಂಗಳ ಜಾತ್ರೆಯಾಗಿರುವುದು. ಅದನ್ನು ನಂಬಿ ಕೆಡದವನೇ ದರಿದ್ರ, ಚಾರುದತ್ತ.

ಅಹಂಕಾರ ಎರಡು ವಿಧ: ತಾಮಸ, ರಾಜಸ. ದುರಾಗ್ರಹ, ದುರುದ್ದೇಶಗಳಿಂದ ಪ್ರೇರಿತನಾದವನ ಅಹಂಕಾರ ತಾಮಸ ಅಹಂಕಾರ. ಅವನಿಗೆ ಯಾವುದರಲ್ಲಿಯೂ ನಂಬುಗೆ ವಿಶ್ವಾಸಗಳಿರುವದಿಲ್ಲ. ಎಲ್ಲ ಕಡೆಗೂ ತನ್ನ ಅಭಿಪ್ರಾಯವೇ ನಡೆಯಬೇಕು. ತನ್ನ ಮಾತೇ. ಮೂಗು ಮೇಲೆ ಮಾಡಿಕೊಂಡು ತಿರುಗಬೇಕು. ಎಂಬ ಛಲ ಅತಿ ಅವನಿಗೆ. ಬಲ್ಲಿದರ ಮಾತಿಗೆ ಎಂದಿಗೂ ಅವನ ಮನ್ನಣೆ ಸಿಗುವುದಿಲ್ಲ. ಮದಹಂಕಾರಿಯ ಸಮ್ಮತಿಯು ಹಾವಿನ ಹೆಡೆಗೆಯಂತಿರುವುದು. ಅವನ ನಗೆಯಲ್ಲಿ ಅಪಹಾಸ್ಯವೂ, ಮಾತಿನಲ್ಲಿ ವ್ಯಂಗ್ಯವೂ ತುಂಬಿರುವುದು. ಮೈಮರೆತು ನಿಂತ ಸುಜನರ ಮೇಲೆ ಅಹಂಕಾರಿಯು ದೋಷದ ಹೆಡೆಯೆತ್ತಿ, ದುಷ್ಟ ಮಾತಿನ ಫೂತ್ಕಾರ ಗೆಯ್ಯುವನು.

ರಾಜಸಿಯ ಅಹಂಕಾರವು ಮನಮೆಚ್ಚು ಮಾತದು. ಎಲ್ಲರಿಗಿಂತ ತಾನೇ ಹಿರಿಯನೆನ್ನುವಲ್ಲಿಯೇ ಅವನಿಗಿರುವ ಅಹಂಕಾರ. ಬೇರೆಯವರ ಅಭಿಪ್ರಾಯವನ್ನು ಹಸನವೆಂದೆತ್ತಿಕೊಂಡು ತನ್ನ ಬಾಳನ್ನು ಹಸನಗೊಳಿಸಲೆಳಸುವನು. ದೊಡ್ಡ ದೊಡ್ಡ ಮಾತುಗಳನ್ನು ಅವನೆಂದಿಗೂ ಆಡುವುದಿಲ್ಲ. ತನಗೆ ಅನ್ನಿಸಿದುದನ್ನೂ, ಬುದ್ಧಿಗೆ ಗೋಚರವಾದುದನ್ನೂ ನೂರು ಬಾರಿಯಲ್ಲ ಸಾವಿರ ಬಾರಿ ಒರೆಗಲ್ಲಿಗೆ ಹಚ್ಚಿ ತೀಡಿ ತನ್ನ ತಿಳಿವನ್ನು ತತ್ವದ ಗಟ್ಟಿಯನ್ನಾಗಿ ಮಾಡಿಕೊಂಡು ಹೃದಯದಲ್ಲಿ ಅದನ್ನಿರಿಸಿ

ಕೊಳ್ಳುವನು. ಯಾರ ಮಾತ್ರ ಬುದ್ಧಿಯೂ, ದುಷ್ಟನೆಂಬ ಅವನ ಅರಿವೆಯನ್ನು, ಸೋಂಕಿ ಮನಸ್ಸನ್ನು ಕಲುಷಿತಗೊಳಿಸಲಾರದು. ರಾವಣ ಅಹಂಕಾರಿ ಬಾನಿಗೆ ತಲೆ ಬಾಗಿಸಿಕೊಂಡು ನಿಂತ ಮಹಾ ಮೇರು ಪರ್ವತ ಸಿಡಿಲು ಮಿಂಚು ಗಾಳಿ ಅದಕ್ಕೆ ಅಷ್ಟು ಹಾನಿಯನ್ನು ಏನು ಮಾಡಿಯಾವು !

ಪಂಡಿತನು ಅಹಂಕಾರಿಯೂ, ಸಿರಿವಂತನು ಲೋಭಿಯೂ, ತತ್ತ್ವಜ್ಞಾನಿಯು ಕಾಮುಕನೂ ಆಗುತ್ತಾನೆ. ಇವರು ಈ ಗುಣಗಳನ್ನು ಬಿಟ್ಟು ತದ್ವಿರುದ್ಧವಾದ ವಿನಯವನ್ನು, ಔದಾರ್ಯವನ್ನು, ಸದಾಚಾರವನ್ನು ಅನುಕರಿಸುವುದಾದರೆ [illegible] ಶಿವನ ಜಡೆಯನ್ನು ಅಲಂಕರಿಸಿದಂತಾಗುವುದು. ಪಂಡಿತನೆಂದು ಹೇಳಿಕೊಳ್ಳುವವನಿಗೆ ಪ್ರತಿಕಕ್ಷಿಯು ಇದ್ದೇ ಇರುತ್ತಾನೆ. ಸಿರಿವಂತನೆಂದು ಮೆರೆಯುವವನ ತಲೆಯ ಮೇಲೆ ಜಿಗಿಯಲು ಇನ್ನು ಮಿಗಿಲಾದ ಸಿರಿವಂತರಿರುತ್ತಾರೆ. ತತ್ತ್ವವೇತ್ತನೆಂದು ಕೊಚ್ಚಿಕೊಳ್ಳುವವನಿಗೆ ಇದಿರಾಗಿ ನಿಂತು ವಾದದ ಕಣರಚಿಸಿ ರಂಗಕ್ಕಿಳಿಯಲು ಸ್ಪರ್ಧೆಗಾರನು ಸಜ್ಜಾಗಿಯೆ ಇರುತ್ತಾನೆ. ಆದುದರಿಂದ ನಾನೇ ಪಂಡಿತ, ನಾನೇ ಸಿರಿವಂತ, ನಾನೇ ಬ್ರಹ್ಮವಿಶಾರದನೆಂಬ ಅಹಂಕಾರ ಯಾರಿಗೂ ಬೇಡ. ನಾನು ಸಣ್ಣವ, ನನಗೆ ಇನ್ನೂ ಬುದ್ಧಿ ಸಾಲದು ಎಂದು ಹೇಳುತ್ತ ಕಂಡವರ ಬಾಳಿನಿಂದೊಂದು ಮಾತು ಕಲಿತು ಬೆಳೆಯುವವನೇ ಸರ್ವಜ್ಞನಾಗಿ ಮೆರೆಯುವನು. ಅಹಂಕಾರದ ರೋಗದಿಂದ ಪೀಡಿತನಾದವನಿಗೆ ಉದ್ಧಾರವೇ ಇಲ್ಲ. ಬೆಳೆಯುವ ಗಿಡಕ್ಕೆ ಹಾಕಿದ ಉಡಿದಾರದಂತಿರುವುದು ಅಹಂಕಾರ.

ಅಹಂಕಾರವು ದೈವದ ಕೈಯಲ್ಲಿರುವ ಗರಗಸ. ಅದರ ಕೊರೆತವು ತಿಳಿಯದಂತೆ ನಡೆದು ಹೋಗುವುದು. ಕೊರೆಯುವವರ ಕೈಗೆ ಸಿಕ್ಕ ಕಟ್ಟಿಗೆಯು ತುಂಡರಿಸಿ ಬೀಳುವ ಹೊತ್ತಿನಲ್ಲಿ ಗರಗಸದ ಪರಿಣಾಮವು ಗುರುತಾಗುವಂತೆ ದೈವದ ಕೈಯಲ್ಲಿ ಸಿಕ್ಕವನ ಬಾಳು ಹಾಳಾಗಿ ಹೋಗುವ ಕಾಲಕ್ಕೆ ಅಹಂಕಾರದ ಅರಿತದ ಪರಿಣಾಮವು ಗೋಚರವಾಗುವುದು. ಪಂಡಿತನಿಗೆ ಮಾನಹಾನಿ ಬಂದೊದಗಲಿ, ಸಿರಿವಂತನನ್ನು ಲಕ್ಷ್ಮಿ ಕೈ ಬಿಟ್ಟು ಹೋಗುವ ಸಮಯ ಬಂದೊದಗಲಿ. ತತ್ತ್ವಜ್ಞಾನಿಯನ್ನು

ಸಾವಿನ ಸಂಟರು ಕರೆದೊಯ್ಯುವ ಜಾವ ಬಂದೊದಗಲಿ. ಆ ಕಾಲ ಸನ್ನಿಹಿತವಾದಂದು ಅಹಂಕಾರವನ್ನು ನಂಬಿ ಕೆಟ್ಟುದಕ್ಕೆ ಅವರು ಒಂದೇ ಸವನೆ - ಗೋಗರೆಯುತ್ತಾರೆ. ಆದರೆ ದೇಹವೆಲ್ಲ ವಿಷಮಯವಾಗಿ ಹೋಗಿದೆ. ವಿವೇಕೋದಯವನ್ನು ಸೂಚಿಸುವ ಚಂದ್ರಮನು ಅಹಂಕಾರವೆಂಬ ರಾಹುಗ್ರಸ್ತನಾಗಿದ್ದಾನೆ. ಅವನಿಗಿನ್ನು ಬಿಡುಗಡೆಯೆ ಇಲ್ಲ. ಅಂತಹರನ್ನು ನೋಡಿ ಉಳಿದವರು ಪಾಠ ಕಲಿಯುವು ದೊಂದೆ ಗತಿ.

ಅಹಂಕಾರದ ಗಾಳಿಯಿಂದುಬ್ಬಿದವನನ್ನು ಎಲ್ಲರೂ ಸವಿಮಾತನಾಡಿ ಹುರಿದುಂಬಿಸಿ ತಮ್ಮ ಕಾರ್ಯವನ್ನು ಮುಗಿಸಿಕೊಂಡು ಹೋಗುತ್ತಾರೆ. ಸ್ವಾರ್ಥಸಾಧಕರು ಟೊಪ್ಪಿಗೆ ಹಾಕಲು ಯಾವಾಗಲೂ ಅಹಂಕಾರಿಯನ್ನು ಕಣ್ಣಿಟ್ಟು ಹುಡುಕುತ್ತಾರೆ. ಕಾರ್ಯ ಸಾಧಕರ ಬಲೆಯಲ್ಲಿ ಸಿಲುಕಿದ ಅಹಂಕಾರಿಗೆ ಏಳ್ಗೆಯೆ ಇಲ್ಲ. ಬಲಿಷ್ಠರ ಬೆನ್ನನ್ನು ಪೇಡಿಗಳೇ ಕಟ್ಟುತ್ತಾರೆ. ಸಿರಿವಂತನ ಸುತ್ತ ಮುತ್ತ ಎಂಜಲುಗುಳಿಗಳೇ ತಿರುಗಾಡುತ್ತಾರೆ. ಅಹಂಕಾರಿಯೇ ನೀನು ಮಹಾ ಜಿಪ್ಪು ತಕ್ಕಡಿ. ಎಲ್ಲರೂ ನಿನ್ನನ್ನುತುಳಿದೇ ಅಡ್ಡಾಡುತ್ತಿದ್ದಾರೆ. ನಿನಗೆ ಇನ್ನೂ ಎಚ್ಚರಿಕೆ ಬಾರದಲ್ಲ!

ತವಸಿಗಳನ್ನೂ, ದಾನಿಗಳನ್ನೂ, ವೀರ ಸೇನಾನಿಗಳನ್ನೂ ತಲೆಮೆಟ್ಟಿ ನಿಲ್ಲುವ ಶಕ್ತಿ ಅಹಂಕಾರದಲ್ಲಿದೆ. ಆದಿದೇವನ ಮಕ್ಕಳಾದ ಭರತ ಬಾಹುಬಲಿಗಳ ಜೀವನವೆ ಈ ಉಕ್ತಿಯ ಸತ್ಯತೆಯನ್ನು ಸಾರುತ್ತಿದೆ. ಷಟ್ಖಂಡಗಳನ್ನು ಗೆಲಿದು ಭೂವಲ್ಲಭನೆನ್ನಿಸಿಕೊಂಡ ಭರತ ಚಕ್ರವರ್ತಿಗೆ ತನ್ನ ಒಡಹುಟ್ಟಿದ ತಮ್ಮನನ್ನು ಜಯಿಸಬೇಕೆಂಬ ದುರಹಂಕಾರ ಮೊಳೆಯಿತು. 'ತಮ್ಮನು ನನ್ನ ಪಾದದ ಮೇಲೆ ಹಣೆಯಿಡದಿದ್ದರೆ ಸಾಮ್ರಾಜ್ಯವನ್ನು ಭೋಗಿಸಿಯೂ ಏನು ಫಲ' ಎಂಬ ಅಹಂಕಾರದಿಂದ ಪ್ರೇರಿತನಾದ ಅಣ್ಣ ಭರತ ಚಕ್ರೇಶ್ವರನು ಬಾಹುಬಲಿಯನ್ನು ಯುದ್ಧಕ್ಕೆ ಆಹ್ವಾನಿಸಿದನು. ಅಣ್ಣತಮ್ಮಂದಿರಲ್ಲಿ ಘೋರ ಸಂಗ್ರಾಮವಾಗಿ ಭರತ ಚಕ್ರೇಶ್ವರನು ಸೋತು ಹೋದನು. ಅಣ್ಣ ಸೋತು ನಿಂತರೆ, ತಮ್ಮನು ವೈರಾಗ್ಯಮುಖನಾಗಿ ಜಿನದೀಕ್ಷೆಯನ್ನು ಕೊಂಡು ತಪೋಯೋಗಿ

ಂದಿದನು. ಬಾಹುಬಲಿಗೆ ಭೋಗಾಕಾಂಕ್ಷೆಯಲ್ಲಿ ಸಂಪೂರ್ಣ ವಿಮುಖತೆಯುಂಟಾಗಿತ್ತು, ಪರವೋಪ ಶಮಂ, ಧರ್ಮಾನುರಾಗ ತೊರೆಕೊಂಡಿತ್ತು. ಏನೆಷ್ಟು ಘೋರತಪವೆಸಗಿದರೂ ಇನ್ನು ಕೇವಲ ಜ್ಞಾನೋತ್ಪತ್ತಿಯೇ ಆಗಲೊಲ್ಲದು. ಪುರುದೇವ ತೋರಿಸಿಕೊಟ್ಟ! ಅಣ್ಣನ ನೆಲದಲ್ಲಿ ನಿಂತು ತಪಸ್ಸು ಮಾಡುತ್ತಿದ್ದೇನೆಂಬ ಅಹಂಕಾರ ಬಾಹುಬಲಿಯ ಮನಸ್ಸನ್ನು ಹಾಳುಗೆಡಹಿತ್ತು! ಆ ಅಹಂಕಾರ ಕಾಲ್ದೆಗೆಯುವ ಮುನ್ನ ಬಾಹುಬಲಿಗೆ ಬಿಡುಗಡೆಯೆ ಇರಲಿಲ್ಲ!

ಬಾಹುಬಲಿಯೊಬ್ಬನನ್ನೇ ಅಲ್ಲ! ಲೋಕಸಂಗ್ರಹಕ್ಕಾಗಿ ದುಡಿದ ಮಹಾ ಮಹಾ ತಪಸ್ವಿಗಳನ್ನೇ ಅಹಂಕಾರವು ಅಲುಗಿಸಿ ನೋಡಿದೆ. ವಸಿಷ್ಠ ಋಷಿಯ ಮೇಲೆ ಮುನಿಸು ತಳೆದು ಹರಿಶ್ಚಂದ್ರ ರಾಜನನ್ನು ಕೋಪಾಗ್ನಿಗೆ ಆಹುತಿಮಾಡಿ ವಿಶ್ವಾಮಿತ್ರ ಮುನಿ ತನ್ನ ತಪಸ್ಸನ್ನೇ ಅಹಂಕಾರದ ಅಗ್ನಿ ಕುಂಡಕ್ಕೆ ಅರ್ಪಿಸಿದುದನ್ನು ಕೇಳಿ ಬಲ್ಲೆವು. ಜನಾಂಗದ ವಾದ ಮುಂದೆ ಮಾಡಿ ಅಹಂಕಾರದ ಧನುಸ್ಸು ಹಿಡಿದು ತಮ್ಮ ಎದೆಯನ್ನೇ ತಾವು ಮುರಿದುಕೊಂಡು ಬಿದ್ದ ಸೇನಾನಿಗಳ ದೃಷ್ಟಾಂತಕ್ಕೆ ಕೊರತೆಯೇನಿಲ್ಲ! ಅಹಂಕಾರ ತಳೆದ ಭೋಗಿಗರು ಗಾಳನುಂಗಿದ ಮೀನಿನಂತೆ ಚಟಪಟ ಒದ್ದಾಡಿ ಸತ್ತಿದ್ದರೆ ಏನಾಶ್ಚರ್ಯ!

ಅಹಂಕಾರದ ಗರಹಿಡಿದ ಲೋಕಕ್ಕೆ ಗೀತೆಯು ಅಮೃತ ಸಂದೇಶವೊಂದಿದೆ. "ಶ್ರೀ ಕೃಷ್ಣ, ಎಲ್ಲವನ್ನೂ ಮಾಡುವವನು ನೀನೆ. ನಾನು ನಿಮಿತ್ತ ಮಾತ್ರ. ನಾನು ಮಾಡುವೆನೆನ್ನುವನು ವೃಥಾಭಿಮಾನಿ ದುರಹಂಕಾರಿ" ಪ್ರಪಂಚದ ಆದಿಯಿಂದ ಮೊದಲ್ಗೊಂಡು ಆರೈಕೆಯ ಕೋಳ ತೊಟ್ಟಿಲಲ್ಲಿತ್ತಿಕೊಂಡು ಬಂದ ಸೃಷ್ಟಿಕರ್ತನನ್ನೇ ಅಹಂಕಾರಿ ಮರೆತು ಬಿಟ್ಟು 'ಇದೆಲ್ಲವೂ ನನ್ನಿಂದಲೇ' ಎಂಬ ದುರಭಿಮಾನದ ಕ್ಕೊಳಗಾಗಿ ಹೊನ್ನ ಸಂಕೋಲೆಯಿಂದ ಬಂಧಿಸಿಕೊಳ್ಳುವನು. ಅಹಂಕಾರಿ ಹೊಂದುವ ದುರ್ದೆಸೆಯನ್ನು ನನಗೆ ನೋಡುವುದ ಕ್ಕಾಗುವುದಿಲ್ಲ.

ಕಟ್ಟಕಡೆಯ ಶೀರ್ಷನ್ನು ನೀನು ಹೊಂದುವ ಕಾಲಕ್ಕೆ

ಅಹಂಕಾರವು ದುಷ್ಕೃತ್ಯಗಳ ಪಕ್ಷಕಕ್ಕೆ ನಿನಗೆ ದುರ್ಗತಿಯನ್ನುಂಟು ಮಾಡುವುದಕ್ಕೆ ಯತ್ನಿಸುತ್ತದೆ. ನೀನು ಜೀವಿಸಿರುವ ಮಟ್ಟಿಗೆ ಅಹಂಕಾರ ನಿನಗೆ ದುಡಿದು ತಂದು ಅನ್ನ ಬಟ್ಟೆಯನ್ನು ಒದಗಿಸೀತು. ಆದರೆ ಮನುಷ್ಯನು ಬರಿ ಅನ್ನ ಬಟ್ಟೆಗಳಿಗಾಗಿಯೇ ಬದುಕಿರುವನೆಂದು ನೀನು ಭಾವಿಸಿದ್ದರೆ ಅದು ಮಹಾ ತಪ್ಪು. ಅಂತಹ ಬದುಕನ್ನು ನಾನು ಮನುಜನ ಬದುಕೆಂದು ಕರೆಯುವುದಿಲ್ಲ. ಸರ್ವಾರ್ಪಣ ಬುದ್ಧಿಯುಳ್ಳ ಸನ್ಯಾಸಿಯೇ ಈ ನೆಲದ ಮೇಲೆ ಅಧಿಕಾರದಿಂದ ಆಳಬಲ್ಲ ಮನುಷ್ಯನೆಂದು ನಾನು ಅನ್ನುತ್ತೇನೆ. ಅವನಿಗೆ ಇಹವೂ ಉಂಟು. ಪರವೂ ಉಂಟು.

ಪ್ರಾರ್ಥನೆ

ಹೃದಯದಾಳದಿಂದ ಹೊರಹೊಮ್ಮಿ ಬಂದ ಪ್ರಾರ್ಥನೆಗೆ ಪರ್ವತಕ್ಕೆ ಪರ್ವತವನ್ನೇ ಕರಗಿಸುವ ಶಕ್ತಿಯುಂಟು. ಪ್ರಾರ್ಥನೆಯ ಒಲ್ಮೆಯಿಂದ ಬರಡು ಹೈನಾಗುವುದು, ಕಾಷ್ಠ ಕೊನರುವದು, ಕಲ್ಲಿಲ್ಲಿ ನೀರೆತ್ತುವುದು. ಪ್ರಾರ್ಥನೆಗೆ ಅಜೇಯವಾದ ಪಾರಮಾರ್ಥಿಕ ಸಾಮರ್ಥ್ಯವುಂಟು. ಅದರ ಕಿನ್ನರಿಯ ನಾದಕ್ಕೆ ಕಲ್ಲುದೇವರೂ ಮೈದೋರಿ ಬರುವನು. ನಿರಾಕಾರ ವಸ್ತುವು ಸಾಕಾರವಾಗುವುದು. ಜಡವಾದುದು ಸಚೇತನವಾಗುವುದು. ಕಾಯ್ದ ಜಲ ಉಗಿಯಾಗಿ ಹೊಗೆಯಾಗಿ ಮೋಡ ಮಾಲೆಯಾಗಿ ಬಂದು ನೆಲದ ಮೇಲಿಳಿದು ಬಂದು ಸಕಲಸೃಷ್ಟಿಗೆ ಸಂತೃಪ್ತಿಯನ್ನೀಯುವಷ್ಟೇ ಮಂಗಲಕರವಾದುದು ಪ್ರಾರ್ಥನೆ. ಹೃದಯದಲ್ಲಿ ಕಾವಿರಲಿ, ಮೃಗಜಲವನ್ನು ಹಿಡಿದು ತಂದೇನೆನ್ನುವ ಹಂಬಲವಿರಲಿ. ತದೇಕ ಚಿತ್ತದಿಂದ ಪ್ರಾರ್ಥನೆಗೆಯ್ಯುತ್ತ ನೀರಡಿಸಿದ ಪಯಣಿಗನು ಅವಿಶ್ರಾಂತನಾಗಿ ಸಾಗಲಿ; ಅನತಿ ದೂರದಲ್ಲಿ ನೆಳಲಿದೆ, ನೀರಿದೆ, ವಿಶ್ರಾಂತಿಧಾಮವಿದೆ. ಅಲ್ಲಿ ಕನಸು ನನಸಾಗಲಿದೆ, ಬಯಕೆ ಫಲ ಬಿರಿಯಲಿದೆ.

ಪ್ರೇಮವೂ ಪ್ರಾರ್ಥನೆಯೂ ಒಂದು ನಾಣ್ಯದ ಎರಡು ಮುಖಗಳು. ಹೃದಯದಲ್ಲಿ ಪ್ರೇಮವಿಲ್ಲದವನು ಪ್ರಾರ್ಥನೆಯ ಫಲವನ್ನು ಹೊಂದಲಾರನು. ಸಚ್ಚಿದಾನಂದ ಸಂಪತ್ತಿನ ವಸಂತವು ಪ್ರೇಮದ ಹೃದಯ ವಲ್ಲಭಕವಾಗಿರುತ್ತದೆ. ದೇವರು ಪ್ರೇಮದ ಆರಾಧಕರಿಗಷ್ಟೇ ಒಲಿಯುತ್ತಾನೆ. ಸೃಷ್ಟಿಯ ಚರಾಚರ ವಸ್ತುವಿನಲ್ಲಿ ಶಿವನ ಸತ್ಕಳೆಯ ಅಂಶವನ್ನು ಗುರುತಿಸಿ, ಪ್ರೇಮದಿಂದ ಪೂಜಿಸುವವನಿಗೆ ಈ ಲೋಕದಲ್ಲಿ ಅತ್ಯಧಿಕವಾದ ಮನ್ನಣೆಯು ದೊರೆಯುವುದು. ಆರಾಧಕನ ಅಂತರಂಗ ಮಂಟಪದಲ್ಲಿ ಪ್ರೇಮದ ರಹಸ್ಯವಡಗಿರಬೇಕು. ಪಶು ಪಕ್ಷಿ ಮನುಷ್ಯರನ್ನು ಅರಿತು ಪ್ರೀತಿಸಬಲ್ಲಾತನೇ ಪ್ರಾರ್ಥನೆಯನ್ನು ಚೆನ್ನಾಗಿ ಮಾಡಬಲ್ಲನು. ಅಂತಹವನ ಕಡೆಗೆ ಶಿವನು ಶೀಘ್ರವಾಗಿ ಬರುತ್ತಾನೆಂದು ಆಂಗ್ಲ ಕವಿ ಕೋಲರಿಡ್ಜನು ಹೇಳಿರುವನು.

ಸಂಕಟ ಬಂದಾಗ ವೆಂಕಟರಮಣನನ್ನು ಕರೆಯುವವರೇ ಹೆಚ್ಚು. ಕೈ ತಪ್ಪಿ ಹೋದಾಗ ಕೃಷ್ಣಾರ್ಪಣವೆಂದೆನ್ನುವ ಭಕ್ತರಿಗೆ ಕೊರತೆಯೇ ಇಲ್ಲ. ದುಃಖ ಬಂದೊದಗಿದಾಗ ಪ್ರಾರ್ಥನೆಯ ಲಂಚವನ್ನು ಕೊಟ್ಟು ದೇವರನ್ನು ಒಲಿಸಿಕೊಳ್ಳುವುದಕ್ಕೆ ಅವನೇನು ಕಂದಾಯ ಖಾತೆಯ ಅಮಲದಾರನಲ್ಲ. ಲಂಚನಿರ್ಮೂಲನ ಖಾತೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಬಲ್ಲವನೇ ಪ್ರಾರ್ಥನೆಯ ಹಿರಿಮೆಯನ್ನು ಅರಿಯ ಬಲ್ಲನು. ಸತ್ಯಲೋಕದಿಂದಿಳಿದು ಬಂದ ಹರಿಕಾರನ ಸಂದೇಶವೇ ಪ್ರಾರ್ಥನೆ. ಅಲ್ಲಿ ಅಧಿಕಾರದ ಹೆದರಿಕೆಯಿಲ್ಲ, ಹೆಚ್ಚಿನ ಪದವಿಯ ಆಸೆಯಿಲ್ಲ. ಪ್ರಾರ್ಥನೆಯ ಮೂಲಕ ಫಲವನ್ನು ಕೋರುವವನು ತುಂಬ ನಿರಾಶೆ ಹೊಂದುವವನು. ಏಕೆಂದರೆ ಅನಾಸಕ್ತಿಯ ಬುನಾದಿಯ ಮೇಲೆಯೆ ಪ್ರಾರ್ಥನಾ ಮಂದಿರವು ನಿಂತಿರುತ್ತದೆ.

ಪುಸ್ತಕಗಳನ್ನು ಓದಿಯೊ, ಧರ್ಮಪ್ರಚಾರಕರನ್ನು ಕೇಳಿಯೊ ಪ್ರಾರ್ಥನಾ ಪದ್ಯಗಳನ್ನು ಕಂಠಪಾಠಮಾಡಿದವನಿಂದಲೊ 'ಗ್ರಾಮಾಫೋನಿ'ಗಿಂತ ಹೆಚ್ಚಿನ ಕಾರ್ಯವಾಗಲಾರದು. ಪ್ರಚಾರಕರಿಂದ ಯಾವಾಗಲೂ ಸತ್ಯದ ಕೊಲೆಯಾಗುತ್ತದೆ. ಫಾದ್ರಿಗಳಾಗಲಿ, ಫಕೀರರಾಗಲಿ, ದಿಗಂಬರರಾಗಲಿ ಜಂಗಮರಾಗಲಿ 'ಭವತಿ ಭಿಕ್ಷಾಂದೇಹಿ'ಗಾಗಿಯೇ ಸಂನ್ಯಾಸ ಕೈಕೊಂಡವರು ಹೊಟ್ಟೆ ತುಂಬಿದ ಮರುಚಣದಲ್ಲಿಯೆ ಅವರು ಧರ್ಮದ ಮುಸುಕಿನಲ್ಲಿ ದುರ್ವರ್ತನೆಯ ಬಿಚ್ಚುಗತ್ತಿಯನ್ನು ಹಿರಿದು ನಿಂತು ಲೋಕಕಂಟಕರಾಗುತ್ತಾರೆ. ಪ್ರಾರ್ಥನೆಯ ಪದ್ಯಗಳನ್ನು ಉಚ್ಚರಿಸುತ್ತ ಬೀದಿಯಲ್ಲಿ ತಿರುಗುವವರು ಉದರ ವೈರಾಗಿಗಳು. ಆದುದರಿಂದ ಅಂತಹರ ಕಂಠಘೋಷಣೆಗೆ ನೀನು ಕಿವಿಗೊಡಬೇಡ.

ಮೌನವಾದ ಸೃಷ್ಟಿಯಂತರಾಳದಲ್ಲಿಯೆ ಪ್ರಾರ್ಥನೆಯು ನಿತ್ಯಕೇಳಬಿದೆ. ಗಿಡಮರಗಳನ್ನು ನೋಡು, ಪಶುಪಕ್ಷಿಗಳನ್ನು ಅವಲೋಕಿಸು. ಸೂರ್ಯಚಂದ್ರಮರ ಉದಯಾಸ್ತಗಳನ್ನು ಪರೀಕ್ಷಿಸು. ಗುಡ್ಡಬೆಟ್ಟಗಳಡಿಯಲ್ಲಿ ಮಂಜುಳ ನಿನದಗೈಯುತ್ತ ಹೊರಟ ಝರಿ ಕಾವಲಿಗಳನ್ನನುಲಕ್ಷಿಸು. ಎಲ್ಲೆಲ್ಲೂ ಶಿವನ ಸ್ತುತಿಯಿದೆ, ಪಾಪಿಯನ್ನು ಮನ್ನಿಸುವ ಅಭಯದ ಸಂದೇಶವಿದೆ. ಪತಿತರನ್ನು ಮೇಲಕ್ಕೆತ್ತುವ ಧರ್ಮಬಂಧವಿದೆ.

ಆಗೋ ಆ ಸಂಧ್ಯಾಸೂರ್ಯನ ಹೊಂಬೆಳಗಿನಲ್ಲಿ ಬೆಟ್ಟದ ತುದಿಯ ಮೇಲೆ ಆಡುವ ಶಾಂತಿ ಶೀತಲ ಮರೀಚಿಗಳನ್ನು ನೋಡು, ಆ ಗಿರಿ ಕಟಕದ ಪಕ್ಕಕಿನಲ್ಲಿ ಬಿಂಬಿಸಿದ ಅರುಣೋದಯದರುಣದ್ಯುತಿಯನ್ನಷ್ಟು ನಿರೀಕ್ಷಿಸು, ಆ ತೋಟದ ಮರದ ತುತ್ತ ತುದಿಯನೇರಿ ಕುಳಿತ ಬಳ್ಳಿ ಪಾತಗಳ ನಾಳನಾಳದಲ್ಲಿ ಜೀವ ಸಂಚಾರವಾಗುವುದನ್ನು ಕಂಡು ಬಂದೇ ನವಿರೆ ಹಾಡುವ ಕೋಗಿಲೆಯಿಂಚರವನ್ನು ಆಲಿಸು- ಅದು ಎಂತ ಶ್ರವಣ ಎಂತ ಮನನ, ಎಂತ ನಿಧಿಧ್ಯಾಸ! ಸೃಷ್ಟಿಯ ಆರಾಧನೆಯಲ್ಲಿ ಅವರ ಗೀತೆಯು ಸಂಕೇತವಿದೆ. ಅದನ್ನು ನೀನು ನಿರೀಕ್ಷಿಸು ಮತ್ತು ಪ್ರಾರ್ಥಿಸು!

ಪ್ರಾರ್ಥನೆ ಫಲಿಸುವುದಕ್ಕೆ ಮುಖ್ಯವಾದ ನೆರವು ನಂಬುಗೆ. ನಂಬುಗೆಯನ್ನಿಡದೆ ಕಣ್ಮುಂದಿನ ಕಾರ್ಯಸಿದ್ಧಿಗಾಗಿ ಪ್ರಾರ್ಥಿಸುವವನು ತನ್ನನ್ನು ತಾನೇ ವಂಚಿಸಿಕೊಳ್ಳುವನು. ಅವನ ಜಪ ತಪ, ಮಡಿ ಮೈಲಿಗೆಗಳೆಲ್ಲ ನಟನೆಯೆ ಸರಿ ಅವನ ಪ್ರಾರ್ಥನೆಯು ಅಡವಿಯಲ್ಲಿ ದಾರಿ ತಪ್ಪಿದವನಂತೆ ಅಡ್ಡಹಾದಿಯನ್ನು ಹಿಡಿದು ಅನರ್ಥವನ್ನೆ ಸಾಧಿಸುವುದು. ಮನದಲ್ಲಿ ಭಕ್ತಿ, ನಡತೆಯಲ್ಲಿ ನೈರ್ಮಲ್ಯವಿರಲಿ; ಮಾಡಿದ ತಪ್ಪಿಗಾಗಿ ಕಣ್ಣ ಗೊಂಬೆಯ ಸಂಚಾರವನ್ನೇ ನಿಲ್ಲಿಸಿ ‘ಮನ್ನಿಸೋ’ ಎಂದು ಮನಮುಟ್ಟಿ ಬೇಡಿಕೊಳ್ಳುವ ಹಂಬಲವಿರಲಿ. ಅಂತ ಭಾವವನ್ನು ಸಂಧಿಸಿ ಕೈ ಜೋಡಿಸಿ ನಿಂತುಕೊಂಡವನ ಬೊಗಸೆಯಲ್ಲಿ ಬಿಡುಗಡೆಯ ಪುಷ್ಪ ಬಂದು ಬೀಳುತ್ತದೆ. ರತ್ನತ್ರಯದ ಶುದ್ಧಿಗಾಗಿ ನಂಬಿ ಪ್ರಾರ್ಥಿಸುವವನಿಗೆ ಸ್ವರ್ಗದ ಬಾಗಿಲದ ಕೈ ಕಣ್ಮುಂದೆಯೆ ದೊರೆಯುವುದು.

ಪ್ರಾರ್ಥನಾ ಪದ್ಧತಿಯನ್ನು ನೋಡಿ ಕಲಿಯಬಾರದು ಅದು ಅನುಭವದ ಆಳದಿಂದ ಹರಿದು ಬರಬೇಕು. ದುಃಖಿಗೆ, ದೀನ ದರಿದ್ರರಿಗೆ ಪ್ರಾರ್ಥನೆಯೇ ಊರುಗೋಲು. ಆದರೆ ಅದರ ನೆರವಿನಿಂದ ಅವರು ದೀರ್ಘವಾದ ಪಯಣ ಕೈಕೊಳ್ಳಲಾರರು. ಕಾರ್ಗತ್ತಲಲ್ಲಿ ನಡೆದ ಪಥಿಕನಿಗೆ ಪ್ರಾರ್ಥನೆಯೆ ಮಿಂಚು. ಅಂತ ಮಿಂಚು ಸೇರಿದ ಹೊತ್ತಿನಲ್ಲಿಯೇ ಮುಂದಿನ ದಾರಿಯನ್ನು ಕಂಡುಕೊಳ್ಳಬೇಕಾಗುವುದು. ದಾರಿ ನಡೆದು ಉಷಃ ಕಾಲದಲ್ಲಿ ಊರು ಸೇರಿ ನಿಂತ ಪಯಣಿಗನು ಹಿಂದಿನ ಪರಿಸ್ಥಿತಿಯನ್ನು ಮರೆಯಲಾರನು. ಜೀವನದ ಸಂಧ್ಯಾಕಾಲದಲ್ಲಿ .

ಅನಿರೀಕ್ಷಿತವಾಗಿ ಅರಿತುಕೊಂಡ ಪ್ರಾರ್ಥನೆಯ ಮಹತಿಯನ್ನು ಲಕ್ಷ್ಯಕ್ಕೆ ತಂದು ಅನುದಿನವೂ ಅದಕ್ಕೋಸುಗ ಕೆಲ ಸಮಯವನ್ನು ಮೀಸಲಾಗಿರಿಸಬೇಕು. ಪ್ರಾರ್ಥನೆಯೂ ಕೂಡ ಒಂದು ಚಟವೇ. ಅದರ ಸವಿ ಹತ್ತಿತೆಂದರೆ ಅದನ್ನು ಬಿಡುವುದಾಗುವದಿಲ್ಲ. ಅದು ಮಾತಿಗೆ ಮೀರಿದ ಸಂಭ್ರಮ. ಪ್ರಾರ್ಥನೆಯ ಸಮ್ಮುಖದಲ್ಲಿಯೇ ಸ್ವರ್ಗೀಯ ಸುಖ ಸಂತೃಪ್ತಿಯುಂಟು.

ಪ್ರಾರ್ಥನೆಯೂ ಒಂದು ರೀತಿಯ ಅಭ್ಯಾಸವೆ. ಮೊದಮೊದಲು ಸಾಮೂಹಿಕವಾಗಿಯೆ ಅದನ್ನು ನಡಸಬೇಕು. ಅಲ್ಲಿ ಅಭ್ಯಾಸವಾದ ನಂತರ ಮನೆಯ ದೇವರ ಗದ್ದುಗೆಯ ಮುಂದೆ ಸಾಗಿಸಬೇಕು. ಕಾಲ ಗತಿಯಲ್ಲಿ ಪ್ರಾರ್ಥನಾ ಸಂದೇಶ ಸಚೇತನಾರೂಪ ತಳೆದು ಇದಿರಿನಲ್ಲಿ ಬಂದು ಉಪಸ್ಥಿತವಾಗತೊಡಗಿದ ನಂತರ ಮನೆಬಿಟ್ಟು ಬಯಲ ಸೇರಬೇಕು. ಜನಮನಗಳ ಕಿವಿಯಲ್ಲಿ ಸುತ್ತಿ ಸುಳಿವ ಪ್ರಾರ್ಥನೆಯು ಶೂನ್ಯದೊಡಲನ್ನು ಸೇರುವುದು. ಅಂತಹ ಶೂನ್ಯದೊಡನೆ ನಿಷ್ಕಾಮ ಕರ್ಮಿ ಪ್ರಾರ್ಥನೋತ್ತರ ಮಾತು ಕತೆ ನಡಸಲಿ. ಅಲ್ಲಿಯ ಸುಖವೇ ಸುಖ, ಸಂಭ್ರಮವೇ ಸಂಭ್ರಮ !

ಈ ಜಗತ್ತಿನಲ್ಲಿ ದುಃಖಿಗಳಿಗೂ, ದರಿದ್ರರಿಗೂ, ಪಂಡಿತರಿಗೂ ಸಾಂತ್ವನ ಹೇಳುವವರೇ ಇಲ್ಲ. ಎಲ್ಲರೂ ಬಿದ್ದ ಮನೆಯಗಳ ಹಿರಿಯುವವರೇ. ತಾಯಿಗಿಂತ ಬಂಧುವಿಲ್ಲವೆನ್ನುವ ಗಾದೆಯ ಮಾತು ನಾವು ಕೇಳಿದ್ದೇವೆ. ಆದರೆ ತನ್ನ ತಾಯ್ತನದ ಮೌನ ರಕ್ಷಣೆಗಾಗಿ ಮಗನನ್ನೇ ಗಂಗಾಜಲದಲ್ಲಿ ತೇಲಿ ಬಿಟ್ಟ ಕತೆಯನ್ನು ಆದಿಕವಿಯೇ ಹೇಳಿದ್ದಾನೆ. ಸಾವಿನ ಪ್ರಶ್ನೆ ಬಂದಾಗ ತಾಯಿ ಮಕ್ಕಳ ಸಂಬಂಧವೇ ಉಳಿಯದೆಂಬುದನ್ನು ಬೀರಬಲ್ಲನು ಹೌದಿನಲ್ಲಿ ನೀರು ಬಿಟ್ಟು ಮಂಗನ ದೃಷ್ಟಾಂತದಿಂದ ಸಿದ್ಧಪಡಿಸಿ ತೋರಿಸಿದ್ದಾನೆ. ಲೋಕಕ್ಕೆ ಲೋಕವೇ ನಿನ್ನನ್ನು ಸಂಕಟದ ಅಗ್ನಿಕುಂಡದಲ್ಲಿ ನೂಕಿ ಚಪ್ಪಾಳೆ ಹೊಡೆಯುವ ಹೊತ್ತಿನಲ್ಲಿ ನಿನ್ನ ನೆರವಿಗೊಂದು ದಿವ್ಯ ಶಕ್ತಿಯಿದೆ. ಆ ಶಕ್ತಿ ಪ್ರಾರ್ಥನೆಯಲ್ಲಿರುವುದೆಂಬುದನ್ನು ಅರಿತು ಉದ್ಧಾರವಾಗು. ಆತ್ಮದ ಉದ್ಧಾರ ಪ್ರಾರ್ಥನೆಯಲ್ಲಿದೆ. 'ಈ ಜಗತ್ತು ಕನಸಿನಲ್ಲೂ ಕಾಣದಂತಹ ವಸ್ತುಗಳನ್ನು

ಪ್ರಾರ್ಥನೆಯ ಮೂಲಕ ನೀನು ಸಂಪಾದಿಸುವಿ' ಎಂದು ಟೆನಿಸನ್ ಕವಿ ಪ್ರತಿಪಾದಿಸಿದ್ದೇ ನಿಜ.

ಯಾವ ಭಿಡೆ ಮುರವತ್ತುಗಳಿಗೂ ನೀನು ಸಿಲುಕಬೇಡ. ದಂಗಿಗೊಳಗಾದ ಮನುಷ್ಯನಿಗೆ ವ್ಯಕ್ತಿತ್ವವೇ ಇರಲಾರದು. ವ್ಯಾವಹಾರಿಕವಾದ ಪ್ರಪಂಚಕ್ಕೆ ಅಂಜಿ ಸತ್ಯವನ್ನು ಮುಚ್ಚಿ ಹೇಳುವವನು ಸಾಯುವ ಮುನ್ನವೇ ನೂರು ಸಲ ಸತ್ತುಹೋಗುತ್ತಾನೆ. ಒಂದು ವೇಳೆ ತಾಳಲಾರದ ಸಾವು ನೋವು ನಿನಗೆ ಬಂದುದಾದರೆ ಕೊಳನ ತಡೆಯಲ್ಲೋ, ಊರ ಮುಂದಿನ ಕಲ್ಲು ದುಂಬದಿಯಲ್ಲೋ ಏಕಾಕಿಯಾಗಿ ನಿಂತು ಕಾಲನೂರಿ ಕೈಜೋಡಿಸಿ 'ಕರುಣಾಳು ಬಾ ಬೆಳಕೆ' ಎಂದು ತದೇಕ ಚಿತ್ತದಿಂದ ಪ್ರಾರ್ಥಿಸು. ನಿನ್ನ ಬಿನ್ನಹ ನೇರವಾಗಿ ಅನಿಲ ವೇಗದಿಂದ ಸ್ವರ್ಗಕ್ಕೇ ಹೋಗಿ ಅನುಪಮ ಶಾಂತಿ ಸಂದೇಶವನ್ನು ತಂದೀಯುವುದು. ಆ ಸಾಂತ್ವನವನ್ನು ನೀನು ಮುಂಗೈ ರಕ್ಷೆಯನ್ನಾಗಿರಿಸಿಕೊಂಡು ವಿಶ್ವಕ್ಕೆ ವಿಶ್ವವನ್ನೇ ನೀನು ಇದಿರಿಸಬಲ್ಲಿ.

ಸಿಟ್ಟು

'ಧ್ಯಾನದಿಂದ ಸಂಗ, ಸಂಗದಿಂದ ಕಾಮ, ಕಾಮದಿಂದ ಕ್ರೋಧ, ಕ್ರೋಧದಿಂದ ಬುದ್ಧಿನಾಶವಾಗಿ ಪಂಡಿತನು ಹಾಳಾಗಿ ಹೋಗುತ್ತಾನೆ.' ಎಂದು ಗೀತಾಕಾರ ಹೇಳಿರುವನು. ಸಿಟ್ಟಿನ ಉಗಮವನ್ನು, ಕೊನೆಯನ್ನು ಈ ಕವಿಯ ಮಾತಿನಲ್ಲಿ ನಾವು ಕಾಣಬಹುದಾಗಿದೆ. ಧ್ಯಾನ ಮಾಡುವ ಶಕ್ತಿ ಎಲ್ಲರಲ್ಲೂ ಇರುವುದಿಲ್ಲ. ಅದು ಪೂರ್ವ ಜನ್ಮದ ಸುಕೃತದಿಂದ ದೊರೆಯುವದು. ಕವಿಗಳು, ಋಷಿಗಳು ಪಂಡಿತರು ಇವರೆ ಮುಂತಾದ ಭಾವ ಜೀವಿಗಳೆಲ್ಲರೂ ಧ್ಯಾನಶೀಲರು. ಈ ಗುಣ ತಳೆದ ಇವರು ಕೀರ್ತಿ ಭಾಜನರಾಗಬೇಕು, ಇಲ್ಲವೆ ಹೇಳ ಹೆಸರಿಲ್ಲದಂತೆ ನಶಿಸಿ ಹೋಗಬೇಕು. ಧ್ಯಾನ ಮಾಡುವ ಶಕ್ತಿಯನ್ನು ಪಡೆದವನೂ ಒಂದು ಬಗೆಯ ಮೋಡಿಕಾರನು. ಅವನ ಮೋಡಿಯೆ ಒಮ್ಮೊಮ್ಮೆ ಅವನನ್ನು ಕೊಲ್ಲುತ್ತದೆ. ಧ್ಯಾನದಿಂದ ಬಿಡುಗಡೆಯೂ ಉಂಟು. ಬಿಡಿಸಲಾರದ ಬಂಧನವೂ ಉಂಟು. ಆದುದರಿಂದ ಭಾವಜೀವಿಗಳು ಜೀವನದ ರಂಗ ಭೂಮಿಯ ಮೇಲೆ ಮುಳ್ಳಿನ ಹಾಸುಗೆಯ ಮೇಲೆ ನಡೆದಂತೆ ನಡೆಯ ಬೇಕಾಗುವುದು.

ಮುನಿಗಳ ಮುನಿಸು ಮೂಗುದುದಿಯಲೇ ಇರುವುದೆಂಬ ಹೇಳಿಕೆಯೊಂದುಂಟು. ಅದುದು, ವಿಶ್ವಾಮಿತ್ರನ ಜೀವನವೇ ಒಂದು ಉದಾಹರಣೆಗೆ ಸಾಕು. ಅವನ ಸಿಟ್ಟೇ ಅವನ ತಪಸ್ಸಿನ ಫಲವನ್ನು ನುಂಗಿ ನೀರು ಕುಡಿಯಿತು. ಸೌದಾಮಿನಿಯಂತೆ ಹೊಳೆದು ಹೋದ ಸಿಟ್ಟು ಮುನಿಯ ಯುಗ ಯುಗದ ತಪಸ್ಸನ್ನೇ ಹಾಳುಗೆಯ್ದ ಮೇಲೆ ಇನ್ನು ಲೋಗರ ಮಾತನ್ನೇನೆಂದು ಹೇಳಬೇಕು? ಹಾಗಾದರೆ ಅವರಿದಿರು ಇಲ್ಲಿರುವ ಸಮಸ್ಯೆ ಎಂತಹದು? ಭಾವ ಜೀವಿ ಈಗ ಮಾತ್ರ ಯೋಚಿಸಿ ಹೇಳಬೇಕು. ವಿಶ್ವಾಮಿತ್ರನೊಂದಿಗೆ ಮೇನಕೆ ಬರುತ್ತಾಳೆ. ಸಾಕ್ರೆಟೀಸನೊಂದಿಗೆ ಮಾರಿ ಹೆಂಡತಿ ಬರುತ್ತಾಳೆ. ನೀನು ಇವರಿಬ್ಬರಲ್ಲಿ ಯಾರ ಬೆನ್ನ ಕಟ್ಟುತ್ತೀಯ?

ಪಾಪದ ನೆಲಗಟ್ಟಿನ ಮೇಲೆ ಕೋಪವು ತನ್ನ ಭದ್ರವಾದ ಮಂದಿರವನ್ನು ಕಟ್ಟುತ್ತದೆ. ಆ ಮಂದಿರದಲ್ಲಿಯ ದೇವರುಗಳೇ ಬೇರೆ. ಅರ್ಚಕರೇ ಒಂದು ವಿಧ. ತಾನು ವಾಸಿಸುವ ಮನೆಯೇ ಭದ್ರವೆಂದೂ, ತನ್ನ ಸುತ್ತು ಮುತ್ತು ಗಾಳಿ ಮಳೆ ಮಿಂಚು ಗುಡುಗುಗಳು ಬಾರವೆಂದೂ ಮನೆಯೊಡೆಯನ ನಂಬುಗೆ. ಜವಾನರು ಸಲ್ಲಿಸುವ ಸೇವಾಭೃತ್ಯ, ಹೆಂಡತಿ ಮಕ್ಕಳು ತೋರುವ ವಿನಯ ಇಂತಹಗಳನ್ನು ಕಂಡು ಕೋಪಿ ಉಬ್ಬಿ ಹೋಗುತ್ತಾನೆ. ಆದರೆ ತಾನೊಂದು ಹಾಳುಮರಕ್ಕೆ ಸಮನೆಂಬುದರ ಅರಿವು ಕೋಪಿಗೆ ಇರುವುದೇ ಇಲ್ಲ, ಏನು ಮಾಡುವದು? ಸಿಡಿಲು ಹೊಡೆವ ಕಾಲಕ್ಕೆ ಹಾಳುಮರದ ಹತ್ತಿರ ಯಾರು ಹೋಗಿ ನಿಲ್ಲುತ್ತಾರೆ!

ಬಾಳಿನ ಉದ್ಯಾನದಲ್ಲಿ ನೂರೊಂದು ಗಿಡ ಬಳ್ಳಿ. ಕೆಲವು ಉದ್ಯಾನದ ಸಿಂಗಾರವನ್ನು ಹೆಚ್ಚಿಸುವುದಕ್ಕಿರುತ್ತವೆ. ಕೆಲವು ತೋಟದ ಸಿಂಗಾರಕ್ಕೆ ಮಾತ್ರವಲ್ಲದೆ ಜೀವನದ ಉಪಯುಕ್ತತೆಗೂ ಅನುಕೂಲ ವಾಗುವಂತಹವಿರುತ್ತವೆ. ಸಿಟ್ಟು ಎರಡನೆಯ ಪಕ್ಷವನ್ನು ಸುತ್ತು ಹಾಕುವ ಬಳ್ಳಿ. ಅದು ಕೆಂಪು ದಾಸಾಳದ ಹುವ್ವು ಇದ್ದ ಹಾಗೆ. ಶಿವನ ಸಿರಿ ಮುಡಿಯನ್ನೇರಿದ ಹುವ್ವು ಅವನ ಕಾಲಬಳಿಯಲ್ಲಿಯೂ ಅಲಂಕೃತ ವಾಗುವುದು. ಪನ್ನಗಧರನ ಜಟಾಜೂಟದಲ್ಲಿ ಮಂಡಿತವಾದ ಗಂಗೆ ಪಾದದಡಿಯಲ್ಲಿಯೂ ಹರಿಯಬಲ್ಲಳು. ಸಿಟ್ಟು ಕೂಡ ಕಾಲೋಚಿತ ವಸ್ತುರೀತ್ಯಾ ಆ ಆ ಸ್ಥಾನವನ್ನಾಕ್ರಮಿಸಬೇಕು.

ಅಭಿಮಾನದ ಸೌಧಕ್ಕೆ ಸಿಟ್ಟು ಲೋಹಚುಂಬಿತ ಸಲಾಕೆ. ಆಗಸದಿಂದ ಅಬ್ಬರ ಮಾಡುತ್ತ ಬಂದ ಇಂದ್ರನ ದಾಳಿಗಾರನೂ ಕೂಡ ಈ ಲೋಹಚುಂಬಿತ ಸಲಾಕೆಯ ಹತ್ತಿರ ಬಂದು ಕೈ ಜೋಡಿಸಿ ತನ್ನ ಸೋಲನ್ನು ಮೌನದಿಂದ ಒಪ್ಪಿಕೊಳ್ಳುತ್ತಾನೆ. ಪ್ರಪಂಚವೇ ರಂಗಭೂಮಿ, ಜೀವನವೆ ಒಂದು ನಟನೆ, ಮನುಷ್ಯ ಮಾತ್ರರೆಲ್ಲ ಪಾತ್ರಧಾರಿಗಳು. ಎಂದ ಮೇಲೆ ವಿವಿಧ ಭಾವಗಳನ್ನು ನಟನು ಅನುಸರಿಸಬೇಕಾಗುವುದು. ಗೊಲ್ಲನ ಪುಂಗಿಗೆ ತಲೆಬಾಗಿಸಿ ನಿಂತ ಏಳು ಹೆಡೆಯ ಸರ್ಪವು ಹೌರಾಗಿ ಹೇಳಿಗೆಯನ್ನು ಸೇರುತ್ತದೆ. ಹಲ್ಲನ್ನು ಮುರಿಸಿಕೊಳ್ಳುತ್ತದೆ. ವಿಷದ ಚೀಲದಿಂದ ದೂರವಾಗುತ್ತದೆ. ಸ್ವರಕ್ಷಣೆಗಾಗಿ ಅದು ಹೆಡೆಯೆತ್ತಿ ಹರಿದಾಡಬೇಕು. ಪುಂಗಿಯನ್ನು ಕೈ ಬಿಡಿಸುವಂತೆ ಭೋರಾಡುತ್ತ

ನೆಲವನ್ನಪ್ಪಳಿಸಿ ರೋಷವನ್ನು ವ್ಯಕ್ತ ಪಡಿಸಬೇಕು, ಕಾಲಕೂಟ ಕ್ರೌರ್ಯವನ್ನು ಏಳು ಹೆಡೆಬಿಚ್ಚಿ ಫೂತ್ಕರಿಸಬೇಕು. ಅಷ್ಟಾದರೇನೆ ವೈರಿ ಹಿಂದಕ್ಕೆ ಸರಿದು ಜೀವರಕ್ಷಣೆಯಾಗುತ್ತದೆ. ಇಲ್ಲದೆ ಹೋದರೆ ಅಹಿಂಸಾ ದೀಕ್ಷೆಯನ್ನು ಕೈಕೊಂಡ ಘಟಸರ್ಪವನ್ನು ದನಕಾಯುವ ಹುಡುಗರೂ ಬಾರಕೋಲಿನಿಂದ ಹೊಡೆದು ಗಾಸಿಗೊಳಿಸುವರು. ಕಾರಣ ಸಿಟ್ಟು ತೋರಿಕೆಗಾದರೂ ಇರಬೇಕಾದುದು. ಶಾಂತಿ ದೀಕ್ಷೆಯನ್ನು ಕೈಕೊಂಡ-ವನಿಗೂ ಸಿಟ್ಟು ವಜ್ರಕವಚವಾಗಿರಬೇಕಾದುದು ಅಗತ್ಯ.

ಮಾತು ಮಥಿಸಿದಂದು ತತ್ವ ಮೂಡುವುದು, ಇಲ್ಲವೆ ಕೋಪ ಕನೆಗಟ್ಟುವುದು. ತತ್ವ ಬಾಳಿನ ಹಂತಸ್ನು ಮೇಲಕ್ಕೆತ್ತುವಲ್ಲಿ ನೆರವಾದರೆ ಕೋಪ ಇರವನ್ನೆ ಸುಟ್ಟು ಹಾಕುವುದಕ್ಕೆ ಸಜ್ಜಾಗಿರುತ್ತದೆ. ಸಿಟ್ಟು ದಾವಾನಲ. ಮರದ ತಿಕ್ಕಾಟದಿಂದುದ್ಭವಿಸಿದ ಕಿಚ್ಚು ಅರಣ್ಯಕ್ಕೆ ಅರಣ್ಯವನ್ನೇ ಭಸ್ಮೀಭೂತವನ್ನಾಗಿ ಮಾಡುವುದು. ಆದುದರಿಂದ ಮಾತಿನ ಕೊಡುಕೊಳ್ಳಿ ನಡೆದಾಗ ನೀನು 'ಅಹಂ'ಭಾವರಹಿತನಾಗಿರಬೇಕು. ನಿನ್ನದನ್ನೇ ನೀನು ನಡಸಬೇಕೆಂದಿದ್ದರೆ ಹಾಳು ಗೋಡೆಯ ಮರೆಗೆ ಬಂದು ನಿಂತ ಕತ್ತೆಗಳ ಮೇಲೂ, ಅಂಗಡಿಯ ಗುಮಾಸ್ತರ ಮೇಲೂ ನಡಸು.

ಸಿಟ್ಟು ಬಿರುಗಾಳಿಯ ಹಾಗೆ ಮಣ್ಣು ತೂರುತ್ತ ಬರುತ್ತದೆ ಅದರಿಂದ ಪ್ರಿಯ ಜನರ ಬಳಿ ಇರುವ ಪ್ರೇಮಪುಷ್ಪದ ಪಕಳೆಗಳು ಉದುರಿ ಬೀಳುತ್ತವೆ. ಸಿಟ್ಟು ಬರುವುದಾದರೆ ಮಂದಾನಿಲದ ಹಾಗೆ ಬರಲಿ. ಗುಡ್ಡಬೆಟ್ಟಗಳ ಮೇಲೆ ಹಾಯ್ದು, ಕೆರೆ ಕಾಲುವೆಗಳನ್ನು ದಾಟಿ, ತೋಂಟಪಟ್ಟಿಗಳನ್ನು ಸರಿಸಿ ಮುಂದಮುಂದವಾಗಿ ಬೀಸುತ್ತ ಬರಲಿ. ಸಜ್ಜೆ ಮನೆಯಲ್ಲಿ ನಿನ್ನಾಗಮನವನ್ನೇ ನೋಡುತ್ತ ನಿಂತಿರುವ ಮಡದಿ ನೀನು ಬರುವದೊಂದಿನಿತು ತಡವಾದಾಗ ತೋರುವಂತಹ ಮುನಿಸು ನಿನ್ನದಾಗಿರಲಿ. ಗಾಳಿ ಬೀಸಿದಾಗ 'ಬಂದನೇ ರಾಮು' ಎಂದು, ಗಾಳಿ ಬೀಸದಾಗ'ಬಾರನೇಕೆ ರಾಮು'ಎಂದು ಗಿಡಮರಗಳನ್ನು ಸುತ್ತಿ ಸುಳಿಯುವ ತಬರಿಯಂತಹ ಕೋಪ ನಿನ್ನದಾಗಿರಲಿ. ಮುನಿಸು ಊಟದಲ್ಲಿರುವ ಉಪ್ಪಿನಕಾಯಿಯ ಹಾಗಿರಬೇಕು.

ಸಿಟ್ಟಿನ ಅಭ್ಯಾಸವಿದ್ದವನು ಸಾಧನದಿಂದ ಅದನ್ನು ತಪ್ಪಿಸಿ ಕೊಳ್ಳಬೇಕು. ಸಿಟ್ಟು ಬಂದಾಗ ಬೆರಲು ಎಣಿಸುತ್ತ ನಿಲ್ಲಬೇಕು. ಇಲ್ಲವೆ ಅಂಕಿಗಳನ್ನು ಗುಣಿಸಿ ನೋಡು. ಕೋಪವು ಕೈ ಮೀರಿ ಹೋದ ದಿನ ಮೌನದಿಂದ ಊರ ಹೊರಗಿನ ಮರದಡಿಯಲ್ಲಿಯೋ, ದೇಗುಲದ ಮುಂಬದಿಯಲ್ಲಿಯೋ ಕುಳಿತು ಪ್ರಾಯಶ್ಚಿತ್ತ ಬೇಡಿಕೊಳ್ಳಬೇಕು. ಮೌನದ ಆರಾಧನೆಯಿಂದ ಕೋಪವು ದೂರವಾಗುತ್ತದೆ. ಏಕಾಂತದಲ್ಲಿ ವಿರಮಿಸಿ ಧ್ಯಾನರನಿತನಾದವನ ಮೇಲೆ ಯಾವಾಗಲೂ ದೇವನ ದಯೆಯಿರುವುದು.

ಇಂಧ್ರಿಯ ನಿಗ್ರಹವಿರಲಿ. ಮಾತ್ರಾಸ್ಪರ್ಶನವು ಕ್ಷಣಿಕವೆಂದೆಂಬ ಭಾವನೆಯಿರಲಿ. ಮಾತು ಮಿತವಾಗಿರಲಿ. ನಿಂದೆ ಹೊಗಳಿಕೆಯಿಂದ ನಿನ್ನ ಬಾಳು ದೂರವಾಗಿರಲಿ. ಆಗ ಅದೇ ಸುಖ, ಅದೇ ಚಿರನೂತನ ಶಾಂತಿಯೆಂದು ನಿನ್ನ ಪಾಲಿಗೆ ತೋರುವುದು.

ಕಲ್ಪನಾ ಗ್ರಂಥ ಮಾಲೆಯ ಯೋಜನೆ

ಸಂಪಾದಕರು :

ಹಿರೇಮಲ್ಲೂರ ಈಶ್ವರನ್, ಎಂ. ಎ.

ನಾಡಿನ ಬೌದ್ಧಿಕ ಮತ್ತು ಸಾಂಸ್ಕೃತಿಕ ಪ್ರಗತಿಯೆ ಕಲ್ಪನಾ ಗ್ರಂಥ ಮಾಲೆಯ ಗುರಿ. ಲಲಿತ ಸಾಹಿತ್ಯ, ಬೌದ್ಧಿಕ ಸಾಹಿತ್ಯ-ರಂಜನೆ ಬೋಧನೆ. ಜನಮನದ ವಿಕಾಸಕ್ಕಾಗಿ ಸಂಸ್ಕಾರಕ್ಕಾಗಿ ಯಾವ ಸಾಹಿತ್ಯವನ್ನೆಲ್ಲ ಒದವಿಸಬೇಕೊ ಅದನ್ನೆಲ್ಲ ಹುಡುಕಿ ತಂದು ‘ಕಲ್ಪನಾ’ದಲ್ಲಿ ಪ್ರಕಟಿಸುವ ಸಂಕಲ್ಪವಿದೆ.

ಕಲ್ಪನಾ ಪ್ರಕಟನೆಗಳ ವಿಸ್ತಾರದ ಹೊಳವು ಇನ್ನು ಮೇಲಿಂದ ತೀವ್ರವಾಗಿ ಕಾರ್ಯಾರಂಭಕ್ಕೆ ಬರಲಿದೆ. ಪ್ರಚಾರೋಪನ್ಯಾಸ ಮಾಲೆಯನ್ನು ಗ್ರಂಥಪ್ರಕಾಶನ ಸಮಿತಿಯು ಇಷ್ಟರಲ್ಲಿ ಕೈಕೊಂಡು ಭರದಿಂದ ಪುಸ್ತಕಗಳನ್ನು ಪ್ರಕಾಶನಗೊಳಿಸಲು ನಿರ್ಧರಿಸಿದೆ. ೫೦ರೂ. ಕೊಟ್ಟು ಸಹಾಯ್ಯಕರಾಗಿ, ೧೫೦ರೂ. ಕೊಟ್ಟು ಪೋಷಕರಾಗಿ, ೨೫೦ರೂ ಕೊಟ್ಟು ಆಶ್ರಯದಾತರಾಗಿ ಉದಾರ ಮತಿಗಳಾದ ಕನ್ನಡಿಗರು ಕನ್ನಡನಾಡಿನ ಹೆಮ್ಮೆಯು ಈ ಸುಂದರ ಗ್ರಂಥಮಾಲೆಗೆ ನೆರವಾಗಬೇಕೆಂದು ಬಿನ್ನಹ.

ಹೊಸ ವರುಷದಿಂದ ಚಂದಾ ಹಣದ ಮಿತಿ ಮಿಕ್ಕಿ ಪ್ರಕಟನೆಗಳನ್ನು ಹೊರಡಿಸುತ್ತಿರುವುದರಿಂದ ವಾರ್ಷಿಕ ವಂತಿಗೆ ಇಂದಿನಿಂದ ನಿಲ್ಲಿಸಿದೆ. ಸಹಾಯ್ಯಕರಿಗೆ ಐದು ವರುಷದವರೆಗಿನ ಪ್ರಕಟನೆಗಳನ್ನು, ಉಳಿದವರಿಗೆ ಮಾಲೆಯ ಎಲ್ಲ ಪ್ರಕಟನೆಗಳನ್ನು ಕೊಡಲಾಗುವುದು.

ನಮ್ಮ ಪ್ರಕಟನೆಗಳು ದೊರೆಯುವ ಸ್ಥಳಗಳು :

ಸಮಾಜ ಪುಸ್ತಕಾಲಯ, ಧಾರವಾಡ
ಮನೋಹರ ಗ್ರಂಥ ಭಾಂಡಾರ, ಧಾರವಾಡ
ಎಫ್. ಜಿ. ನೀರಲಕಟ್ಟಿ, ಧಾರವಾಡ
ಸಾಹಿತ್ಯ ಭಾಂಡಾರ, ಹುಬ್ಬಳ್ಳಿ
ಕನ್ನಡ ಪುಸ್ತಕಾಲಯ, ಬೆಳಗಾವಿ
ಸತ್ಯ ಶೋಧನ ಪುಸ್ತಕ ಭಾಂಡಾರ, ಕೋಟೆ, ಬೆಂಗಳೂರು
ವ್ಹಿ. ಆರ್. ಪ್ರಭು, ಕ್ಯಾನರಾ ಬುಕ್ ಸೆಲರ್ಸ, ಮುಂಬಯಿ

ಹರಾಪರ್ಣಗಳು

COVER PRINTED AT
NATIONAL PRINTERS
AND ADVERTISERS
BOMBAY 1